### ಅಧ್ಯಾಯ 2

# ಕ್ರಿಸ್ತನ ಸುವಾರ್ತೆಯ ಕುರಿತು ಪೌಲನ ಆತ್ಮಕಥಾ ರೂಪಕವಾದ ಪ್ರತಿವಾದ

## (ಭಾಗ 2)

2ನೇ ಅಧ್ಯಾಯದಲ್ಲಿ, ಪೌಲನು ತಾನು ಸಾರಿದ ಸುವಾರ್ತೆಯ ಪರವಾಗಿ ವಾದಿಸುವದನ್ನು ಮುಂದುವರೆಸುತ್ತಾನೆ. ಆತನು ಸುನ್ನತಿ ಮತ್ತು ರಕ್ಷಣೆಯ ವಿಷಯದಲ್ಲಿ ಪ್ರಕಟಿಸಲ್ಪಟ್ಟಿರುವದನ್ನು ದೃಢೀಕರಿಸಿಕೊಳ್ಳುವದಕ್ಕೆ ಆತನು ಹೇಗೆ ಯೆರೂಸಲೇಮಿನಲ್ಲಿದ್ದ ಸಭೆಯ ಮುಖ್ಯ ನಾಯಕರನ್ನು ಭೇಟಿಯಾಗಿದ್ದನೆಂಬುದರನ್ನು ಕುರಿತು 2:1-10ರಲ್ಲಿ ತಿಳಿಯಪಡಿಸುತ್ತಾನೆ. ಆತನು ಭೇಟಿಯ ಕುರಿತು ಮಾತಾಡಿದ ಬಳಿಕ ಅಂತಿಯೋಕ್ಯಕ್ಕೆ ಬಂದ ಪೇತ್ರನನ್ನು ಗದರಿಸಿದ್ದರ ಕುರಿತು 2:11-21ರಲ್ಲಿ ತಿಳಿಸುತ್ತಾನೆ, ತಾನು ಸತ್ಯವಾದ ಸುವಾರ್ತೆಯನ್ನು ಸಾರುತ್ತಿದ್ದನೆಂಬುದಕ್ಕೆ ಹೆಚ್ಚುವರಿ ಪುರಾವೆಗಳಾಗಿ ಎರಡು ಘಟನೆಗಳನ್ನು ಬಳಸುತ್ತಾನೆ.

### ಪೌಲನು ಯೆರೂಸಲೇಮಿನ ಸ್ತಂಭಗಳನ್ನು ಭೇಟಿಯಾದದ್ದು (2:1-10)

1ಹದಿನಾಲ್ಕು ವರುಷಗಳಾದ ಮೇಲೆ ನಾನು ತೀತನನ್ನು ಕರೆದುಕೊಂಡು ಬಾರ್ನಬನ
ಜೊತೆಯಲ್ಲಿ ತಿರಿಗಿ ಯೆರೂಸಲೇಮಿಗೆ ಹೋದೆನು. 2ದೈವಪ್ರೇರಣೆಗನುಸಾರವಾಗಿ ಹೋದೆನು.
ಅನ್ಯಜನರಲ್ಲಿ ನಾನು ಸಾರುವ ಸುವಾರ್ತೆಯು ಏನೆಂಬದನ್ನು ಅಲ್ಲಿದ್ದವರಿಗೆ ತಿಳಿಸಿದೆನು. ಆದರೆ
ನಾನು ಪಡುತ್ತಿರುವ ಪ್ರಯಾಸವಾಗಲಿ ಪಟ್ಟ ಪ್ರಯಾಸವಾಗಲಿ ನಿಷ್ಫಲವಾಗಬಾರದೆಂದು
ಮಾನಿಷ್ಠರಿಗೆ ಏಕಾಂತದಲ್ಲಿ ತಿಳಿಸಿದೆನು. 3ನನ್ನ ಜೊತೆಯಲ್ಲಿದ್ದ ತೀತನು ಗ್ರೀಕನಾಗಿದ್ದರೂ
ಅವನಿಗೆ ಸುನ್ನತಿಯಾಗಬೇಕೆಂದು ಯಾರೂ ಬಲಾತ್ಕಾರ ಮಾಡಲಿಲ್ಲ. 4ಸಭೆಗೆ ಕಳ್ಳತನದಿಂದ
ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ ಇದ್ದದರಿಂದ ಬಲಾತ್ಕಾರ ನಡೆದೀತೆಂಬ ಭಯವಿತ್ತು.
ಅವರು ನಮ್ಮನ್ನೂ ದಾಸತ್ವದೊಳಗೆ ಸಿಕ್ಕಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ
ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರಸಿಕೊಂಡು ಬಂದವರು. 5ಸುವಾರ್ತೆಯ
ಸತ್ಯಾರ್ಥವು ನಿಮ್ಮಲ್ಲಿ ಸ್ಥಿರವಾಗಿರಬೇಕೆಂದು ನಾವು ಅವರಿಗೆ ವಶವಾಗುವದಕ್ಕೆ ಒಂದು ಗಳಿಗೆ
ಹೊತ್ತಾದರೂ ಸಮ್ಮತಿಪಡಲಿಲ್ಲ. 6ಆದರೆ ಮಾನಿಷ್ಠರೆನಿಸಿಕೊಂಡವರಿಂದ ನನಗೇನೂ
ದೊರೆಯಲಿಲ್ಲ. ಅವರು ಹಿಂದಿನ ಕಾಲದಲ್ಲಿ ಎಂಥವರಾಗಿದ್ದರೋ ನನಗೆ ಲಕ್ಷ್ಯವಿಲ್ಲ. ದೇವರು
ಮುಖದಾಕ್ಷಿಣ್ಯ ಮಾಡುವವನಲ್ಲ. ಮಾನಿಷ್ಠರೆನಿಸಿಕೊಂಡವರು ನನ್ನ ಮಾತಿಗೆ ಒಪ್ಪಿದರೇ
ಹೊರತು ನನಗೇನೂ ಕಲಿಸಲಿಲ್ಲ. 7ಸುನ್ನತಿಯಾದವರಲ್ಲಿ ಅಪೊಸ್ತಲತನವನ್ನು
ನಡಿಸುವದಕ್ಕೋಸ್ಕರ ಪೇತ್ರನನ್ನು ಪ್ರೇರಿಸಿದಾತನು ಅನ್ಯಜನರಲ್ಲಿ ಅದನ್ನು ನಡಿಸುವದಕ್ಕೆ

**ನನ್ನನ್ನೂ ಪ್ರೇರಿಸಿದ್ದನು. [8]ಸುನ್ನತಿಯಾದವರಿಗೆ ಸುವಾರ್ತೆಯನ್ನು ಸಾರುವ ಕೆಲಸವು ಹೇಗೆ ಪೇತ್ರನಿಗೆ ಕೊಡಲ್ಪಟ್ಟಿತೋ ಹಾಗೆಯೇ ಸುನ್ನತಿಯಿಲ್ಲದವರಿಗೆ ಅದನ್ನು ಸಾರುವ ಕೆಲಸವು ನನಗೆ ಕೊಟ್ಟಿರುವದನ್ನು [9]ಸಭಾಸ್ತಂಭಗಳೆಂದು ಹೆಸರುಗೊಂಡಿರುವ ಯಾಕೋಬ ಕೇಫ ಯೋಹಾನರು ಕಂಡು ದೇವರು ನನಗೆ ದಯಪಾಲಿಸಿರುವ ವರವನ್ನು ತಿಳುಕೊಂಡು ಐಕ್ಯವನ್ನು ತೋರಿಸುವದಕ್ಕಾಗಿ ನನಗೂ ಬಾರ್ನಬನಿಗೂ ಬಲಗೈ ಕೊಟ್ಟು - ನೀವು ಅನ್ಯಜನರ ಬಳಿಗೆ ಹೋಗಿರಿ, ನಾವು ಸುನ್ನತಿಯವರ ಬಳಿಗೆ ಹೋಗುತ್ತೇವೆ ಅಂದರು. [10]ಆದರೆ ನೀವು ನಮ್ಮಲ್ಲಿರುವ ಬಡವರನ್ನು ಜ್ಞಾಪಕಮಾಡಿಕೊಳ್ಳಬೇಕೆಂಬ ಒಂದೇ ಸಂಗತಿಯನ್ನು ಬೇಡಿಕೊಂಡರು; ಇದನ್ನು ಮಾಡುವದರಲ್ಲಿ ನಾನೂ ಆಸಕ್ತನಾಗಿದ್ದೆನು.**

**ವಚನ 1.** ಈ ಹಂತದಲ್ಲಿ, ಘಟನೆಗಳ ಕಾಲಾನುಕ್ರಮದ ಸರಣಿಯು ನಮಗೆ ಕಷ್ಟಕರವಾಗುತ್ತದೆ. ಲೂಕನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಕೊಡುವ ಕಥನವನ್ನು ಇಲ್ಲಿ ಪೌಲನು ಕೊಡುವ ಕಥನದೊಂದಿಗೆ ಸಮನ್ವಯಗೊಳಿಸಲು ಒಂದು ಪ್ರಯತ್ನ ಮಾಡಲ್ಪಟ್ಟರೆ ಈ ಸಮಸ್ಯೆಯು ಉದ್ಭವವಾಗುತ್ತದೆ. ಸಮನ್ವಯಗೊಳಿಸುವದಕ್ಕೆ ವಿವಿಧ ಪ್ರಸ್ತಾಪಗಳನ್ನು ಮಾಡಲಾಗಿರುತ್ತದೆ. ನ್ಯಾಯಾಲಯದಲ್ಲಿ ಇಬ್ಬರು ಸಾಕ್ಷಿಗಳು ಹೇಳುವ ಪ್ರತಿಯೊಂದು ಮಾತು ನಿಖರವಾಗಿ ಒಮ್ಮತದಿಂದಿರುವದು ಹೇಗೆ ಅಗತ್ಯವಿಲ್ಲವೋ ಹಾಗೆಯೇ ಈ ಎರಡು ಕಥನಗಳು ಎಲ್ಲಾ ಅಂಶಗಳಲ್ಲಿಯೂ ಒಂದಕ್ಕೊಂದು ಒಪ್ಪಿಕೊಳ್ಳುವ ಅಗತ್ಯವಿರುವದಿಲ್ಲ. ಒಂದೇ ಘಟನೆಯನ್ನು ಪುನಃ ಹೇಳುತ್ತಿರುವ ಬೇರೆ ಬೇರೆ ಲೇಖಕರು (ಅಥವಾ ಸಾಕ್ಷಿಗಳು) ಅನೇಕ ಸಾರಿ ಬೇರೆ ಅಂಶದ ಮೇಲೆ ಒತ್ತು ಕೊಡುತ್ತಾರೆ ಯಾಕೆಂದರೆ ಅವರು ಪ್ರತಿಯೊಬ್ಬನು ತನ್ನ ಮನಸ್ಸಿನಲ್ಲಿ ಬೇರೆ ಉದ್ದೇಶವನ್ನು ಪೂರೈಸಲು ಅಪೇಕ್ಷಿಸುವವನಾಗಿದ್ದಾನೆ.

ಪೌಲನು ಹೀಗೆ ಬರೆದನು, **ಹದಿನಾಲ್ಕು ವರುಷಗಳಾದ ಮೇಲೆ ನಾನು ತೀತನನ್ನು ಕರೆದುಕೊಂಡು ಬಾರ್ನಬನ ಜೊತೆಯಲ್ಲಿ ತಿರಿಗಿ ಯೆರೂಸಲೇಮಿಗೆ ಹೋದೆನು**.[1] ಪೌಲನು ನೀಡುವ ಕಾಲಾನುಕ್ರಮದಲ್ಲಿನ ಒಂದು ಪ್ರಶ್ನೆಯು "ಹದಿನಾಲ್ಕು ವರುಷಗಳ"ನ್ನು ಎಣಿಸುವದಕ್ಕೆ ಆರಂಭಿಕ ಹಂತಕ್ಕೆ ಸಂಬಂಧಿಸಿರುತ್ತದೆ. ಪೌಲನು ದಮಸ್ಕದ ದಾರಿಯಲ್ಲಿ ತಾನು ಕ್ರಿಸ್ತನವನಾಗಿ ಪರಿವರ್ತನೆಗೊಂಡದ್ದರಿಂದ ಆರಂಭಿಸಿದನೋ (ಅಪೊಸ್ತಲರ ಕೃತ್ಯಗಳು 9:1–19a), ಅಥವಾ ಆತನು ತನ್ನ ಪರಿವರ್ತನೆಗೊಂಡು ಮೂರು ವರ್ಷಗಳಾದ ನಂತರ ಸಂಭವಿಸಿದ ಯೆರೂಸಲೇಮಿಗೆ ಮಾಡಿದ ಮೊದಲ ಪ್ರಯಾಣದಿಂದ ಆರಂಭಿಸಿದನೋ (1:18; ಅಪೊಸ್ತಲರ ಕೃತ್ಯಗಳು 9:26)? ಸಂದರ್ಭೋಚಿತವಾಗಿ, ಆತನ ಮೊದಲ ಭೇಟಿಯ ನಂತರದಲ್ಲಿ "ಹದಿನಾಲ್ಕು ವರುಷಗಳು" ಬರುತ್ತದೆ ಎಂದು ತೋರುವದು (1:18–24). ಹೇಗೂ, ಆತನ ಪರಿವರ್ತನೆಯ ನಂತರದಲ್ಲಿ "ಹದಿನಾಲ್ಕು ವರುಷಗಳು" (1:11–17) ಎಂಬುದು ಹೊಸ ಒಡಂಬಡಿಕೆಯಲ್ಲಿನ ಕಾಲಾನುಕ್ರಮದ ಘಟನೆಗಳಲ್ಲಿ ಸರಿಯಾಗಿ ಹೊಂದುತ್ತದೆ.

ಇನ್ನೊಂದು ಪ್ರಶ್ನೆಯು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಯೆರೂಸಲೇಮಿಗೆ ಮಾಡಿದ ಯಾವ ಪ್ರಯಾಣವನ್ನು 2:1ರಲ್ಲಿ ಉಲ್ಲೇಖಿಸಲಾಗುತ್ತಿದೆ ಎಂಬುದಕ್ಕೆ ಸಂಬಂಧ ಪಟ್ಟದ್ದಾಗಿದೆ. ಒಂದು ಅಭಿಪ್ರಾಯವು ಏನೆಂದರೆ ಅದು ಬರಗಾಲದ ಪರಿಹಾರದಲ್ಲಿ ಸಹಾಯ ಮಾಡುವದಕ್ಕೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವದಕ್ಕೆ ಮಾಡಿದ ಪ್ರಯಾಣವಾಗಿತ್ತು ಎಂಬುದೆ (ಅಪೊಸ್ತಲರ ಕೃತ್ಯಗಳು 11:27–30). ಇನ್ನೊಂದು ಪ್ರಮುಖವಾದ ಅಭಿಪ್ರಾಯವೇನೆಂದರೆ ಅದು ಯೆರೂಸಲೇಮಿನಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಳ್ಳುವದಕ್ಕೆ ಮಾಡಿದ ಪ್ರಯಾಣವಾಗಿತ್ತು ಎಂಬುದೆ (ಅಪೊಸ್ತಲರ ಕೃತ್ಯಗಳು 15:1–29). ಈ ಎರಡನೆಯ ಅಭಿಪ್ರಾಯದ ಸಮರ್ಥಕರು ವಾದಿಸುವದೇನೆಂದರೆ ಗಲಾತ್ಯ 2ನೇ ಅಧ್ಯಾಯದಲ್ಲಿ ಪೌಲನು

ಬರಗಾಲದ ಪರಿಹಾರಕ್ಕೋಸ್ಕರ ಯೆರೂಸಲೇಮಿಗೆ ನೀಡಿದ ಭೇಟಿಯ ಕುರಿತು ಹೇಳಲಿಲ್ಲ ಯಾಕೆಂದರೆ ಆತನ ದೈವಶಾಸ್ತ್ರೀಕ ಉದ್ದೇಶಗಳಿಗೆ ಅದು ಅಮುಖ್ಯವಾಗಿತ್ತು. (ನೋಡಿರಿ *ಹೆಚ್ಚಿನ ಅಧ್ಯಯನಕ್ಕಾಗಿ: ಗಲಾತ್ಯ 2:1ರಲ್ಲಿ ಯೆರೂಸಲೇಮಿಗೆ ಮಾಡಿದ ಪ್ರಯಾಣವು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ಯಾವ ಪ್ರಯಾಣವನ್ನು ಸೂಚಿಸುತ್ತದೆ?* 106ನೇ ಪುಟದಲ್ಲಿ ಆರಂಭಗೊಳ್ಳುತ್ತದೆ).

2:1ರಲ್ಲಿ ಪ್ರಸ್ತಾಪಿಸಲಾಗಿರುವ ಪ್ರಯಾಣದಲ್ಲಿ, ಪೌಲನು ತನ್ನೊಂದಿಗೆ **ಬಾರ್ನಬನನ್ನು** ಕರೆದುಕೊಂಡು ಹೋಗಿದ್ದನು. ಬಾರ್ನಬನು ಒಬ್ಬ ಯೆಹೂದಿ ಕ್ರೈಸ್ತನಾಗಿದ್ದು ಅನ್ಯಜನರಿಗೆ ಸುವಾರ್ತೆ ಸಾರುವದರಲ್ಲಿ ಪೌಲನ ಸಂಗಡ ಸೇವೆ ಮಾಡಿದನು.[2] ಆತನು ಅಪೊಸ್ತಲರ ಕೃತ್ಯಗಳು 11:30 ಮತ್ತು 15:2ರಲ್ಲಿ ಪೌಲನು ಯೆರೂಸಲೇಮಿಗೆ ಮಾಡಿದ ಪ್ರಯಾಣಗಳಲ್ಲಿ ಆತನ ಜೊತೆಯಲ್ಲಿದ್ದನು. ಇಲ್ಲಿ ಬಾರ್ನಬನ ಹೆಸರನ್ನು ಪ್ರಸ್ತಾಪಿಸುವದು ದಕ್ಷಿಣ ಗಲಾತ್ಯ ಊಹೆಯ ಪರವಾಗಿ ವಾದಿಸುವದಾಘಿರುತ್ತದೆ, ಯಾಕೆಂದರೆ ಬಾರ್ನಬನು ಪೌಲನ ಸಂಗಡ ಆತನ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಪ್ರಯಾಣಿಸಿದ್ದನು, ಒಟ್ಟಾಗಿ ಗಲಾತ್ಯದ ದಕ್ಷಿಣ ಪ್ರಾಂತ್ಯದಲ್ಲಿ ಸಭೆಗಳನ್ನು ಸ್ಥಾಪಿಸಿದ್ದನು (ಅಪೊಸ್ತಲರ ಕೃತ್ಯಗಳು 13; 14). ಗಲಾತ್ಯದಲ್ಲಿನ ವಿಶ್ವಾಸಿಗಳು ಬಾರ್ನಬನ ಪರಿಚಿತಿಯನ್ನು ಹೊಂದಿದ್ದಿರಬಹುದಾಗಿದೆ. ಹೇಗೂ, ಪೌಲ ಮತ್ತು ಬಾರ್ನಬರು ಎರಡನೆಯ ಸುವಾರ್ತಾ ಪ್ರಯಾಣದಲ್ಲಿ ಬೇರೆ ಬೇರೆ ದಾರಿಗಳಲ್ಲಿ ಸಾಗಿದರು ಯಾಕೆಂದರೆ ಅವರಲ್ಲಿ ಮಾರ್ಕನ ಕುರಿತು ಭಿನ್ನಾಭಿಪ್ರಾಯಗಳು ಉಂಟಾಗಿದ್ದವು (ಅಪೊಸ್ತಲರ ಕೃತ್ಯಗಳು 15:36-41). ಬಾರ್ನಬನು ಎಂದಾದರೂ ಉತ್ತರ ಗಲಾತ್ಯದ ಕ್ಷೇತ್ರದಲ್ಲಿ ಸೇವೆಯನ್ನು ಮಾಡಿರುವನೆಂಬುದರ ಕುರಿತು ಅಪೊಸ್ತಲರ ಕೃತ್ಯಗಳು ಪುಸ್ತಕವು ಯಾವ ಪುರಾವೆಯನ್ನೂ ನೀಡುವದಿಲ್ಲ.

ಅಲ್ಲದೆ ಪೌಲನು ತನ್ನ ಜೊತೆಯಲ್ಲಿ **ತೀತನನ್ನು** ಸಹ ಯೆರೂಸಲೇಮಿಗೆ ಕರೆದುಕೊಂಡು ಹೋದನು. ಈ ಮನುಷ್ಯನು ಒಬ್ಬ ಅನ್ಯಜನಾಂಗದ ಕ್ರೈಸ್ತನಾಗಿದ್ದು, ಒಬ್ಬ ಸಕ್ರಿಯ ಮಿಶನರಿಯಾಗಿದ್ದನು, ಮತ್ತು ಪೌಲನ ಆಪ್ತ ಮಿತ್ರನಾಗಿದ್ದನು.[3] ತೀತನ ಕುರಿತಾಗಿರುವ ಒಂದು ವಿವರಿಸಲಾಗದ ವಾಸ್ತವಾಂಶವೆಂದರೆ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಆತನನ್ನು ಹೆಸರಿಸಿ ಪ್ರಸ್ತಾಪಿಸಲಾಗಿರುವದಿಲ್ಲ ಎಂಬುದೆ. ಬಾರ್ನಬ ಮತ್ತು ತೀತರು ಮುಂದಿನ ವಚನಗಳಲ್ಲಿ ಬಣ್ಣಿಸಲಾಗಿರುವ ಖಾಸಗಿ ಮಾತುಕತೆಯಲ್ಲಿ ಪೌಲನ "ಇಬ್ಬರು ಸಾಕ್ಷಿಗಳಾಗಿ" ಇದ್ದರು.[4]

**ವಚನ 2.** ಪೌಲನು ಯೆರೂಸಲೇಮಿಗೆ **ದೈವಪ್ರೇರಣೆಗನುಸಾರವಾಗಿ ಹೋದೆನು** ಎಂದು ಹೇಳುವ ವೇಳೆ, ಆತನು ಯಾವ ವಿಧವಾದ ಪ್ರಕಟನೆ (ἀποκάλυψις, *apokalupsis*) ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುವದಿಲ್ಲ. ಹಲವಾರು ಸಾಧ್ಯತೆಗಳಿರುತ್ತವೆ: (1) ಆತನು ತನ್ನ ಅಪೊಸ್ತಲಿಕ ಬದುಕಿನಲ್ಲೆಲ್ಲಾ ಪಡೆದುಕೊಂಡ ಹಲವಾರು ಪ್ರಕಟನೆಗಳಂತೆಯೇ, ಈ ವೇಳೆ ನೇರವಾದ ದರ್ಶನವನ್ನು ದೇವರಿಂದ ಪಡೆದನು (ಅಪೊಸ್ತಲರ ಕೃತ್ಯಗಳು 9:3-7; 16:9; 18:9, 10; 23:11). (2) ಪ್ರಕಟನೆಯು ಬೇರೆ ದಾರಿಯಲ್ಲಿ ಪವಿತ್ರಾತ್ಮನ ಮುಖಾಂತರ ಬಂದಿತ್ತು (ಅಪೊಸ್ತಲರ ಕೃತ್ಯಗಳು 13:1, 2; 16:6, 7; 20:22, 23; 21:4). (3) ಆತನ ಸಂಗಡ ಒಬ್ಬ ದೇವದೂತನು ಮಾತಾಡಿದನು (ಅಪೊಸ್ತಲರ ಕೃತ್ಯಗಳು 27:23, 24). (4) ಅಗಬನಂತಹ ಪ್ರವಾದಿಯೊಬ್ಬನು ಪೌಲನಿಗೆ ಅದನ್ನು ಕೊಟ್ಟನು (ಅಪೊಸ್ತಲರ ಕೃತ್ಯಗಳು 11:27, 28; 21:10, 11). ಇಲ್ಲಿ ಮುಖ್ಯವಾಗಿರುವ ಅಂಶವು ಏನೆಂದರೆ ದೇವರು ಕರೆದ ನಿಮಿತ್ತವಾಗಿ ಪೌಲನು ಈ ಪ್ರವಾಸವನ್ನು ಮಾಡಿದನೇ ಹೊರತು, ಆತನನ್ನು ಅಲ್ಲಿನ ಸಭೆಯ ನಾಯಕರು ಬರುವಂತೆ ಹೇಳಿ ಕಳುಹಿಸಿದ್ದರಿಂದಲ್ಲ.

ಪೌಲನು ಯೆರೂಸಲೇಮಿನಲ್ಲಿರುವ ವೇಳೆ, ಆತನು **ಅನ್ಯಜನರಲ್ಲಿ ನಾನು ಸಾರುವ ಸುವಾರ್ತೆಯು ಏನೆಂಬದನ್ನು ಅಲ್ಲಿದ್ದವರಿಗೆ ತಿಳಿಸಿದನು**. ಆತನು ತಾನು ಪರಿವರ್ತನೆಗೊಂಡ ಸಮಯದಿಂದ ಸಾರುತ್ತಿದ್ದ ಸುವಾರ್ತೆಯು ಇದೇ ಆಗಿತ್ತು, ಗಲಾತ್ಯದಲ್ಲಿದ್ದ ಕ್ರೈಸ್ತರು ಪಡೆದುಕೊಂಡಿದ್ದ ಸುವಾರ್ತೆಯೇ ಆಗಿತ್ತು (1:6-9). ಈ ಸಂದೇಶದ ಹೃದಯಭಾಗವು ಯೇಸು ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳೇ ಆಗಿದ್ದವು (1:1, 4; 3:1; 1 ಕೊರಿಂಥ 15:3, 4). ಆತನು ಈ ಸುವಾರ್ತೆಯನ್ನು ಇಸ್ರಾಯೇಲಿನ ಹೊರಗಡೆಯಲ್ಲಿ ಕನಿಷ್ಠ ಹದಿನಾಲ್ಕು ವರ್ಷಗಳಿಂದಲೂ ಸಾರುತ್ತಿದ್ದನು (2:1).

ಪೌಲನು ತಾನು ಸಾರಿದ ಸುವಾರ್ತೆಯು ಏನೆಂಬುದನ್ನು **ಮಾನಿಷ್ಠರಿಗೆ ಏಕಾಂತದಲ್ಲಿ ತಿಳಿಸಿದೆನು** ಎಂದು ಹೇಳುತ್ತಾನೆ. ಕೆಲವರು ಇದನ್ನು ಪೌಲ ಹಾಗೂ ಬಾರ್ನಬರು ಬರಗಾಲದ ಪರಿಹಾರಗಳನ್ನು ತೆಗೆದುಕೊಂಡು ಯೆರೂಸಲೇಮಿಗೆ ಪ್ರಯಾಣ ಮಾಡಿದ್ದರೆಂದು ಗುರುತಿಸುವದಕ್ಕೆ ಪುರಾವೆಯಾಗಿ ಬಳಸುತ್ತಾರೆ (ಅಪೊಸ್ತಲರ ಕೃತ್ಯಗಳು 11:29, 30), ಯಾಕೆಂದರೆ ಯೆರೂಸಲೇಮಿನಲ್ಲಿ ನಡೆದ ಸಮಾಲೋಚನಾ ಸಭೆಯು ಸಾರ್ವಜನಿಕ ಪ್ರಕೃತಿಯದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 15:1-29). ಖಂಡಿತವಾಗಿಯೂ, ಏಕಾಂತದ ಮಾತುಕತೆಯ ಬಳಿಕ ಅಪೊಸ್ತಲರ ಕೃತ್ಯಗಳು 15ರಲ್ಲಿ ಲೂಕನು ಬಣ್ಣಿಸಿರುವ ಸಭೆಯು ನಡೆದಿರುವ ಸಾಧ್ಯತೆಯಿರುತ್ತದೆ.

"ಮಾನಿಷ್ಠರಿಗೆ" ಎಂಬುದು ಯೆರೂಸಲೇಮಿನ ಸಭೆಯಲ್ಲಿ ಬಹಳವಾಗಿ ಗೌರವಿಸಲ್ಪಡುತ್ತಿದ್ದ, ವಿಶೇಷವಾಗಿ ಪೌಲನ ವಿರೋಧಿಗಳಿಂದ ಗೌರವಿಸಲ್ಪಡುತ್ತಿದ್ದ ನಾಯಕರನ್ನು ಸೂಚಿಸುತ್ತಿರಬಹುದಾಗಿದೆ (2:6, 9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). οἱ δοκοῦντες (*hoi dokountes*)[5] ಎಂಬ ಗ್ರೀಕ್ ಪದವು ಒಂದು ಸಮುದಾಯದಲ್ಲಿ ಬಹಳ ಗೌರವಿಸಲ್ಪಡುತ್ತಿದ್ದವರನ್ನು ಗುರುತಿಸುವದಕ್ಕೆ Josephus'ನ ಬರಹಗಳಲ್ಲಿ ಐದು ಸಾರಿ ಕಾಣಿಸಿಕೊಳ್ಳುತ್ತದೆ.[6] J. B. Lightfootನು ನಂಬಿದ್ದೇನೆಂದರೆ ಪೌಲನು, 2 ಕೊರಿಂಥ 11:5 ಮತ್ತು 12:11ರಲ್ಲಿ "ಅತಿಶ್ರೇಷ್ಠರಾದ ಅಪೊಸ್ತಲರು" (ಅಥವಾ "ಅತ್ಯುತ್ಕೃಷ್ಟ ಅಪೊಸ್ತಲರು"; NIV) ಕರೆಯುವ ವೇಳೆ ಈ ಪದವನ್ನು ವ್ಯಂಗವಾಗಿ ಬಳಸುತ್ತಿದ್ದಾನೆ.[7] ಇಲ್ಲಿ ವ್ಯಂಗವು ಬಳಸಲ್ಪಟ್ಟಿರುವದಾದರೆ, ಅದು ಈ ವ್ಯಕ್ತಿಗಳನ್ನು ಮೇಲಕ್ಕೆರಿಸಿದ್ದ ಯೆಹೂದಿಕರಣ ಮಾಡುವವರನ್ನು ಗದರಿಸುವದಕ್ಕಾಗಿ ಆಗಿತ್ತು; ಆ ಭಾಷೆಯನ್ನು ಖಂಡಿತವಾಗಿಯೂ ಈ ವ್ಯಕ್ತಿಗಳ ಕಡೆಗೆ ಮಾಡಿದ ವೈಯಕ್ತಿಕ ತಾತ್ಸಾರದ ನುಡಿಯಾಗಿರಲಿಲ್ಲ.

ಪೌಲನು ತಾನು **ಪಡುತ್ತಿರುವ ಪ್ರಯಾಸವಾಗಲಿ ಪಟ್ಟ ಪ್ರಯಾಸವಾಗಲಿ ನಿಷ್ಫಲವಾಗಬಾರದೆಂದು** ಆತನು ಸಾರುತ್ತಿದ್ದ ಸುವಾರ್ತೆಯು ಎಂಥದೆಂದು ಈ ವ್ಯಕ್ತಿಗಳಿಗೆ ತಿಳಿಸಿದನು. ಆತನು ಇಷ್ಟೊಂದು ವರ್ಷಗಳ ಕಾಲ ಸಾರಿದ್ದ ಸುವಾರ್ತೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿದನು ಎಂಬುದು ಇದರ ಅರ್ಥವೋ? ಈ ವಿಚಾರವು 1:6-9ರಲ್ಲಿ ಒಂದೇ ಸತ್ಯ ಸುವಾರ್ತೆಯ ವಿಷಯದಲ್ಲಿ ಪೌಲನು ನೀಡಿದ ಹೇಳಿಕೆಯನ್ನು ದೃಷ್ಟಿಯಿಟ್ಟುಕೊಂಡರೆ ತಾರ್ಕಿಕವಲ್ಲವೆಂದು ತೋರುತ್ತದೆ. ಹಾಗಾದರೆ, ಈ ಮಾತುಗಳಿಂದ ಆತನ ತಾತ್ಪರ್ಯವು ಏನಾಗಿತ್ತು?

ಪೌಲನು ಅನ್ಯಜನರಿಗೋಸ್ಕರ ಅಪೊಸ್ತಲತ್ವವನ್ನು ಪಡೆದದ್ದು ಬೇರೆ ಅಪೊಸ್ತಲರ ಮೇಲೆ ಆಧಾರವಾಗಿರಲಿಲ್ಲ ಮತ್ತು ಅವರು ಆತನ ಬೋಧನೆಯ ಕುರಿತು ಏನೆಂದುಕೊಂಡಿದ್ದರು ಎಂಬುದನ್ನು ಆಧರಿಸಿರಲಿಲ್ಲ (1:11, 12). ಹಾಗಿದ್ದರೂ, ತಮ್ಮ ಸಾಕ್ಷಿ ಹಾಗೂ ಸಿದ್ಧಾಂತದಲ್ಲಿ ಎಲ್ಲಾ ಅಪೊಸ್ತಲರಲ್ಲಿಯೂ ಐಕ್ಯತೆಯಿರತಕ್ಕದ್ದೆಂದು ಆತನು ಗ್ರಹಿಸಿಕೊಂಡನು. ಇಲ್ಲವಾದರೆ,

ಯೆಹೂದ್ಯರಿಗಾಗಿ ಒಂದು ಸುವಾರ್ತೆ ಮತ್ತು ಅನ್ಯಜನರಿಗಾಗಿ ಮತ್ತೊಂದು ಸುವಾರ್ತೆಯಿದ್ದಲ್ಲಿ ಘರ್ಷಣೆಯು ಉಂಟಾಗಿರಬಹುದಿತ್ತು. ಇದು ಗುಂಪುಗಾರಿಕೆಯನ್ನುಂಟು ಮಾಡಿರಬಹುದಿತ್ತು ಮತ್ತು ನಂಬಿಕೆ ಹಾಗೂ ಕ್ರಿಸ್ತನ ಸಭೆಯಂತಹ ಸಾರಭೂತವಾದ ಅಂಶಗಳನ್ನು ರಾಜಿ ಮಾಡಿಕೊಂಡಿರುತ್ತಿತ್ತು (ನೋಡಿರಿ 3:28). ಕರ್ತನ ದೇಹವು ಯೆಹೂದಿ ಸಭೆ ಮತ್ತು ಅನ್ಯಜನರ ಸಭೆ ಎಂದು ಇಬ್ಭಾಗವಾಗುವದನ್ನು ನೋಡುವದಕ್ಕೆ ಅಪೊಸ್ತಲನು ಇಷ್ಟ ಪಡಲಿಲ್ಲ.

ಪೇತ್ರ ಮತ್ತು ಯೆರೂಸಲೇಮಿನಲ್ಲಿದ್ದ ಸಭೆಯವರು ಅನ್ಯಜನರೊಂದಿಗೆ ಒಂದು ನಿರ್ಬಂಧಿಸದ ಅನ್ಯೋನ್ಯತೆಯನ್ನಿಟ್ಟುಕೊಳ್ಳುವ ಪದ್ಧತಿಯ ಭಾವನೆಯನ್ನು ಸಂಪೂರ್ಣವಾಗಿ ಗ್ರಹಿಸಿಕೊಂಡಿರಲಿಲ್ಲ (1:11, 12). ಕರ್ತನು ಎಲ್ಲಾ ಜನಾಂಗಗಳಿಗೋಸ್ಕರ ಸುವಾರ್ತೆಯನ್ನು ಸಾರಬೇಕೆಂಬುದಕ್ಕಾಗಿ ಕೊಟ್ಟಿದ್ದನು (ಮತ್ತಾಯ 28:18-20; ಮಾರ್ಕ 16:15, 16; ಲೂಕ 24:47) ಎಂಬುದರ ಬಗ್ಗೆ ಸಂಪೂರ್ಣ ಮನವರಿಕೆಗೊಳ್ಳಲು ಪೇತ್ರನಿಗೆ ಒಂದು ವಿಶೇಷ ದರ್ಶನದ ಅಗತ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 10; 11) ಮತ್ತು ಅಪೊಸ್ತಲರು ಹಾಗೂ ಯೆರೂಸಲೇಮಿನ ಹಿರಿಯರಿಗಾಗಿ ವಿಶೇಷ ಕೂಟದ ಅಗತ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 15:1-29). ಪೌಲನಿಗೆ ಆರಂಭದಿಂದಲೇ ಸ್ಪಷ್ಟವಾಗಿದ್ದ ಸಂದೇಶವನ್ನು ಅಂತಿಮವಾಗಿ ಅವರು ಅರ್ಥಮಾಡಿಕೊಂಡರೆಂದು ಕಾಣಿಸುತ್ತದೆ. ಹೇಗೂ, ಅನೇಕ ಯೆಹೂದ್ಯ ಕ್ರೈಸ್ತರಿಗಾದರೋ, ಸಭೆಯೊಳಗೆ ಅನ್ಯಜನರನ್ನು ಒಂದುಗೂಡಿಸಿಕೊಳ್ಳುವದು ಮುಂಬರುವ ಅನೇಕ ವರ್ಷಗಳ ಕಾಲ ಒಂದು ಸಮಸ್ಯೆಯಾಗಿಯೇ ಉಳಿದಿತ್ತು. ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯು ಉದ್ಭವವಾಗಿದ್ದ ಸಮಸ್ಯೆಗೆ ಸ್ಪರ್ಶಯೋಗ್ಯ ಪುರಾವೆಯಾಗಿತ್ತು.

ಯೆಹೂದಿ-ಅನ್ಯಜನರ ಕಲಹವು ಮೊದಲ ಶತಮಾನದ ಮಧ್ಯಭಾಗದಲ್ಲಿ ಸಭೆಯು ಎದುರಿಸುತ್ತಿದ್ದ ಅತ್ಯಂಥ ಗಂಭೀರವಾದ ಸವಾಲು ಆಗಿತ್ತು. ಅದು ಇಡೀ ಸಭೆಗಳನ್ನೇ ನಾಶ ಮಾಡುವ ಸಾಧ್ಯತೆಯಿತ್ತು, ಅವುಗಳಲ್ಲಿ ಅನೇಕ ಸಭೆಗಳನ್ನು ಸ್ಥಾಪಿಸುವದಕ್ಕೋಸ್ಕರ ಪೌಲನು ಎಡೆಬಿಡದೆ ಶ್ರಮಿಸಿದ್ದನು. ತಾನು ಯಾವ ಮಿಶನರಿ ಧ್ಯೇಯಗಳಿಗೋಸ್ಕರ ಬಹಳವಾಗಿ ಶ್ರಮೆಯನ್ನು ಅನುಭವಿಸಿದ್ದನೋ ಆ ಕಾರ್ಯಗಳು "ವ್ಯರ್ಥ . . ." ಆಗುವದು ಆತನಿಗೆ ಇಷ್ಟವಿರಲಿಲ್ಲ (ಫಿಲಿಪ್ಪಿ 2:16; 1 ಥೆಸಲೋನಿಕ 3:5; ನೋಡಿರಿ 1 ಕೊರಿಂಥ 15:58; 2 ಕೊರಿಂಥ 6:1). ಪೌಲನು ತನ್ನ ಸೇವೆ ಮಾತ್ರವಲ್ಲದೆ ತನ್ನ ಕ್ರೈಸ್ತ ಜೀವಿತದ ವೈಶಿಷ್ಟ್ಯತೆಯ ಕುರಿತಾಗಿ ಅನೇಕ ಸಾರಿ ಗ್ರೀಕ್ ಕ್ರೀಡೆಗಳ "ಓಟ"ದಂತಹ ಸ್ಪರ್ದೆಯ ಸಾದೃಶ್ಯವನ್ನ ಬಳಸಿದನು (5:7; 1 ಕೊರಿಂಥ 9:24-27; ಫಿಲಿಪ್ಪಿ 3:14; 2 ತಿಮೊಥೆ 2:5; 4:7, 8).

ಪೌಲನ ಸಾಕ್ಷಿಯು ಆತನು ದಮಸ್ಕದ ದಾರಿಯಲ್ಲಿ ಪುನರುತ್ಥಾನಗೊಂಡ ಕ್ರಿಸ್ತನ ದರ್ಶನ ಮಾಡುವದರೊಂದಿಗೆ ಪೂರ್ಣ ಪ್ರಮಾಣೀಕೃತವಾಗಿತ್ತಾದರೂ, ಅನ್ಯಜನಾಂಗದವರಿಗಾಗಿ ಮಾಡುವ ಸೇವಾಧ್ಯೇಯದ ಕುರಿತು ಅವರವರಿಗಿರುವ ತಿಳುವಳಿಕೆಯಲ್ಲಿ ತಾನು, ಇತರ ಅಪೊಸ್ತಲರು, ಮತ್ತು ಯೆರೂಸಲೇಮಿನಲ್ಲಿದ್ದ ಹಿರಿಯರು ಒಮ್ಮತ ಹೊಂದಿರುವಂತೆ ನಿಶ್ಚಯಪಡಿಸಿಕೊಳ್ಳಬೇಕೆಂದು ಬಯಸಿದ್ದನು. ಸಭೆಯು ಆಚಾರದಲ್ಲಿ ಐಕ್ಯವಾಗಿರುವಂತೆ ಮತ್ತು ಆ ಮೂಲಕ ಲೋಕದ ದೃಷ್ಟಿಯಲ್ಲಿ ಒಗ್ಗಟ್ಟಿನಿಂದ ಇರುವಂತಾಗುವ ಹಾಗೆ ಸಭೆಯಲ್ಲಿ ಬಿರುಕು ಉಂಟಾಗದಂತೆ ನೋಡಿಕೊಳ್ಳಬೇಕೆಂಬ ಮನವರಿಕೆಯನ್ನು ಆತನು ಹೊಂದಿದ್ದನು (ಯೋಹಾನ 17:11, 20, 21).

**ವಚನ 3.** ಪೌಲನು ಯೆರೂಸಲೇಮಿನಲ್ಲಿದ್ದ ನಾಯಕರನ್ನು ಭೇಟಿಯಾಗುತ್ತಿರುವ ವೇಳೆ, ಆತನ ಜೊತೆಗೆಲಸದವನಾದ **ತೀತನು** ಆತನ ಸಂಗಡವಿದ್ದನು, ಅವನಿಗೆ **ಸುನ್ನತಿಯಾಗಬೇಕೆಂದು ಯಾರೂ ಬಲತ್ಕಾರಮಾಡಲಿಲ್ಲ**. ಸುನ್ನತಿಯ ಕುರಿತು ಇದು ಮೊದಲ

ಸಾರಿ ಪ್ರಸ್ತಾಪಿಸುವಿಕೆಯಾಗಿದೆ, ಇದು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ವ್ಯಾಜ್ಯದ ಪ್ರಮುಖ ಅಂಶವಾಗಿರುತ್ತದೆ. ಅಪೊಸ್ತಲನು ವಿಷಯವನ್ನು ದೃಷ್ಟಾಂತಪಡಿಸುವದಕ್ಕೆ ತನ್ನ ಜೊತೆಗೆಲಸದವನ ಉದಾಹರಣೆಯನ್ನು ಬಳಸಿದನು. ಯೆರೂಸಲೇಮಿನಲ್ಲಿ ನಾಯಕರೆಂದು ಪರಿಗಣಿಸಲ್ಪಟ್ಟಿರುವವರು ತೀತನಿಗೆ ಸುನ್ನತಿಯಾಗಬೇಕೆಂದು ಕೇಳಲಿಲ್ಲ. ಒಬ್ಬ ಅನ್ಯಜನಾಂಗದ ಕ್ರೈಸ್ತನಾಗಿ, ಅಬ್ರಹಾಮನ ಕಾಲದಿಂದ (ಆದಿಕಾಂಡ 17:9-14, 23-27), ಯೆಹೂದ್ಯರಿಗೆ ಎರಡು ಸಹಸ್ರ ವರ್ಷಗಳಿಂದಲೂ ಮಹತ್ವಪೂರ್ಣವಾಗಿದ್ದ ಶಸ್ತ್ರಚಿಕಿತ್ಸೆಯ ಪ್ರಕ್ರಿಯೆಯನ್ನು ಹಾದು ಹೋಗುವದಕ್ಕೆ ಆತನಿಗೆ ಯಾವ ಕಾರಣವೂ ಇರಲಿಲ್ಲ.

ತೀತನನ್ನು ಬಣ್ಣಿಸಲು ಬಳಸಲಾಗಿರುವ **ಗ್ರೀಕನಾಗಿದ್ದರೂ** (Ἕλλην, *Hellēn*) ಎಂಬ ಪದವು ಗ್ರೀಕ್ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರುವ ಅನ್ಯಜನಾಂಗದವನೊಬ್ಬನನ್ನು ಸೂಚಿಸುತ್ತದೆ (ರೋಮಾ 1:16; 2:9, 10). ಅದು Ἑλληνιστής (*Hellēnistēs*) ಎಂಬ ಪದಕ್ಕೆ ತದ್ವಿರುದ್ಧವಾಗಿರುತ್ತದೆ, ಇದು ಗ್ರೀಕ್ ಭಾಷೆಯನ್ನಾಡುವ ಯೆಹೂದ್ಯನನ್ನು ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 6:1; 9:29).

ತೀತನ ವಿಷಯದಲ್ಲಿ ಪೌಲನ ದೃಷ್ಟಿಕೋನವು ಅಪೊಸ್ತಲರ ಕೃತ್ಯಗಳು 16:1-3ರಲ್ಲಿ ಲೂಕನು ವಿವರಿಸುವ ಪರಿಸ್ಥಿತಿಗೆ ವಿರುದ್ಧವಾಗಿರುವಂತೆ ಕಾಣಿಸುತ್ತದೆ, ಅದರಲ್ಲಿ, ಪೌಲನ ಮತ್ತೊಬ್ಬ ಪ್ರಯೋಜನಕಾರಿ ಜೊತೆಗೆಲಸದವನಾದ ತಿಮೊಥೆಯನಿಗೆ ಪೌಲನು ಸುನ್ನತಿ ಮಾಡಿಸಿದನು. ಹೇಗೂ, ಆ ಕಾರ್ಯವು ಔಚಿತ್ಯವಾಗಿತ್ತು, ಯಾಕೆಂದರೆ ತಿಮೊಥೆಯ ತಾಯಿ ಒಬ್ಬ ಯೆಹೂದ್ಯಳಾಗಿದ್ದಳು ಮತ್ತು ಆತನ ತಂದೆ ಗ್ರೀಕನಾಗಿದ್ದನು. ಆತನ ತಂದೆಯು ಅನ್ಯಜನಾಂಗದವನಾಗಿದ್ದ ಕಾರಣ, ತಿಮೊಥೆಯು ಎಂದಿಗೂ ಸುನ್ನತಿಯನ್ನು ಮಾಡಿಸಿಕೊಂಡಿರಲಿಲ್ಲ. ಈ ಯುವಕನು ಸುನ್ನತಿ ಮಾಡಿಸಿಕೊಳ್ಳಲು ಒಪ್ಪಿಸಿಕೊಂಡರೆ ಸುವಾರ್ತಾಸೇವೆಯ ಕೆಲಸದಲ್ಲಿ ಅವರನ್ನು ಉತ್ತಮ ಸ್ವಾಗತ ಸಿಕ್ಕುವದೆಂದು ಪೌಲನು ನಂಬಿದ್ದನು. ಇನ್ನೊಂದೆಡೆ, ತೀತನಿಗೆ ಯಾವದೇ ಯೆಹೂದಿ ಬೇರುಗಳಿರಲಿಲ್ಲ, ಆದ್ದರಿಂದ ಸುನ್ನತಿ ಮಾಡಿಸಿಕೊಳ್ಳಲು ಯಾವದೇ ನ್ಯಾಯಬದ್ಧ ಕಾರಣವೂ ಇರಲಿಲ್ಲ. ತಿಮೊಥೆಯನು ಮಾಡಿಸಿಕೊಂಡ ಸುನ್ನತಿಗೂ ಆತನ ನಿತ್ಯ ರಕ್ಷಣೆಗೂ ಯಾವ ಸಂಬಂಧವೂ ಇರಲಿಲ್ಲ.

**ವಚನ 4.** ಪೌಲನು ಇಡೀ ವಿವಾದಕ್ಕೆ **ಸುಳ್ಳು ಸಹೋದರರು** ಕಾರಣವಾಗಲಿದ್ದರೆಂದು ಹೇಳುತ್ತಾನೆ, ಅದು ಯೆಹೂದಿಕರಣ ಮಾಡುವವರನ್ನು ಸೂಚಿಸುವ ಬಿರುದು (2 ಕೊರಿಂಥ 11:26). ಈ ವ್ಯಕ್ತಿಗಳು ಫರಿಸಾಯರ ಪಂಥದಲ್ಲಿ ತಮ್ಮ ಬೇರುಗಳನ್ನು ಹೊಂದಿದ್ದವರಾಗಿದ್ದು, ಅನ್ಯಜನರು ರಕ್ಷಣೆ ಹೊಂದಬೇಕಾದರೆ ಸುನ್ನತಿ ಮಾಡಿಸಿಕೊಳ್ಳಬೇಕು ಮತ್ತು ಧರ್ಮಶಾಸ್ತ್ರಕ್ಕೆ ವಿಧೇಯರಾಗಬೇಕು ಎಂದು ವಾದಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 15:1, 5). ಅನ್ಯಜನರು ಕ್ರೈಸ್ತರಾಗಬೇಕೆಂದರೆ ಯೆಹೂದಿ ಮತಾಂತರಿಗಳಾಗತಕ್ಕದ್ದೆಂದು ಹೇಳುತ್ತಿದ್ದರು. ಸ್ಪಷ್ಟವಾಗಿರುವ ಪ್ರಕಾರ, ಯೆಹೂದಿಕರಣ ಮಾಡುವವರು ಅನ್ಯಜನರನ್ನು ಶುದ್ಧವಾಗಿ ಕಾಪಾಡುವ ಕುರಿತು ಕಳಕಳಿಯುಳ್ಳವರಾಗಿದ್ದರು, ಮತ್ತು ಧರ್ಮಶಾಸ್ತ್ರವು ಒಂದು ಸಕಾರಾತ್ಮಕವಾದ ನಿಯಂತ್ರಕ ಶಕ್ತಿಯಾಗಿರುವದೆಂದು ಕಂಡರು. ಅಷ್ಟೇ ಅಲ್ಲದೆ, ಸುನ್ನತಿಯಿಲ್ಲದ ಅನ್ಯಜನರೊಂದಿಗೆ ಅನ್ಯೋನ್ಯತೆಯಿಟ್ಟುಕೊಳ್ಳುತ್ತಿದ್ದಾರೆಂದು ಯೆಹೂದಿ ಕ್ರೈಸ್ತರನ್ನು ವಿಶ್ವಾಸವಿಲ್ಲದ ಯೆಹೂದ್ಯರು ಟೀಕಿಸುವದು ಅವರಿಗೆ ಇಷ್ಟವಿರಲಿಲ್ಲ. ಪೌಲನ ಪ್ರಕಾರವಾಗಿ, ಈ ಯೆಹೂದಿಕರಣ ಮಾಡುವವರು "ಸುಳ್ಳು ಸಹೋದರರು" ಆಗಿದ್ದರು ಯಾಕೆಂದರೆ ಅವರು ಸುನ್ನತಿಯಿಲ್ಲದೆ ಅನ್ಯಜನಾಂಗದ ಕ್ರೈಸ್ತರನ್ನು ಅನ್ಯೋನ್ಯತೆಯೊಳಗೆ ಅಂಗೀಕರಿಸದವರಾಗಿದ್ದರು. ಈ ವಿಧದಲ್ಲಿ, "ಸುವಾರ್ತೆಯ ಸಾರ್ವತ್ರಿಕತೆಯನ್ನು

ನಿರಾಕರಿಸುವವರಾಗಿದ್ದರು."[8]

ಕೆಲವು "ಸುಳ್ಳು ಸಹೋದರರು" **ಸಭೆಗೆ ಕಳ್ಳತನದಿಂದ ಸೇರಿಕೊಂಡು** ಅನ್ಯಜನಾಂಗದ ಕ್ರೈಸ್ತರ ಅನುಭವಿಸುತ್ತಿದ್ದ ಸ್ವಾತಂತ್ರ್ಯವನ್ನು **ಗೂಢವಾಗಿ ವಿಚಾರಿಸುವದಕ್ಕೆ ಮರೆಸಿಕೊಂಡು ಬಂದವರಾ**ಗಿದ್ದರು. ಈ ಭಾಷೆಯು ಅಂತಿಯೋಕ್ಯ ಮತ್ತು ಗಲಾತ್ಯದಲ್ಲಿ ಅನ್ಯಜನರ ಅಧಿಕವಾಗಿರುವ ಸಭೆಗಳೊಳಗೆ ಸುಳುಸಿ ಜನರನ್ನು ಧರ್ಮಶಾಸ್ತ್ರಕ್ಕೆ ವಿಧೇಯವಾಗಬೇಕೆಂಬ ಅವರ ಬೋಧನೆಯ ಕಡೆಗೆ ಸೆಳೆಯಲು ಪ್ರಯತ್ನಿಸುವ ಯೆಹೂದಿಕರಣ ಮಾಡುವವರನ್ನು ಸೂಚಿಸುತ್ತದೆ. ಇದು ಹೆಚ್ಚು ಸಂಭವನೀಯವಾಗಿ ಖಾಸಗಿ ಸಭೆಯೊಳಗೆ ಬಂದಿದ್ದ ಯೆಹೂದಿಕರಣ ಮಾಡುವವರನ್ನು ಬಣ್ಣಿಸುತ್ತಿರಬಹುದಾಗಿದೆ. "ಕಳ್ಳತನದಿಂದ ಸೇರಿಕೊಂಡ" (παρείσακτος, *pareisaktos*) ಎಂಬುದು 2 ಪೇತ್ರ 2:1ರಲ್ಲಿ ಸ್ಥಳೀಯ ಸಭೆಗಳಲ್ಲಿ "ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವ"ವವರಾದ "ಸುಳ್ಳುಬೋಧಕರು" ಎಂಬುದಕ್ಕಾಗಿ ಬಳಸಲ್ಪಟ್ಟಿರುವ ಪದಕ್ಕೆ ಸಂಬಂಧಪಟ್ಟಿರುತ್ತದೆ. Ben Witherington IIIನ ಪ್ರಕಾರವಾಗಿ, *ಪರಾಯಿಸಾಕ್ಟೊಸ* ಎಂಬುದು "ಮಿಲಿಟರಿ ಭಾಷೆಯಾಗಿದ್ದು ಅನಂತರದಲ್ಲಿ ರಾಜಕೀಯ ಭಾಷಣಕಲೆಯಲ್ಲಿ ಬಳಸಲ್ಪಟ್ಟಿತು."[9] "ಗೂಢವಾಗಿ ವಿಚಾರಿಸುವದಕ್ಕೆ ಮರೆಸಿಕೊಂಡು ಬಂದವರು" ಎಂಬುದು ಗೂಢಾಚಾರ ಮಾಡುತ್ತಿದ್ದವರಿಗಿದ್ದ ಹಗೆತನದ ಉದ್ದೇಶಗಳನ್ನು ಸೂಚಿಸುತ್ತದೆ (ನೋಡಿರಿ 2 ಸಮುವೇಲ 10:3; 1 ಪೂರ್ವಕಾಲವೃತ್ತಾಂತ 19:3). ಈ ವ್ಯಕ್ತಿಗಳು "ಮಫ್ತಿಯಲ್ಲಿರುವ ಏಜೆಂಟ್‌ಗಳು ಹಾಗೂ ಸಂಚುಕೋರರು ಇದ್ದಂತೆ."[10]

**ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯ** ಎಂಬುದು ಧರ್ಮಶಾಸ್ತ್ರವಿಲ್ಲದೆ ಪರಿಶುದ್ಧ ಜೀವಿತವನ್ನು ಜೀವಿಸುವದಕ್ಕಾಗಿ ಹೊಸ ಒಡಂಬಡಿಕೆಯಿಂದ ಕೊಡಲ್ಪಟ್ಟಿರುವ ಶಕ್ತಿಯನ್ನು ಸೂಚಿಸುತ್ತದೆ (ಎಫೆಸ 2:14, 15; ಕೊಲೊಸ್ಸೆ 2:13, 14). ಯೆಹೂದಿಕರಣ ಮಾಡುವವರು ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು, ಹೊಸ ವಿಶ್ವಾಸಿಗಳನ್ನು ಧರ್ಮಶಾಸ್ತ್ರದ **ದಾಸತ್ವದೊಳಗೆ** ಸಿಕ್ಕಿಸಬೇಕೆಂದು ಬಯಸಿದ್ದರು. "ಸ್ವಾತಂತ್ರ್ಯ," "ಬಿಡುಗಡೆ," ಮತ್ತು "ಮುಕ್ತ" ಎಂಬುವುಗಳು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಮುಖ್ಯ ಪದಗಳಾಗಿದ್ದು, ಒಟ್ಟು ಹನ್ನೊಂದು ಸಾರಿ ಕಾಣಿಸಿಕೊಳ್ಳುತ್ತವೆ.[11] ಈ ಕನ್ನಡ ಪದಗಳು ἐλευθερία (*eleutheria*) ಎಂಬ ಗ್ರೀಕ್ ನಾಮಪದ ಹಾಗೂ ἐλεύθερος (*eleutheros*) ಎಂಬ ಗುಣವಾಚಕಗಳ ಅನುವಾದವಾಗಿರುತ್ತವೆ.

ಯೇಸುವು "ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ" (ಮತ್ತಾಯ 28:19) ಮಾಡುವದನ್ನು ಒಳಗೊಂಡಿದ್ದ ಮಹಾ ಆದೇಶವನ್ನು ಕೊಟ್ಟಿದ್ದಾಗ್ಯೂ ಮತ್ತು ಪೇತ್ರನು ರಕ್ಷಣೆ ವಾಗ್ದಾನವು "ದೂರವಾಗಿರುವವರೆಲ್ಲರಿಗೂ" ಎಂದು ಮಾತಾಡಿದ್ದಾಗ್ಯೂ (ಅಪೊಸ್ತಲರ ಕೃತ್ಯಗಳು 2:39), ಅನ್ಯಜನರಿಗೆ ಸುವಾರ್ತೆಯನ್ನು ಸಾರುವದಕ್ಕೆ ಹೋಗುವದು ತ್ವರಿತವಾಗಿ ಅಥವಾ ಸ್ವಾಭಾವಿಕವಾಗಿ ಸಂಭವಿಸಲಿಲ್ಲ. ರೋಮನ್ ಶತಾಧಿಪತಿಯಾಗಿದ್ದ ಕೊರ್ನೇಲ್ಯ ಹಾಗೂ ಆತನ ಮನೆಯವರಿಗೆ ಸುವಾರ್ತೆಯನ್ನು ಸಾರಬೇಕೆಂದು ತನ್ನಲ್ಲಿ ಮನವರಿಕೆಯನ್ನುಂಟು ಮಾಡಿಕೊಳ್ಳಬೇಕಾದರೆ, ಪೇತ್ರನಿಗೆ ಒಂದು ಅದ್ಭುತಕರವಾದ ದರ್ಶನವು ಬಂದ ಮೇಲಷ್ಟೇ ಸಾಧ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 10:9-16). ಇದಾದ ಬಳಿಕ, ಯೆರೂಸಲೇಮಿನಲ್ಲಿದ್ದ ಕೆಲವು ಯೆಹೂದಿ ಕ್ರೈಸ್ತರು ಅನ್ಯಜನರೊಂದಿಗೆ ಊಟ ಮಾಡುತ್ತಾ ಅನ್ಯೋನ್ಯತೆಯಲ್ಲಿ ಕೂತಿದ್ದಕ್ಕಾಗಿ ಪೇತ್ರನನ್ನು ಬಹಳವಾಗಿ ಟೀಕಿಸಿದ್ದರು (ಅಪೊಸ್ತಲರ ಕೃತ್ಯಗಳು 11:1-3). ಪೇತ್ರನು ತನ್ನ ಕೃತ್ಯಗಳ ಬಗ್ಗೆ ವಿವರಣೆಯನ್ನು ನೀಡಿದ ಬಳಿಕ, ದೇವರು "ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ" ಎಂಬುದನ್ನು

ಗ್ರಹಿಸಿಕೊಂಡು ಆತನನ್ನು ಕೊಂಡಾಡಿದ್ದರು (ಅಪೊಸ್ತಲರ ಕೃತ್ಯಗಳು 11:18). ಈ ಘಟನೆಯ ಫಲಿತವಾಗಿ ಅಂತಿಯೋಕ್ಯದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಅನ್ಯಜನರು ಪರಿವರ್ತನೆಗೊಂಡಿದ್ದರು. ಅವರ ಪ್ರತಿಕ್ರಿಯೆಯ ಸುದ್ದಿಯು ಯೆರೂಸಲೇಮಿಗೆ ಮುಟ್ಟಿದಾಗ, ಹೊಸ ವಿಶ್ವಾಸಿಗಳಿಗೆ ಬೋಧಿಸಿ ಪ್ರೋತ್ಸಾಹವನ್ನು ಮಾಡುವದಕ್ಕಾಗಿ ಸಭೆಯು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿತು. ಬಾರ್ನಬನು ತಾರ್ಸಗೆ ಹೋಗಿ ಪೌಲನನ್ನು ಪುನಃ ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು, ಅಲ್ಲಿ ಇವರಿಬ್ಬರು, ಅಪೊಸ್ತಲರ ಕೃತ್ಯಗಳು 11:19-26ರ ಪ್ರಕಾರವಾಗಿ, ಬಹಳಷ್ಟು ಸಂಖ್ಯೆಯ ಜನರಿಗೆ ಉಪದೇಶವನ್ನು ಮಾಡಿದರು. ಈ ಕೆಲಸದ ಬಳಿಕ ಮೊದಲ ಸುವಾರ್ತಾ ಪ್ರಯಾಣವನ್ನು ಮಾಡಲಾಗಿತ್ತು, ಆ ಪ್ರಯಾಣದ ವೇಳೆ ಪೌಲ ಮತ್ತು ಬಾರ್ನಬರು ಕ್ರಿಸ್ತನ ಸುವಾರ್ತೆಯೊಂದಿಗೆ ಹಲವಾರು ಅನ್ಯಜನರನ್ನು ಸಂಧಿಸುವ ಕೆಲಸವನ್ನು ಮುಂದುವರೆಸಿದರು (ಅಪೊಸ್ತಲರ ಕೃತ್ಯಗಳು 14:27). ಅನ್ಯಜನರು ಎಷ್ಟೊಂದು ತ್ವರಿತ ಗತಿಯಲ್ಲಿ ಸಂದೇಶವನ್ನು ಸ್ವೀಕರಿಸಿಕೊಳ್ಳುತ್ತಿದ್ದರೆಂದು ಸಭೆಯಲ್ಲಿ ತಮಗಿರುವ ಹಿಡಿತವು ತಪ್ಪಿ ಹೋಗುತ್ತದೆನೋ ಎಂದು ಕೆಲವು ಯೆಹೂದ್ಯರು ಹೆದರಿದ್ದರು.

ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ನಂಬಿಕೆಯಿಡುವವರಾದಾಗ, ಅವರು ಯೆಹೂದ್ಯರಾಗಿರುವದನ್ನು ನಿಲ್ಲಿಸಲಿಲ್ಲ. ಪೌಲನು ಸಹ ಸೇರಿದಂತೆ, ಅನೇಕರು ಕೆಲವು ಯೆಹೂದಿ ಪದ್ಧತಿಗಳನ್ನು ಆಚರಿಸುತ್ತಲೇ ಇದ್ದರು. ಯೆರೂಸಲೇಮಿನಲ್ಲಿದ್ದ ವಿಶ್ವಾಸಿಗಳಾದ ಯೆಹೂದ್ಯರೊಳಗೆ "ಎಷ್ಟೋ ಸಾವಿರ ಮಂದಿ" "ಧರ್ಮಶಾಸ್ತ್ರದಲ್ಲಿ ಅಭಿಮಾನಿಗಳಾಗಿದ್ದರು" ಎಂದು ಅಪೊಸ್ತಲರ ಕೃತ್ಯಗಳು 21:20 ಹೇಳುತ್ತದೆ. ಧರ್ಮಶಾಸ್ತ್ರಕ್ಕೆ ವಿಧೇಯರಾಗುವದನ್ನು ಕಡ್ಡಾಯಗೊಳಿಸಿದರೆ ಮಾತ್ರವೇ ಈ ಅನ್ಯಜನರನ್ನು ನಿಯಂತ್ರಿಸಬಹುದೆಂದು ಯೆಹೂದಿ ಕ್ರೈಸ್ತರಲ್ಲಿ ಕೆಲವರು ಭಾವಿಸಿಕೊಂಡಿದ್ದರು. ಕೆಲವರು ಅನ್ಯಜನರಿಗೆ "ನೀವು ಮೋಶೆಯ ಗ್ರಂಥದಲ್ಲಿ ಹೇಳಿರುವ ನೇಮದ ಪ್ರಕಾರ ಸುನ್ನತಿಮಾಡಿಸಿಕೊಳ್ಳದಿದ್ದರೆ ನಿಮಗೆ ರಕ್ಷಣೆಯಾಗಲಾರದು" ಎಂದು ಸಹ ಉಪದೇಶಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 15:1).

**ವಚನ 5.** ಸುವಾರ್ತೆಗೋಸ್ಕರ "ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದ" (1 ಕೊರಿಂಥ 9:22, 23) ಮತ್ತು ದೃಢವಿಲ್ಲದ ಸಹೋದರನಿಗೋಸ್ಕರ ತನ್ನ ಹಕ್ಕಗಳನ್ನು ಬಿಟ್ಟು ಕೊಡಲು ಸಿದ್ಧನಿದ್ದ ಪೌಲನು (1 ಕೊರಿಂಥ 8:13), ನೇಮನಿಷ್ಠೆತನಕ್ಕೆ ಶರಣಾಗತನಾಗುವವನು ಆಗಿರಲಿಲ್ಲ.[12] ಈ ಸನ್ನಿವೇಶದಲ್ಲಿ, ಪೌಲನು ಅನ್ಯಜನಾಂಗದ ಕ್ರೈಸ್ತರಿಗೋಸ್ಕರ ಹೋರಾಡುತ್ತಿದ್ದಾನೆಯೇ ಹೊರತು, ತನ್ನ ಸ್ವಂತ ಹಕ್ಕುಗಳಿಗೋಸ್ಕರವಲ್ಲ. ಆತನು ಮತ್ತು ಆತನ ಸಹಪಾಠಿಗಳು ಯೆಹೂದಿಕರಣ ಮಾಡುವವರಿಗೆ **ವಶವಾಗುವದಕ್ಕೆ ಒಂದು ಗಳಿಗೆ ಹೊತ್ತಾದರೂ ಸಮ್ಮತಿಪಡಲಿಲ್ಲ**. ಒಂದು ಕ್ಲುಪ್ತ ಕಾಲಾವಧಿಯ ಸಮಯವನ್ನು ಸೂಚಿಸಲು ಒಂದು "ಗಳಿಗೆ" (ὥρα, *hōra*) ಎಂಬುದು ಬಳಸಲ್ಪಡುತ್ತದೆ; ಹಲವಾರು ತರ್ಜುಮೆಗಳಲ್ಲಿ "ಒಂದು ಕ್ಷಣಕ್ಕೂ" (NIV; NRSV; ESV) ಅಥವಾ "ಒಂದು ಕ್ಷಣ" (NJB; REB) ಎಂದಿರುತ್ತವೆ. ಪೌಲನು ತನ್ನ ವಾಚಕರ ನಂಬಿಕೆಗೆ ಹಾನಿಯನ್ನುಂಟು ಮಾಡುವಂಥ ಏನನ್ನಾದರೂ ಹೇಳುವದಕ್ಕೆ ಅಥವಾ ಮಾಡುವದಕ್ಕೆ ಬಯಸಲಿಲ್ಲ. ಅವರಲ್ಲಿ **ಸುವಾರ್ತೆಯ ಸತ್ಯಾರ್ಥವು ನಿಮ್ಮಲ್ಲಿ ಸ್ಥಿರವಾಗಿರಬೇಕೆಂದು** ಬಯಸಿದ್ದನು.

ವಾಕ್ಯದ ವ್ಯತ್ಯಾಸಗಳು ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ ಕಾಣಿಸಿಕೊಂಡಿದ್ದು, ತೀತನಿಗೆ ಒಂದು ದುರ್ಬಲತೆಯ ಕ್ಷಣದಲ್ಲಿ ಸುನ್ನತಿ ಮಾಡಿಸಲಾಯಿತು ಎಂಬುದನ್ನು ಸೂಚಿಸುತ್ತವೆ. ಈ ಬರೆಯಲ್ಪಟ್ಟಿರುವ ಬಹಳ ಸಂದೇಹಕರವಾಗಿರುತ್ತದೆ, ಯಾಕೆಂದರೆ ಅದು ಪೌಲನು

ಮಾಡುತ್ತಿರುವ ಇಡೀ ವಾದವನ್ನೇ ನಾಶಗೊಳಿಸುವದು.[13] ಅಂತೂ, ಸುನ್ನತಿಯಿಲ್ಲದ ಅನ್ಯಜನಾಂಗದ ಒಬ್ಬ ಕ್ರೈಸ್ತನಾಗಿದ್ದ ತೀತನನ್ನು ಪೌಲನು ಅನ್ಯಜನಾಂಗದ ವಾಚಕರು ಅನುಸರಿಸುವಂಥ ಮಾದರಿಯಾಗಿ ಬಳಸುತ್ತಿದ್ದಾನಷ್ಟೆ.

**ವಚನ 6.** ಮತ್ತೊಂದಾವರ್ತಿ, ಪೌಲನು **ಮಾನಿಷ್ಠರೆನಿಸಿಕೊಂಡವರ** (ನೋಡಿರಿ 2:2) ಕುರಿತು ಪ್ರಸ್ತಾಪಿಸಿದನು, ಆದಾಗ್ಯೂ ಈ ವ್ಯಕ್ತಿಗಳೆಲ್ಲರ ಹೆಸರುಗಳು 2:9ನೇ ವಚನದ ತನಕ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. NIV ತರ್ಜುಮೆಯು ಈ ಗುಂಪನ್ನು "ಬಹಳವಾಗಿ ಸನ್ಮಾನಿಸಲ್ಪಡುತ್ತಿದ್ದವರು" ಎಂದು ಸೂಚಿಸುತ್ತದೆ. ಈ ವ್ಯಕ್ತಿಗಳು ಯೆರೂಸಲೇಮಿನ ಸಭೆಯಲ್ಲಿ ಗೌರವಾನ್ವಿತ ನಾಯಕರಾಗಿದ್ದರೆಂದು ಹೇಳುತ್ತಿದ್ದಾನೆ.

**ಅವರು ಹಿಂದಿನ ಕಾಲದಲ್ಲಿ ಎಂಥವರಾಗಿದ್ದರೋ ನನಗೆ ಲಕ್ಷ್ಯವಿಲ್ಲ** ಎಂಬ ಪ್ರಕ್ಷೇಪ ಹೇಳಿಕೆಯನ್ನು ಈ ಸಹೋದರರನ್ನು ಪೌಲನು ಪ್ರೀತಿಸಲಿಲ್ಲ ಅಥವಾ ಪ್ರಶಂಸಿಸಲಿಲ್ಲ ಎಂಬುದಾಗಿ ವ್ಯಾಖ್ಯಾನಿಸಬಾರದು. ಯೆಹೂದಿಕರಣ ಮಾಡುವವರು ಈ ವ್ಯಕ್ತಿಗಳನ್ನು ಮೇಲಕ್ಕೆ ಏರಿಸಿದ್ದರು ಮತ್ತು ಪೌಲನನ್ನು ಹೀನಯಿಸಿದ್ದರು; ಹೇಗೂ, ಸಭೆಯ ಈ ಎಲ್ಲಾ ನಾಯಕರು ಸಮಾನ ಸ್ಥಾನದಲ್ಲಿದ್ದರು.

**ದೇವರು ಮುಖದಾಕ್ಷಿಣ್ಯ ಮಾಡುವವನಲ್ಲ** ಎಂಬ ಪ್ರಕ್ಷೇಪ ಹೇಳಿಕೆಯ ಉಳಿದ ಭಾಗವು ಅಕ್ಷರಶಃ "ದೇವರು ಒಬ್ಬ ಮನುಷ್ಯನ ಮುಖ ನೋಡಿ ಸೇರಿಸಿಕೊಳ್ಳುವದಿಲ್ಲ [ಅಥವಾ 'ಅಂಗೀಕರಿಸುವದಿಲ್ಲ']" ಎಂದು ಅನುವಾದಿಸಬಹುದಾಗಿದೆ. ಹಳೆಯ ಒಡಂಬಡಿಕೆಯಲ್ಲಿ, "ಮುಖ ದರ್ಶನ ಮಾಡು" ಎಂಬ ಗಾದೆಯ ಅರ್ಥವು "ನಿನ್ನ ಕಟಾಕ್ಷವನ್ನು ತೋರಿಸು" ಎಂದರ್ಥವಾಗಿತ್ತು. ದೇವರು ಮುಖ ದಾಕ್ಷಿಣ್ಯ ನೋಡುವವನಲ್ಲ; ಆತನು ಪಕ್ಷಪಾತವನ್ನು ಮಾಡುವದಿಲ್ಲ (ಲೂಕ 20:21; ಅಪೊಸ್ತಲರ ಕೃತ್ಯಗಳು 10:34; ರೋಮಾ 2:11; ಎಫೆಸ 6:9; ಕೊಲೊಸ್ಸೆ 3:25; 1 ಪೇತ್ರ 1:17). F. F. Bruceನ ಪ್ರಕಾರವಾಗಿ, ಈ ಸನ್ನಿವೇಶದಲ್ಲಿ ಆ ಮಾತಿನ ಅರ್ಥವು "ತನ್ನ ಅಪೊಸ್ತಲತ್ವದ ಆದೇಶವನ್ನು ತಡವಾಗಿ ಪಡೆದುಕೊಂಡ ಪೌಲನಂತಹ ವ್ಯಕ್ತಿಯನ್ನು ಕಡೆಗಣಿಸಿ ದೇವರು ಯೇಸುವಿನ ಸಹಪಾಠಿಗಳಿಗಾಗಲಿ ಅಥವಾ ಐತಿಹಾಸಿಕ ಬಂಧುಗಳಿಗಾಗಲಿ ಕಟಾಕ್ಷ ತೋರಿಸುವವನಲ್ಲ."[14] ಈ ಸಭಾ ನಾಯಕರು ಆತನ ಸಂದೇಶಕ್ಕೆ ಸೇರ್ಪಡೆಗೊಳಿಸುವಂತಹ ರೀತಿಯಲ್ಲಿ **ನನಗೇನೂ ಕಲಿಸಲಿಲ್ಲ** ಎಂದು ಪೌಲನು ಹೇಳುತ್ತಿದ್ದಾನೆ. ಆತನು ತನ್ನ ಸುವಾರ್ತೆಯನ್ನು ಮನುಷ್ಯರಿಂದಲ್ಲ, ಆದರೆ ದೈವಿಕ ಪ್ರಕಟನೆಯ ಮುಖಾಂತರ ಪಡೆದುಕೊಂಡಿದ್ದನು (1:11, 12).

**ವಚನ 7.** "ಮಾನಿಷ್ಠರೆನಿಸಿಕೊಂಡ" ವ್ಯಕ್ತಿಗಳಲ್ಲಿ ಒಬ್ಬನೆಂದರೆ, **ಪೇತ್ರನು** ಎಂದು ಈ ವಚನದಲ್ಲಿ ಹೆಸರಿಸಲ್ಪಟ್ಟಿದ್ದಾನೆ. ತಾನು ಹಾಗೂ ಪೇತ್ರ ಇಬ್ಬರಿಗೂ ಸೇವೆಗಳನ್ನು ನಡಿಸುವದಕ್ಕೆ ಕರ್ತನೇ **ಪ್ರೇರಿಸಿದ್ದನು** ಎಂದು ಒತ್ತಿ ಹೇಳಿದನು (ನೋಡಿರಿ 1 ಥೆಸಲೋನಿಕ 2:4). ಅವರು ಒಂದೇ ಸುವಾರ್ತೆಯನ್ನು (1 ಕೊರಿಂಥ 15:3, 4, 11) ಎರಡು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾರುತ್ತಿದ್ದರು.

ಪೌಲನಿಗೆ **ಸುವಾರ್ತೆಯನ್ನು ಸಾರುವ ಕೆಲಸವನ್ನು . . . ಅನ್ಯಜನರಲ್ಲಿ ನಡಿಸುವದಕ್ಕೆ** ಆದೇಶಿಸಲಾಗಿತ್ತು – ಅಂದರೆ, ಸುನ್ನತಿಯಿಲ್ಲದವರಿಗೆ. ಕ್ರಿಸ್ತನು ಆತನಿಗೆ ದಮಸ್ಕದ ದಾರಿಯಲ್ಲಿ ಕಾಣಿಸಿಕೊಂಡ ವೇಳೆ, ಆತನು ಪೌಲನನ್ನು ಅನ್ಯಜನರಿಗೆ ಅಪೊಸ್ತಲನಾಗಿರುವಂತೆ ಕರೆದನು (ಅಪೊಸ್ತಲರ ಕೃತ್ಯಗಳು 26:16–18; ನೋಡಿರಿ 9:15, 16). ಇದರರ್ಥವು ಪೌಲನು ಯೆಹೂದ್ಯರನ್ನು ನಿರ್ಲಕ್ಷ್ಯಿಸಿದನು ಎಂದಲ್ಲ. ವಾಸ್ತವಿಕದಲ್ಲಿ, ಆತನ ಮಿಶನರಿ ಕಾರ್ಯತಂತ್ರವು ಆತನು ಒಂದು ಹೊಸ ಪಟ್ಟಣಕ್ಕೆ ಬಂದು ತಲುಪಿದಾಕ್ಷಣ ಸಭಾಮಂದಿರಗಳಲ್ಲಿ ಕ್ರಿಸ್ತನನ್ನು

ಮೊದಲು ಸಾರುವದಾಗಿತ್ತು (ಅಪೊಸ್ತಲರ ಕೃತ್ಯಗಳು 13-19). ಈ ವಿಧದಲ್ಲಿ, ಆತನು ಮೊದಲು "ಯೆಹೂದ್ಯರಿಗೆ ಸಾರಿದನು" (ರೋಮಾ 1:16). ಹೇಗೂ, ಪೌಲನು ತನ್ನ ಬಹುಪಾಲು ಸಮಯವನ್ನು ಅನ್ಯಜನರಿಗೆ ಸಾರುವದಕ್ಕಾಗಿ ಕಳೆದನು.

ಇನ್ನೊಂದು ಕಡೆಯಲ್ಲಿ, ಪೇತ್ರನಿಗೆ **ಸುನ್ನತಿಯಾದವರಲ್ಲಿ** - ಅಂದರೆ, ಯೆಹೂದ್ಯರಿಗೆ - ಸಾರುವದಕ್ಕೆ ಆದೇಶಿಸಲ್ಪಟ್ಟಿದ್ದನು. ಆತನು ಮೊದಲ ಸುವಾರ್ತಾ ಸಂದೇಶವನ್ನು ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಸಾರಿದ್ದನು (ಅಪೊಸ್ತಲರ ಕೃತ್ಯಗಳು 2) ಮತ್ತು ಯೆರೂಸಲೇಮ್ ಹಾಗೂ ಯೂದಾಯಗಳಲ್ಲಿ ಬಹಳ ಯಶಸ್ಸನ್ನು ಅನುಭವಿಸಿದ್ದನು. ಹಾಗಿದ್ದರೂ, ಪೇತ್ರನು ಯೆಹೂದ್ಯರ ಮೇಲೆ ಒತ್ತು ಕೊಟ್ಟದ್ದರಿಂದ ಅದು ಆತನನ್ನು ಅನ್ಯಜನರಿಗೆ ಸಾರುವದರಿಂದ ದೂರವಿಡಲಿಲ್ಲ. ವಾಸ್ತವಿಕದಲ್ಲಿ, ಆತನು ಕೊರ್ನೇಲ್ಯನು ಮತ್ತು ಆತನ ಮನೆಯವರಿಗೆ ಸಾರುವ ಮೂಲಕವಾಗಿ ಸಭೆಯ ಭಾಗವಾಗುವಂತೆ ಅನ್ಯಜನರಿಗೆ ದ್ವಾರವನ್ನು ತೆರೆದಿದ್ದನು (ಅಪೊಸ್ತಲರ ಕೃತ್ಯಗಳು 10), ಮತ್ತು ಆತನು ತನ್ನ ಸೇವೆಯುದ್ದಕ್ಕೂ ಅನ್ಯಜನರಿಗೆ ಸಾರುವದನ್ನು ಮುಂದುವರೆಸಿದನು (ನೋಡಿರಿ 1 ಕೊರಿಂಥ 1: 12; 3:22; 1 ಪೇತ್ರ 1:1, 14, 18).

**ವಚನ 8.** NASBಯಲ್ಲಿ, ಈ ವಚನವನ್ನು ಒಂದು ಪ್ರಕ್ಷೇಪ ಹೇಳಿಕೆಯಾಗಿ ಇಡಲ್ಪಟ್ಟಿದೆ: **ಸುನ್ನತಿಯಾದವರಿಗೆ ಸುವಾರ್ತೆಯನ್ನು ಸಾರುವ ಕೆಲಸವು ಹೇಗೆ ಪೇತ್ರನಿಗೆ ಕೊಡಲ್ಪಟ್ಟಿತೋ ಹಾಗೆಯೇ ಸುನ್ನತಿಯಿಲ್ಲದವರಿಗೆ ಅದನ್ನು ಸಾರುವ ಕೆಲಸವು ನನಗೆ ಕೊಟ್ಟಿರುವದನ್ನು.** ಇಲ್ಲಿ ಮುಖ್ಯವಾಗಿರುವ ಅಂಶವೇನೆಂದರೆ ಪೇತ್ರ ("ಸುನ್ನತಿಯಿರುವವರಿಗೆ," ಅಂದರೆ ಯೆಹೂದ್ಯರಿಗೆ) ಮತ್ತು ಪೌಲ ("ಅನ್ಯಜನರಿಗೆ") ಇಬ್ಬರನ್ನೂ ಅಪೊಸ್ತಲಿಕ ಸೇವೆ ನಡಿಸುವಂತೆ ಶಕ್ತಗೊಳಿಸಿದ ದೇವರು ಒಬ್ಬನೇ ಆಗಿದ್ದಾನೆ. ದೇವರು ತನ್ನ ಒಂದು ಸಂದೇಶವನ್ನು ಇಬ್ಬರೂ ವ್ಯಕ್ತಿಗಳಿಗೆ ಕೊಟ್ಟಿದ್ದನು, ಜೊತೆಗೆ ಅವರ ಸಾರುವಿಕೆಯನ್ನು ಅದ್ಭುತಕರವಾದ ಸೂಚಕಕಾರ್ಯಗಳಿಂದ ದೃಢಪಡಿಸುವದಕ್ಕೆ ಶಕ್ತಿಯನ್ನು ಕೊಟ್ಟಿದ್ದನು. ಇಬ್ಬರೂ ವ್ಯಕ್ತಿಗಳು ಮಾಡುತ್ತಿರುವ ಕಾರ್ಯದ ಹಿಂದಿನ ಶಕ್ತಿಯ ಮೂಲವು ದೇವರೇ ಆಗಿರುವದಾದರೆ, ಪೌಲನನ್ನು ಟೀಕಿಸುವ ನೆಲೆಯಲ್ಲಿ ಯಾರಿದ್ದರು? "ಪರಿಣಾಮವನ್ನುಂಟು ಮಾಡುವ ಹಾಗೆ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (ἐνεργέω, *energeō*) ಎಂಬುದು ಆಂಗ್ಲದ "ಎನರ್ಜೀ" ಎಂಬ ಪದದ ಹಿಂದಿರುತ್ತದೆ. "ಅಪೊಸ್ತಲತನ" (ἀποστολή, *apostolē*) ಎಂಬುದಕ್ಕಾಗಿರುವ ಪದವು, ಒಬ್ಬ ಅಪೊಸ್ತಲನ ಉದ್ಯೋಗ ಎಂಬರ್ಥವನ್ನು ಕೊಡುವದಾಗಿದ್ದು ಹೊಸ ಒಡಂಬಡಿಕೆಯಲ್ಲಿ ನಾಲ್ಕು ಸಾರಿ ಕಾಣಿಸಿಕೊಳ್ಳುತ್ತದೆ (2:8; ಅಪೊಸ್ತಲರ ಕೃತ್ಯಗಳು 1:25; ರೋಮಾ 1:5; 1 ಕೊರಿಂಥ 9:2).

**ವಚನ 9.** ಪೌಲನು ಮತ್ತೊಂದಾವರ್ತಿ **ಹೆಸರುಗೊಂಡಿರುವವವರನ್ನು** ಸೂಚಿಸಿ ಮಾತಾಡುತ್ತಾನೆ (ನೋಡಿರಿ 2:2, 6); ಆತನು ಅವರನ್ನು **ಯಾಕೋಬ ಕೇಫ ಯೋಹಾನರು** ಎಂದು ಪಟ್ಟಿ ಮಾಡುತ್ತಾನೆ. "ಕರ್ತನ ತಮ್ಮನಾದ ಯಾಕೋಬನು" 1:19ರಲ್ಲಿ ಪ್ರಸ್ತಾಪಿಸಲ್ಪಟ್ಟನು. ಆತನು ಈ ಸಾರಿ ಕೇವಲ "ಯಾಕೋಬ" ಎಂದು ಕರೆಯಲ್ಪಟ್ಟಿದ್ದಾನೆ, ಯೋಹಾನನ ಅಣ್ಣನಾದ ಯಾಕೋಬ ಎಂಬುದಾಗಿ ಪ್ರತ್ಯೇಕಗೊಳಿಸಿ ಹೇಳುವದು ಅನಾವಶ್ಯಕವಾಗಿತ್ತು, ಈತನು ರಕ್ತಸಾಕ್ಷಿಯಾಗಿ ಮರಣಿಸಿದ್ದವನು (ಅಪೊಸ್ತಲರ ಕೃತ್ಯಗಳು 12:1, 2). "ಕೇಫ"ನು, ಗಲಾತ್ಯ 1:18ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಒಬ್ಬನು. ಆತನು ಹಿಂದಿನ ವಚನಗಳಲ್ಲಿ (2:7, 8) ಪ್ರಸ್ತಾಪಿಸಲ್ಪಟ್ಟಿರುತ್ತಾನೆ, ಆದರೂ ಅಲ್ಲಿ ಆತನ "ಕೇಫ" ಎಂಬ ಅರಾಮಿಕ್ ಹೆಸರಿನ ಬದಲಾಗಿ ಅಲ್ಲಿ "ಪೇತ್ರ" ಎಂಬ ಗ್ರೀಕ್ ಹೆಸರು ಕೊಡಲ್ಪಟ್ಟಿರುತ್ತದೆ. "ಯೋಹಾನ," ಈತನು ಸಹ ಹನ್ನೆರಡು ಮಂದಿಯಲ್ಲೊಬ್ಬನಾಗಿದ್ದು

ತ್ರಿಮೂರ್ತಿಗಳನ್ನು ಪೂರ್ತಿಗೊಳಿಸುತ್ತಾನೆ.

Bruceನು ಸುವಾರ್ತೆಗಳಲ್ಲಿ ಯೇಸುವಿನ ಆಪ್ತ ಸಹಪಾಠಿಗಳು - ಪೇತ್ರ, ಯಾಕೋಬ, ಮತ್ತು ಯೋಹಾನ (ಮಾರ್ಕ 5:37; 9:2; 14:33) - ಮೂಲತಃ ಯೆರೂಸಲೇಮಿನ ಸಭೆಯಲ್ಲಿ **ಸ್ತಂಭ**ಗಳು ಆಗಿದ್ದರು ಎಂದು ಭಾವಿಸುತ್ತಾನೆ. ಹೇಗೂ, ಯೋಹಾನನ ಅಣ್ಣನಾದ ಯಾಕೋಬನು ಕೊಲ್ಲಲ್ಪಟ್ಟಿದ್ದನಾದ್ದರಿಂದ, ಆತನ ಸ್ಥಾನದಲ್ಲಿ ಬೇರೊಬ್ಬ ಸ್ತಂಭವಾಗಿ (ಆದರೆ ಒಬ್ಬ ಅಪೊಸ್ತಲನಾಗಿ) ಕರ್ತನ ತಮ್ಮನಾದ ಯಾಕೋಬನು ಬಂದಿದ್ದನು. ಮತ್ತೊಂದು ಸಾಧ್ಯತೆಯೆಂದರೆ ಈ ಯಾಕೋಬನು ಮುಂಚೆಯೇ ಒಬ್ಬ ನಾಯಕನಾದನು, ಹೀಗೆ ಮೂಲತಃ ನಾಲ್ಕು ಸ್ತಂಭಗಳಿದ್ದರು.[15]

1:18, 19ರಲ್ಲಿ, ಯಾಕೋಬನಿಗಿಂತ ಮುಂಚೆ ಪೇತ್ರನ ಹೆಸರು ಬರುತ್ತದೆ; ಆದರೆ ಈ ಸನ್ನಿವೇಶದಲ್ಲಿ, ಯಾಕೋಬನು ಮೊದಲು ಪ್ರಸ್ತಾಪಿಸಲ್ಪಟ್ಟಿರುತ್ತಾನೆ. ಬಹುಶಃ, ಈ ವಾಕ್ಯಭಾಗಗಳಲ್ಲಿ ದಾಖಲಿಸಲ್ಪಟ್ಟಿರುವ ಘಟನೆಗಳನ್ನು ಪ್ರತ್ಯೇಕಿಸುವ ಅನೇಕ ವರ್ಷಗಳಲ್ಲಿ (ನೋಡಿರಿ 2:1), ಯಾಕೋಬನು ಯೆರೂಸಲೇಮಿನ ಸಭೆಯಲ್ಲಿ ಪೇತ್ರನಿಗಿಂತ ಹೆಚ್ಚು ಪ್ರಭಾವಶಾಲಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 15:13; 21:18). ಪೇತ್ರನು ಯೆರೂಸಲೇಮ ಹಾಗೂ ಯೂದಾಯದ ಹೊರಗೆ ಸಮಯವನ್ನು ಕಳೆದಿದ್ದ ಕಾರಣದಿಂದಾಗಿ ಹೀಗೆ ಸಂಭವಿಸಿರಬಹುದು (ಅಪೊಸ್ತಲರ ಕೃತ್ಯಗಳು 8:14; 9:32, 43; 10:24).[16]

ಕಾರಣಗಳು ಏನೇ ಆಗಿದ್ದರೂ ಸರಿಯೇ, ಈ ಮೂವರು ವ್ಯಕ್ತಿಗಳು ಸಹ "ಸ್ತಂಭಗಳು" ಎಂದು ಪರಿಗಣಿಸಲ್ಪಟ್ಟಿದ್ದರು. ಇಲ್ಲಿ ಬಳಸಲಾಗಿರುವ ಗ್ರೀಕ್ ಪದವು στῦλος (*stulos*) ಎಂದಾಗಿದ್ದು, ಇದು LXXನಲ್ಲಿ ಪದೇ ಪದೇ ದೇವದರ್ಶನ ಗುಡಾರ ಹಾಗೂ ದೇವಾಲಯವನ್ನು ಕಟ್ಟಲು ಬಳಸಿದ ಸ್ತಂಭಗಳನ್ನು ಸೂಚಿಸಲು ಬಳಸಲ್ಪಟ್ಟಿದೆ. ಇದು ನಿರ್ದಿಷ್ಟವಾದ ಪ್ರತಿಷ್ಠಾಪನೆಗೆ ಸ್ಥಿರತೆ ಹಾಗೂ ಬೆಂಬಲವನ್ನು ಕೊಡುವ ವ್ಯಕ್ತಿಗಳಿಗೆ ಬಳಸುವ ಒಂದು ಸಾಮಾನ್ಯ ರೂಪಕೋಕ್ತಿಯಾಗಿತ್ತು (ನೋಡಿರಿ ಪ್ರಕಟನೆ 3:12). Lightfootನ ಪ್ರಕಾರ, "ಸ್ತಂಭಗಳು" ಎಂಬುದು ಯೆಹೂದ್ಯರು ಸಾಮಾನ್ಯವಾಗಿ "ಧರ್ಮಶಾಸ್ತ್ರದ ಶ್ರೇಷ್ಠ ಬೋಧಕರನ್ನು" ಸೂಚಿಸುವದಕ್ಕೆ ಸಹ ಬಳಸುತ್ತಿದ್ದ ಒಂದು ಮಾತಾಗಿತ್ತು.[17]

ಅವರ ಏಕಾಂತದ ಮಾತುಕತೆಯ ವೇಳೆ, ಯಾಕೋಬ, ಕೇಫ, ಮತ್ತು ಯೋಹಾನರು ಪೌಲ ಮತ್ತು ಬಾರ್ನಬ ಮಾಡುತ್ತಿದ್ದ ಒಳ್ಳೇ ಕೆಲಸವನ್ನು ಒಪ್ಪಿಕೊಂಡಿದ್ದರು. ಪೌಲನಿಗೆ **ದಯಪಾಲಿಸಿರುವ ವರವನ್ನು** ಗ್ರಹಿಸಿಕೊಂಡರು - ಅಂದರೆ, ದೇವರು ಹೇಗೆ ಆತನಿಗೆ **ಅನ್ಯಜನರಿಗೆ** ಸೇವೆ ಮಾಡುವದನ್ನು ವಹಿಸಿಕೊಟ್ಟಿರುವದು (ನೋಡಿರಿ 1:15, 16) - ಮತ್ತು ಪೌಲ ಮತ್ತು ಬಾರ್ನಬರಿಗೆ **ಐಕ್ಯವನ್ನು ತೋರಿಸುವದಕ್ಕಾಗಿ . . . ಬಲಗೈ ಕೊಟ್ಟರು**. ಬಲಗೈಯನ್ನು ಕುಲುಕುವದು ಯೆಹೂದ್ಯರು ಮತ್ತು ಅನ್ಯಜನರು ಇಬ್ಬರಲ್ಲಿಯೂ ಇದ್ದ ಸಾಮಾನ್ಯ ಪದ್ಧತಿಯಾಗಿತ್ತು, ಅದು ಸ್ನೇಹವನ್ನು ಮತ್ತು ಅಂಗೀಕಾರವನ್ನು ತೋರ್ಪಡಿಸುವದಾಗಿತ್ತು.[18] R. Alan Coleನು ಹೇಳಿದ್ದೇನೆಂದರೆ ಈ ವ್ಯಕ್ತಿಗಳು "ಬಲಗೈಯನ್ನು ಬಿಗಿಯಾಗಿ ಹಿಡಿದುಕೊಂಡರೆಂಬುದು . . . ಬಹುಶಃ ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಗೆ ಒಂದು ಕಹಿಯಾದ ಹೊಡೆತವಾಗಿದ್ದಿರಬಹುದು."[19]

**ವಚನ 10.** ಅವರು ಅನ್ಯಜನರಿಗೆ ಮಾಡುವ ಸೇವಾಧ್ಯೇಯಕ್ಕೆ ತಮ್ಮ ಬೆಂಬಲವನ್ನು ಕೊಡುವ ವೇಳೆ, ಪೌಲ ಮತ್ತು ಬಾರ್ನಬರು **ಬಡವರನ್ನು ಜ್ಞಾಪಕಮಾಡಿಕೊಳ್ಳಬೇಕೆಂಬ** ಮನವಿಯನ್ನು ಯಾಕೋಬ, ಕೇಫ, ಮತ್ತು ಯೋಹಾನರು ಮಾಡಿಕೊಂಡರು. ಅದು ಅವರ ಏಕೈಕ ಮನವಿಯಾಗಿತ್ತು; ಅನ್ಯಜನಾಂಗದ ಕ್ರೈಸ್ತರು ಧರ್ಮಶಾಸ್ತ್ರಕ್ಕೆ ವಿಧೇಯರಾಗಬೇಕು

ಅಥವಾ ಸುನ್ನತಿಯನ್ನು ಆಚರಿಸುವದು ಅವಶ್ಯಕವೆಂದು ಹೇಳಲಿಲ್ಲ. "ಬಡವರು" (πτωχός, *ptōchos* ಎಂಬದರಿಂದ ಬಂದದ್ದು) ಎಂಬುದು ಈ ಸನ್ನಿವೇಶದಲ್ಲಿ ಪ್ರಾಥಮಿಕವಾಗಿ ಯೆರೂಸಲೇಮಿನ ಸಭೆಯಲ್ಲಿದ್ದ ಬಡತನವುಳ್ಳವರನ್ನು ಸೂಚಿಸುತ್ತದೆ.[20] ಬಡವರಿಗೆ ಸಹಾಯವನ್ನು **ಮಾಡುವದರಲ್ಲಿ ನಾನೂ ಆಸಕ್ತನಾಗಿದ್ದೆನು** ಎಂದು ಪೌಲನು ಹೇಳಿದನು.

NIVಯು ಈ ವಚನದ ಮೊದಲ ಭಾಗವನ್ನು "ನಾವು ಬಡವರನ್ನು *ಮುಂದೆಯೂ* ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದಷ್ಟೇ ಕೇಳಿಕೊಂಡರು" (ಒತ್ತಿ ಹೇಳಿದ್ದು ನನ್ನದು). ಪೌಲನು ಬರಗಾಲದ ಪರಿಹಾರವನ್ನು ತೆಗೆದುಕೊಂಡು ಹೋಗಿದ್ದ ವೇಳೆ ಯೆರೂಸಲೇಮಿನಲ್ಲಿ ಸ್ತಂಭಗಳೆನಿಸಿಕೊಂಡವರನ್ನು ಭೇಟಿಯಾಗಿದ್ದಲ್ಲಿ ಈ ಅನುವಾದವು ವಿಶೇಷವಾಗಿ ಸರಿಹೊಂದುತ್ತದೆ (ಅಪೊಸ್ತಲರ ಕೃತ್ಯಗಳು 11:27–30). ಇದು ಸರಿಯಾಗಿರುವದಾದಲ್ಲಿ, ಪೌಲ ಮತ್ತು ಬಾರ್ನಬರು ಆ ಸಂದರ್ಭದಲ್ಲಿ ಬಡವರನ್ನು ಜ್ಞಾಪಿಸಿಕೊಳ್ಳುವವರಾಗಿದ್ದರು ಮತ್ತು ಅದೇ ಮನೋಭಾವದಲ್ಲಿ ಮುಂದುವರೆಯಬೇಕೆಂದು ಅವರನ್ನು ಬೇಡಿಕೊಳ್ಳಲಾಯಿತು.

ಅನಂತರ, ತನ್ನ ಮೂರನೆಯ ಸುವಾರ್ತಾ ಪ್ರಯಾಣದ ವೇಳೆ, ಪೌಲನು ಯೆರೂಸಲೇಮಿನಲ್ಲಿದ್ದ ಬಡ ದೇವಜನರಿಗೋಸ್ಕರ ಅನ್ಯಜನಾಂಗದ ಸಭೆಗಳಿಂದ ಕಾಣಿಕೆಗಳನ್ನು ಸಂಗ್ರಹಿಸಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 24:17; 1 ಕೊರಿಂಥ 16:1–4; 2 ಕೊರಿಂಥ 8; 9). ಅಪೊಸ್ತಲನು ಒಂದು ಸಾರಿ "ತೆಗೆದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯ" ಎಂದು ಹೇಳಿದ ಯೇಸುವಿನ ಮಾತುಗಳನ್ನು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯಗಳು 20:35). ಅಲ್ಲದೆ, ಅನ್ಯಜನರು ಯೆಹೂದ್ಯರ ಆತ್ಮೀಕ ಆಶೀರ್ವಾದಗಳಲ್ಲಿ ಪಾಲುಗಾರರಾಗಿರುವದರಿಂದ, ಅನ್ಯಜನರು ಭೌತಿಕವಾಗಿ ಯೆಹೂದ್ಯರಿಗೆ ಸಹಾಯವನ್ನು ಮಾಡುವದು ಸರಿಯಾದದ್ದೇ ಆಗಿರುತ್ತದೆಂದು ಸಹ ವಿವರಿಸಿದನು (ರೋಮಾ 15:26, 27). ಬಡವರಿಗೋಸ್ಕರ ಕಾಳಜಿಯನ್ನು ಹೊಂದಿರುವದರ ಮೂಲಕ - ವಿಶೇಷವಾಗಿ ಬಡ ಕ್ರೈಸ್ತರಿಗಾಗಿ - ಪೌಲನು ತಾನು ನೀಡಿದ್ದ ಬುದ್ಧಿವಾದಂತೆಯೇ ಬದುಕಿ ತೋರಿಸಿದ್ದನು: "ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (6:10).

# ಪೌಲನು ಪೇತ್ರನನ್ನು ಮುಖಾಮುಖಿಯಾಗಿ ಎದುರಿಸಿದ್ದು (2:11-21)

## ಅನ್ಯಜನರನ್ನು ಯೆಹೂದ್ಯರಂತೆ ಜೀವಿಸಬೇಕೆಂದು ಒತ್ತಾಯಿ ಪಡಿಸಿದ್ದು (2:11-14)

**11ಕೇಫನು ಅಂತಿಯೋಕ್ಯಕ್ಕೆ ಬಂದಾಗ ಅವನು ದೋಷಿಯಾಗಿ ಕಾಣಿಸಿಕೊಂಡದರಿಂದ
ನಾನು ಅವನನ್ನು ಮುಖಾಮುಖಿಯಾಗಿ ಎದುರಿಸಿದೆನು. 12ಯಾಕಂದರೆ ಯಾಕೋಬನ
ಕಡೆಯಿಂದ ಕೆಲವರು ಬರುವದಕ್ಕೆ ಮುಂಚೆ ಅವನು ಅನ್ಯಜನರ ಸಂಗಡ ಊಟಮಾಡುತ್ತಿದ್ದನು;
ಅವರು ಬಂದ ಮೇಲೆ ಸುನ್ನತಿಯವರಾದ ಅವರಿಗೆ ಅವನು ಭಯಪಟ್ಟು ಅನ್ಯಜನರನ್ನು ಬಿಟ್ಟು
ತನ್ನನ್ನು ಪ್ರತ್ಯೇಕಿಸಿಕೊಂಡನು. 13ಇದಲ್ಲದೆ ಮಿಕ್ಕಾದ ಯೆಹೂದ್ಯರೂ ಅವನೊಂದಿಗೆ ಸೇರಿ
ಹಾಗೆಯೇ ಕಪಟ ಮಾಡಿದರು; ಹೀಗೆ ಬಾರ್ನಬನೂ ಅವರ ಕಪಟದ ಸೆಳವಿಗೆ ಬಿದ್ದನು. 14ಅವರು
ಸುವಾರ್ತೆಯ ಸತ್ಯಾರ್ಥದ ಪ್ರಕಾರ ನೆಟ್ಟಗೆ ನಡೆಯುವದಿಲ್ಲವೆಂದು ನಾನು ಕಂಡಾಗ ಎಲ್ಲರ ಮುಂದೆ ಕೇಫನಿಗೆ ಹೇಳಿದ್ದೇನಂದರೆ - ನೀನು ಯೆಹೂದ್ಯನಾಗಿದ್ದು ಯೆಹೂದ್ಯರಂತೆ ನಡೆಯದೆ ಅನ್ಯಜನರಂತೆ ನಡೆದ ಮೇಲೆ ಅನ್ಯಜನರಿಗೆ - ನೀವು ಯೆಹೂದ್ಯರ ಪದ್ಧತಿಗಳನ್ನು ಅನುಸರಿಸಬೇಕೆಂದು ನೀನು ಬಲಾತ್ಕಾರ ಮಾಡುವದು ಹೇಗೆ?**

ಪೌಲನು ಮತ್ತು ಪೇತ್ರನ ನಡುವೆಯುಂಟಾದ ಮುಖಿಮುಖಿಯಾದ ಎದುರಿಸುವಿಕೆಯು ಸಂಭವಿಸಿದ ಈ ಸಂದರ್ಭವು ಇಡೀ ಪತ್ರಿಕೆಯಲ್ಲಿಯೇ ಅತ್ಯಂಥ ವಿವಾದಿತ ಪ್ರಶ್ನೆಗಳಲ್ಲೊಂದಾಗಿದೆ; ಇದು ಪತ್ರಿಕೆಯು ಬರೆಯಲ್ಪಟ್ಟ ದಿನಾಂಕದ ಕುರಿತಾದ ಕಠಿಣ ಪ್ರಶ್ನೆ ಮತ್ತು ಅದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಲೂಕನ ಕಥನದೊಂದಿಗೆ ಸಮನ್ವಯಗೊಳಿಸುವದರಲ್ಲಿ ಸಮಸ್ಯೆಯೊಂದಿಗೆ ಸಂಬಂಧ ಪಟ್ಟದ್ದಾಗಿದೆ. ಲೂಕನು ನೀಡುವ ಘಟನೆಗಳ ಕಾಲಾನುಕ್ರಮವು ಪೌಲನ ಜೀವನ ಮತ್ತು ಕೆಲಸಗಳ ಒಂದು ಸಂಪೂರ್ಣ ಕಥನವಾಗಿರುವ ಗುರಿಯನ್ನು ಹೊಂದಿಲ್ಲ, ಆದಾಗ್ಯೂ ಅದು ಘಟನೆಗಳನ್ನು ಕಾಲಾನುಕ್ರಮದಲ್ಲಿ (ಅಥವಾ ತಾರ್ಕಿಕವಾದ ಕ್ರಮಾನುಸಾರದಲ್ಲಿ) ಮುಂದಿಡುವದಾಗಿ ಹೇಳಿಕೊಳ್ಳುತ್ತದೆ.

ಅದೇ ರೀತಿಯಲ್ಲಿಯೇ, ಪೌಲನು ಗಲಾತ್ಯ 1 ಮತ್ತು 2 ಅಧ್ಯಾಯಗಳಲ್ಲಿನ ಘಟನೆಗಳನ್ನು ಕಾಲಾನುಕ್ರಮದ ರೀತಿಯಲ್ಲಿ ಬರೆಯುತ್ತಾನೆ. ಆತನು ಈ ಕೆಳಗಿನ ಘಟನೆಗಳನ್ನು ವಿವರಿಸಿದನು: (1) ಆತನಿಗುಂಟಾದ ದೈವಿಕ ಕರೆ ಮತ್ತು ಅರಬಸ್ಥಾನ ಹಾಗೂ ದಮಸ್ಕದಲ್ಲಿ ಮಾಡಿದ ಸೇವೆ (1:15-17); (2) "ಮೂರು ವರುಷಗಳಾದ ಮೇಲೆ" ಆತನು ಯೆರೂಸಲೇಮಿಗೆ ಪ್ರಯಾಣ ಮಾಡಿದ್ದು (1:18); (3) ಆತನು "ಸಿರಿಯ ಮತ್ತು ಕಿಲಿಕ್ಯ ಪ್ರಾಂತಗಳಲ್ಲಿ"ನ ತಾರ್ಸ ಮತ್ತು ಅಂತಿಯೋಕ್ಯದಲ್ಲಿ ಸೇವೆ (1:21); (4) ಆತನು "ಹದಿನಾಲ್ಕು ವರುಷಗಳಾದ ಮೇಲೆ" ಯೆರೂಸಲೇಮಿಗೆ ಹೋಗಿದ್ದು (2:1); ಮತ್ತು ಅಂತಿಮವಾಗಿ (5) ಅಂತಿಯೋಕ್ಯದಲ್ಲಿದ್ದ ವೇಳೆ ಆತನು ಪೇತ್ರನನ್ನು ಗದರಿಸಿದ್ದು (2:11).

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನು ಪೇತ್ರನನ್ನು ಮುಖಾಮುಖಿಯಾಗಿ ಎದುರಿಸಿದ್ದರ ಕುರಿತಾಗಿ ಬರೆಯಲ್ಪಟ್ಟಿರುವದಿಲ್ಲವಾದರೂ, ಪೌಲನು ಅಂತಿಯೋಕ್ಯದಲ್ಲಿದ್ದ ಸಂದರ್ಭದ ಕುರಿತು ಆ ಪುಸ್ತಕದಲ್ಲಿ ನಾವು ಕಾಣುತ್ತೇವೆ. ಅಪೊಸ್ತಲರ ಕೃತ್ಯಗಳು 9:26-30 ಮತ್ತು ಗಲಾತ್ಯ 1:18ರಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ, ಆತನು ತನ್ನ ಪರಿವರ್ತನೆಯ ಬಳಿಕ ಯೆರೂಸಲೇಮಿಗೆ ಮೊದಲ ಸಾರಿ ಭೇಟಿ ಕೊಟ್ಟ ನಂತರ, ಗ್ರೀಕ್ ಹಿನ್ನಲೆಯ ಯೆಹೂದ್ಯರು ಆತನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು; ಆದಕಾರಣ ಸಹೋದರರು ಆತನನ್ನು ಆತನ ಸ್ವಂತ ಊರಾದ ತಾರ್ಸಗೆ ಕಳುಹಿಸಿ ಕೊಟ್ಟರು. ಪೌಲನು ಅನಂತರದಲ್ಲಿ ಅಂತಿಯೋಕ್ಯದಲ್ಲಿದ್ದ ಕಾಲಾವಧಿಗಳ ಕುರಿತು ಈ ವಾಕ್ಯಭಾಗಗಳಲ್ಲಿ ತಿಳಿಸಲ್ಪಟ್ಟಿವೆ:

*ಅಪೊಸ್ತಲರ ಕೃತ್ಯಗಳು 11:25, 26 - ಈ ಸಂದರ್ಭವು ಆತನು ಅಂತಿಯೋಕ್ಯದಲ್ಲಿ ಆರಂಭಿಕ ಸೇವೆಯನ್ನು ಮಾಡಿದ್ದ ಸಮಯದ್ದಾಗಿದೆ.* ಕೈಸರೈಯದಲ್ಲಿ ಹೊಸ ಪರ್ವವನ್ನು ಆರಂಭಗೊಳಿಸುವಂತೆ ಮಾಡಿದ್ದ ಕೊರ್ನೇಲ್ಯನ ಪರಿವರ್ತನೆಯ ಬಳಿಕ, ಬಾರ್ನಬನು ಅಂತಿಯೋಕ್ಯದಲ್ಲಿ ಚಿಗುರುತ್ತಿರುವ ಸೇವೆಯಲ್ಲಿ ತನಗೆ ಸಹಾಯವನ್ನು ಒದಗಿಸುವಂತೆ ತಾರ್ಸದಿಂದ ಪೌಲನನ್ನು ಕರೆದುಕೊಂಡು ಬಂದನು. ಇಲ್ಲಿ ಇವರಿಬ್ಬರು ಮೊಟ್ಟಮೊದಲ ಯೆಹೂದಿ/ಅನ್ಯಜನರನ್ನು ಒಂದುಗೂಡಿಸಿದ ಸಭೆಯನ್ನು ಸ್ಥಾಪಿಸುವ ಮಹಾನ್ ಪ್ರವರ್ತಕ ಪರಿಶ್ರಮದಲ್ಲಿ ತೊಡಗಿಸಿಕೊಂಡಿದ್ದರು. ಈ ಕೆಲಸವು "ಪೂರಾ ಒಂದು ವರುಷ" ನಡೆಯಿತು, ಮತ್ತು ಅಂತಿಯೋಕ್ಯದಲ್ಲಿಯೇ "ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅಪೊಸ್ತಲರ ಕೃತ್ಯಗಳು 11:26).[21]

*ಅಪೊಸ್ತಲರ ಕೃತ್ಯಗಳು 12:25-13:3 - ಅಂತಿಯೋಕ್ಯದಲ್ಲಿ ಸಂಗ್ರಹವಾಗಿದ್ದ ಆರ್ಥಿಕ ಪರಿಹಾರವನ್ನು ಅಪೊಸ್ತಲರ ಕೃತ್ಯಗಳು 11:29, 30ರಲ್ಲಿ ಯೆರೂಸಲೇಮಿಗೆ ತಲುಪಿಸಿದ ಬಳಿಕ,* ಪೌಲ ಮತ್ತು ಬಾರ್ನಬರು ಅಂತಿಯೋಕ್ಯಕ್ಕೆ ಹಿಂದಿರುಗಿದರು, ತಮ್ಮೊಂದಿಗೆ ಬಾರ್ನಬನ ಸೋದರ ಸಂಬಂಧಿಯಾದ ಮಾರ್ಕನನ್ನು ಕರೆದುಕೊಂಡು ಬಂದರು. ವಿಷಾದಕರವಾಗಿ,

ವಾಕ್ಯಭಾಗದೊಳಗೆ ಆ ಘಟನೆಗಳ ನಡುವೆ ಎಷ್ಟು ಸಮಯವು ಕಳೆಯಿತೆಂಬುದು ತಿಳಿಸಲ್ಪಟ್ಟಿರುವದಿಲ್ಲ. ಪೌಲ ಮತ್ತು ಬಾರ್ನಬರು ಮೊದಲನೆಯ ಸುವಾರ್ತಾ ಪ್ರಯಾಣವನ್ನು ಮಾಡುವಂತೆ ಅಂತಿಯೋಕ್ಯದಲ್ಲಿಯೇ ಕರೆಯಲ್ಪಟ್ಟರು ಎಂಬುದನ್ನು ವಾಕ್ಯಭಾಗವು ಸೂಚಿಸುವದಿಲ್ಲ.

*ಅಪೊಸ್ತಲರ ಕೃತ್ಯಗಳು 14:26-28 - ಮೊದಲನೆಯ ಸುವಾರ್ತಾ ಪ್ರಯಾಣವು ಮುಕ್ತಾಯಗೊಂಡ ವೇಳೆ, ಪೌಲ ಮತ್ತು ಬಾರ್ನಬರು ಅಂತಿಯೋಕ್ಯಕ್ಕೆ ಹಿಂದಿರುಗಿದರು.* ತಮ್ಮ ವರದಿಯನ್ನು ಸಲ್ಲಿಸಿದ ಬಳಿಕ, "ಅವರು ಅಲ್ಲಿ ಶಿಷ್ಯರ ಸಂಗಡ ಬಹುಕಾಲ ಇದ್ದರು" (ಅಪೊಸ್ತಲರ ಕೃತ್ಯಗಳು 14:28). ಈ ವಾಸ್ತವ್ಯದ ವೇಳೆಯಲ್ಲಿ ಅಥವಾ ಮುಕ್ತಾಯದ ವೇಳೆ "ಕೆಲವರು ಯೂದಾಯದಿಂದ ಅಂತಿಯೋಕ್ಯಕ್ಕೆ ಬಂದು - ನೀವು ಮೋಶೆಯ ಗ್ರಂಥದಲ್ಲಿ ಹೇಳಿರುವ ನೇಮದ ಪ್ರಕಾರ ಸುನ್ನತಿಮಾಡಿಸಿಕೊಳ್ಳದಿದ್ದರೆ ನಿಮಗೆ ರಕ್ಷಣೆಯಾಗಲಾರದು ಎಂಬದಾಗಿ ಸಹೋದರರಿಗೆ ಉಪದೇಶಮಾಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 15:1). ಈ ಸುಳ್ಳು ಬೋಧನೆಯು ಯೆರೂಸಲೇಮಿನಲ್ಲಿ ಸಮಾಲೋಚನೆ ಸಭೆಯನ್ನು ನಡಿಸುವದಕ್ಕೆ ಸಂದರ್ಭವನ್ನುಂಟು ಮಾಡಿತ್ತು, ಆ ಸಭೆಗೆ ಪೌಲ ಮತ್ತು ಬಾರ್ನಬರು ತನ್ನ ವರದಿಯನ್ನು ಕೊಡುವದಕ್ಕೆ ಹೋದರು (ಅಪೊಸ್ತಲರ ಕೃತ್ಯಗಳು 15:12). ಪೇತ್ರ ಮತ್ತು ಯಾಕೋಬ ಇಬ್ಬರೂ ತಂಟೆಕೋರರ ವಿರುದ್ಧವಾಗಿ ಸಾಕ್ಷಿ ಹೇಳಿದರು (ಅಪೊಸ್ತಲರ ಕೃತ್ಯಗಳು 15:6-11, 13-21), ಮತ್ತು ಅವರ ಸಾಕ್ಷಿಯ ಫಲಿತವಾಗಿ ಅಂತಿಯೋಕ್ಯ, ಸಿರಿಯ, ಮತ್ತು ಕಿಲಿಕ್ಯಗಳಲ್ಲಿರುವ ಸಭೆಗಳನ್ನುದ್ದೇಶಿಸಿ ಒಂದು ಪತ್ರವನ್ನು ಬರೆಯಲಾಗಿತ್ತು. ಆ ಪತ್ರದಲ್ಲಿ ಈ ಮಾತುಗಳಿದ್ದವು: "ಅದಾಗಿ ನಮ್ಮೊಳಗಿಂದ ಹೋದ ಕೆಲವರು ನಮ್ಮಿಂದ ಏನೂ ಅಪ್ಪಣೆಹೊಂದದೆ ತಮ್ಮ ಮಾತುಗಳಿಂದ ನಿಮ್ಮಲ್ಲಿ ಅಸಮಾಧಾನವನ್ನು ಹುಟ್ಟಿಸಿ ನಿಮ್ಮ ಮನಸ್ಸುಗಳನ್ನು ಕಳವಳಗೊಳಿಸಿದ್ದಾರೆಂಬದನ್ನು ಕೇಳಿದ್ದರಿಂದ" (ಅಪೊಸ್ತಲರ ಕೃತ್ಯಗಳು 15:24).

ಮೇಲಿನ ಮೂರು ಭೇಟಿಗಳು ಸಹ ಪೌಲನು ಪೇತ್ರನನ್ನು ಮುಖಾಮುಖಿಯಾಗಿ ಎದುರಿಸಿದ ಸಂದರ್ಭವಾಗಿರುವ ಸಾಧ್ಯತೆಯಿರುತ್ತದೆ. ಇದಾದ ನಂತರದ ಭೇಟಿಗಳು ಆ ಸಂದರ್ಭವಾಗಿರುವದರಲ್ಲಿ ಸಂದೇಹವಿರುತ್ತದೆ ಯಾಕೆಂದರೆ ಅಪೊಸ್ತಲರ ಕೃತ್ಯಗಳು 15:7-11ರಲ್ಲಿ ಯೆರೂಸಲೇಮಿನ ಸಮಾಲೋಚನಾ ಸಭೆಯಲ್ಲಿ ಶಕ್ತಿಶಾಲಿ ಸಾಕ್ಷಿಯನ್ನು ಕೊಟ್ಟ ಬಳಿಕ ಪೇತ್ರನು ಅಷ್ಟೊಂದು ಕೆಳಮಟ್ಟಕ್ಕೆ ಇಳಿದಿರಲಾರನು.

ಅಪೊಸ್ತಲರ ಕೃತ್ಯಗಳು 15:30-35 - ಯೆರೂಸಲೇಮಿನಲ್ಲಾದ ಸಮಾಲೋಚನಾ ಸಭೆಯ ಬಳಿಕ, ಪೌಲ ಮತ್ತು ಬಾರ್ನಬ, ಯೊಹಾನ, ಮಾರ್ಕ, ಸೀಲ, ಮತ್ತು ಇತರರು ಅಂತಿಯೋಕ್ಯಕ್ಕೆ ಹಿಂದಿರುಗಿದರು, ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಹಾಗೂ ಹಿರಿಯರ ತೀರ್ಪುಗಳನ್ನು ತಿಳಿಸಿದರು. ನಂತರ, ಅವರು "ಅಂತಿಯೋಕ್ಯದಲ್ಲಿಯೇ ನಿಂತು ಬೇರೆ ಅನೇಕರೊಂದಿಗೆ ಉಪದೇಶಮಾಡುತ್ತಾ ಕರ್ತನ ವಾಕ್ಯವೆಂಬ ಸುವಾರ್ತೆಯನ್ನು ಸಾರುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 15:35). ಆ ಸಮಯದಲ್ಲಿ, ಪೌಲ ಮತ್ತು ಬಾರ್ನಬರ ನಡುವೆ ಯೋಹಾನನೆನಿಸಿಕೊಳ್ಳುವ ಮಾರ್ಕನ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾಗಿತ್ತು. ಪೌಲನು ಸೀಲನನ್ನು ಆರಿಸಿಕೊಂಡು ತನ್ನ ಎರಡನೆಯ ಸುವಾರ್ತಾ ಪ್ರಯಾಣಕ್ಕೆ ಹೊರಟನು, ಬಾರ್ನಬನಾದರೋ ಯೋಹಾನನೆನಿಸಿಕೊಳ್ಳುವ ಮಾರ್ಕನನ್ನು ಕರೆದುಕೊಂಡು ಕುಪ್ರದ್ವೀಪಕ್ಕೆ ಹೋದನು (ಅಪೊಸ್ತಲರ ಕೃತ್ಯಗಳು 15:36-41).

*ಅಪೊಸ್ತಲರ ಕೃತ್ಯಗಳು 18:22, 23 - ಆರಂಭದಲ್ಲಿ ದಕ್ಷಿಣ ಗಲಾತ್ಯದಲ್ಲಿರುವ ಸಭೆಗಳಿಗೆ ಮರು ಭೇಟಿಯನ್ನು ಕೊಟ್ಟ ಬಳಿಕ (ಅಪೊಸ್ತಲರ ಕೃತ್ಯಗಳು 16:1-5), ಪೌಲ ಮತ್ತು ಸೀಲರು*

*ತ್ರೋವಕ್ಕೆ ಪ್ರಯಾಣಿಸಿದರು, ಅಲ್ಲಿಂದ ಮಕೆದೋನ್ಯಕ್ಕೆ ಹೋದರು, ಮತ್ತು ಆಖಾಯದ ಮಾರ್ಗವಾಗಿ ದಕ್ಷಿಣದ ಕಡೆಗೆ ಸಾಗಿದರು (ಅಥೇನೆ ಮತ್ತು ಕೊರಿಂಥ).* ಕೊರಿಂಥದಲ್ಲಿ "ಒಂದು ವರುಷ ಆರು ತಿಂಗಳು" ಕಳೆದ ಮೇಲೆ (ಅಪೊಸ್ತಲರ ಕೃತ್ಯಗಳು 18:11), ಪೌಲನು ಸಮುದ್ರ ಪ್ರಯಾಣವಾಗಿ ಕೆಂಖ್ರೆಯದಿಂದ ಎಫೆಸಕ್ಕೆ ಹೊರಟನು (ಆಸ್ಯ ಸೀಮೆಯ ಕರಾವಳಿ ಪ್ರದೇಶದಲ್ಲಿರುವ ಸ್ಥಳ) ಮತ್ತು ಬಳಿಕ ಕೈಸರೈಯಕ್ಕೆ (ಅಲ್ಲಿ ಅನ್ಯಜನಾಂಗದವರ ಮಧ್ಯದಲ್ಲಿ ಸೇವೆಯು ಆರಂಭಗೊಂಡಿತ್ತು). ಅಲ್ಲಿಂದ ಹೊರಟು, ಆತನು ಯೆರೂಸಲೇಮಿನಲ್ಲಿದ್ದ ಸಹೋದರರರನ್ನು ಭೇಟಿ ಮಾಡುವದಕ್ಕೆ ಹೋದನು, ಮತ್ತು ಬಳಿಕ ಅಂತಿಯೋಕ್ಯಕ್ಕೆ ಹಿಂದಿರುಗಿ ಬಂದನು ಮತ್ತು "ಕೆಲವು ಕಾಲ ಇದ್ದನು" (ಅಪೊಸ್ತಲರ ಕೃತ್ಯಗಳು 18:18–23).

ಪುನಃ ಅಂತಿಯೋಕ್ಯವನ್ನು ಬಿಟ್ಟು ಹೊರಟು, ಈ ಸಾರಿ ಮೂರನೆಯ ಸುವಾರ್ತಾ ಪ್ರಯಾಣ ಮಾಡುವವನಾಗಿ, ಪೌಲನು "ಕ್ರಮವಾಗಿ ಗಲಾತ್ಯ ಸೀಮೆಯಲ್ಲಿಯೂ ಫ್ರೂಗ್ಯದಲ್ಲಿಯೂ ಸಂಚಾರಮಾಡುತ್ತಾ ಶಿಷ್ಯರೆಲ್ಲರನ್ನು ದೃಢಪಡಿಸಿದನು" (ಅಪೊಸ್ತಲರ ಕೃತ್ಯಗಳು 18:23). ಆತನು ಎಫೆಸದಲ್ಲಿ ಸೇವೆ ಮಾಡುತ್ತಾ ಸಾಕಷ್ಟು ಸಮಯವನ್ನು ಕಳೆದನು – "ಮೂರು ವರುಷ" (ಅಪೊಸ್ತಲರ ಕೃತ್ಯಗಳು 20:31). ಮಕೆದೋನ್ಯ ಮತ್ತು ಆಖಾಯದಲ್ಲಿರುವ ಸಭೆಗಳನ್ನು ಭೇಟಿ ಮಾಡಿದ ಮೇಲೆ, ಆತನು ಫಿಲಿಪ್ಪಿಯಕ್ಕೆ ಹಿಂದಿರುಗಿದನು, ಅಂತಿಮವಾಗಿ ಕೈಸರೈಯಕ್ಕೆ ಬಂದು ಸೇರುವ ಮುನ್ನ ಮಧ್ಯದಲ್ಲಿ ತುರ್ ಮತ್ತು ಪ್ತೊಲೆಮಾಗಳಲ್ಲಿ ಇಳಿದುಕೊಂಡರು. ಪೌಲನು ಬಳಿಕ ಯೆರೂಸಲೇಮಿನ ತನಕ ಸಾಗಿದನು, ಅಲ್ಲಿ ಆತನು ಬಂಧನಕ್ಕೊಳಗಾದನು ಮತ್ತು ತನ್ನ ಸೇವೆಗೆ ಸಹಾಯವನ್ನು ಒದಗಿಸುತ್ತಿದ್ದ ಅಂತಿಯೋಕ್ಯದಲ್ಲಿನ ಸಭೆಗೆ ಹಿಂದಿರುಗುವದರಿಂದ ತಡೆಯಲ್ಪಟ್ಟನು ಅಪೊಸ್ತಲನನ್ನು ಕ್ರಮೇಣದಲ್ಲಿ ರೋಮಾಪುರಕ್ಕೆ ಕರೆದೊಯ್ದು ಗೃಹಬಂಧನದಲ್ಲಿಡಲಾಗಿತ್ತು. ಆತನು ಬಿಡುಗಡೆಗೊಳಿಸಲ್ಪಟ್ಟನೆಂದು ಪುರಾವೆಗಳು ಸೂಚಿಸುತ್ತವಾದರೂ, ಆತನು ಸಿರಿಯ/ಫಿಲಿಷ್ಟಿಯಕ್ಕೆ ಹಿಂದಿರುಗಿದನೆಂಬ ಬೇರೆ ಯಾವ ಸಂದರ್ಭಗಳ ಬಗ್ಗೆಯೂ ನಮಗೆ ತಿಳಿದು ಬಂದಿರುವದಿಲ್ಲ. ಆದದರಿಂದ, ಈ ಜೀವಿತದಲ್ಲಿ ಆತನು ತನ್ನ ಅಂತಿಯೋಕ್ಯದಲ್ಲಿನ ಸಹೋದರರರನ್ನು ಇನ್ನೆಂದೂ ಕಾಣಲಿಲ್ಲ ಎಂಬುದರ ಸಾಧ್ಯತೆಯಿರುತ್ತದೆ.

ಪೌಲನು ಅಂತಿಯೋಕ್ಯದಲ್ಲಿ ಪೇತ್ರನನ್ನು ಯಾವಾಗ ಗದರಿಸಿದನು ಎಂಬುದನ್ನು ಪರಿಶೀಲಿಸುವ ಮೂಲಕ, ಮೂರನೆಯ ಆಯ್ಕೆಯು - ಪೌಲನ ಮೊದಲನೆಯ ಸುವಾರ್ತಾ ಪ್ರಯಾಣದ ಬಳಿಕ - ಬಹಳ ಸಂಭಾವ್ಯವಾಗಿ ಕಾಣಿಸುತ್ತದೆ. ಯೆಹೂದಿ ಕ್ರೈಸ್ತರು ಬೇರೆ ಯಾವದೇ ಸಮಯಕ್ಕಿಂತಲೂ ಈ ವೇಳೆಯಲ್ಲಿಯೇ ಅನ್ಯಜನರ ಮಧ್ಯದಲ್ಲಿ ನಡೆಯುವ ಸೇವೆಯ ಕುರಿತು, ಈ ಮುಂಚೆ ಯೆಹೂದ್ಯರೇ ಪ್ರಬಲರಾಗಿದ್ದಂಥ ಸಭೆಯಲ್ಲಿ ಈಗ ಅನ್ಯಜನರು ಇಷ್ಟೊಂದು ಸಂಖ್ಯೆಯಲ್ಲಿ ಸೇರ್ಪಡೆಗೊಳ್ಳುವದನ್ನು ಕಂಡು ಆತಂಕಗೊಂಡಿದ್ದಿರಬಹುದಾಗಿದೆ. ಈ ಯೆಹೂದಿ ಕ್ರೈಸ್ತರು ಅನ್ಯಜನರ ಅತ್ಯಧಿಕ ಸಂಖ್ಯೆಯಿಂದ ಆವರಿಸಿಕೊಳ್ಳಲ್ಪಟ್ಟವರಾಗಿ ತಮ್ಮ ಯೆಹೂದಿ ಗುರುತನ್ನು ಕಳೆದುಕೊಳ್ಳುವೆವೆಂಬ ಭಯದಲ್ಲಿದ್ದರು.

**ವಚನ 11. ಅಂತಿಯೋಕ್ಯ**ವು ಒರೊಂಟೆಸ ನದಿಯ[22] ದಡದಲ್ಲಿ ಸುಮಾರು ಕ್ರಿ.ಪೂ. 300ರಲ್ಲಿ Seleucusನಿಂದ ಸ್ಥಾಪಿಸಲ್ಪಟ್ಟಿತ್ತು, ಗ್ರೀಕ್ ಸಾಮ್ರಾಜ್ಯವು ವಿಭಾಗಿಸಲ್ಪಟ್ಟ ಬಳಿಕ ಈತನು ಮಹಾ ಅಲೆಗ್ಸಾಂಡ್ರನ ಸೇನಾಪತಿಗಳಲ್ಲೊಬ್ಬನಾಗಿದ್ದನು (ನೋಡಿರಿ ದಾನಿಯೇಲ 8:8, 21, 22). ಅದು ಸೆಲ್ಯೂಕ್ಯ (ಸಿರಿಯ) ಸಾಮ್ರಾಜ್ಯದ ರಾಜಧಾನಿಯಾಯಿತು. ನಗರವು ಮೆಡಿಟೆರ್ರೇನಿಯನ್ ಸಮುದ್ರದಿಂದ ಸುಮಾರು ಇಪ್ಪತ್ತು ಮೈಲುಗಳಷ್ಟು ದೂರದ ಒಳನಾಡಿನಲ್ಲಿತ್ತು, ಸೆಲ್ಯೂಕ್ಯದ ಬಂದರು ಆಗಿತ್ತು. ಅದು ಯೆರೂಸಲೇಮಿನಿಂದ ಉತ್ತರಕ್ಕೆ

ಮುನ್ನೂರು ಮೈಲುಗಳಷ್ಟು ದೂರವಿತ್ತು. ಅಂತಿಯೋಕ್ಯವು ಪೂರ್ವ ದಿಕ್ಕಿನಲ್ಲಿದ್ದ ಟೈಗ್ರೀಸ್ ನದಿಯ ದಡದಲ್ಲಿದ್ದ ಸೆಲ್ಯೂಕ್ಯದಿಂದ ಆರಂಭಗೊಂಡು, ಪಟ್ಟಣದ ಮೂಲಕವಾಗಿ ಮತ್ತು ನಂತರ ಕಿಲಿಕ್ಯದ ತಾರ್ಸ ಹಾದು ಹೋಗಿ ಅರೆಗಿಯನ್ ಸಮುದ್ರದ ಪಶ್ಚಿಮ ಭಾಗದಲ್ಲಿರುವ ಎಫೆಸದಲ್ಲಿ ಅಂತ್ಯವಾಗುತ್ತಿದ್ದ ರಾಜವಂಶಸ್ಥ ಮಾರ್ಗದಲ್ಲಿತ್ತು. ಅಂತಿಯೋಕ್ಯವು ಇದ್ದ ಸ್ಥಳವು ವ್ಯಾಪಾರ ಮಾತ್ರವಲ್ಲದೆ ಅದರ ವಿಶ್ವಬಂಧುತ್ವದ ಸ್ವಭಾವದ ಮುಖಾಂತರವಾಗಿ ಐಶ್ವರ್ಯವನ್ನು ಗಳಿಸಿಕೊಳ್ಳುವಿಕೆಯಲ್ಲಿ ಕೊಡುಗೆಯನ್ನು ನೀಡಿತ್ತು.

ಮೊದಲ ಶತಮಾನದ ಹೊತ್ತಿಗೆ, ರೋಮಾಪುರ ಮತ್ತು ಅಲೆಗ್ಸಾಂದ್ರಗಳ ನಂತರದಲ್ಲಿ, ಅಂತಿಯೋಕ್ಯವು ಮೂರನೆಯ ಪ್ರಮುಖ ನಗರವಾಗಿತ್ತು. ಅದರಲ್ಲಿ ಸ್ಥಳೀಯ ಸಿರಿಯನ್ನರು, ಗ್ರೀಕರು, ರೋಮನ್ನರು, ಮತ್ತು ಯೆಹೂದ್ಯರು ನಿವಾಸ ಮಾಡುತ್ತಿದ್ದರು. ಆ ನಗರದಲ್ಲಿ ಅಲೆಗ್ಸಾಂದ್ರಿಯ (700,000 ಸಂಪುಟಗಳು) ಮತ್ತು ಪೆರ್ಗಮ (200,000 ಸಂಪುಟಗಳು) ನಗರಗಳಲ್ಲಿದ್ದಂಥ ಗ್ರಂಥಾಲಯದಂತೆಯೇ ಒಂದು ವಿಸ್ತಾರವಾದ ಗ್ರಂಥಾಲಯ ಇತ್ತು. ಅಂತಿಯೋಕ್ಯವು ಸುಂದರವಾಗಿತ್ತು ಯಾಕೆಂದರೆ ಅದಕ್ಕೆ ಸಮೃದ್ಧವಾಗಿ ನೀರಿನ ಸರಬರಾಜು ಇತ್ತು, ಆ ನೀರು ದಾಫ್ನೆ ಎಂಬಲ್ಲಿದ್ದ ನೈಸರ್ಗಿಕ ಬುಗ್ಗೆಗಳಿಂದ ಬರುತ್ತಿತ್ತು. ದಕ್ಷಿಣಕ್ಕೆ ಐದು ಮೈಲು ದೂರದಲ್ಲಿದ್ದ ಈ ಉಪನಗರವು ಒಂದು ಪ್ರಸಿದ್ಧ ವಿಲಾಸ ಗಿರಿಧಾಮದ ಸ್ಥಳವಾಗಿತ್ತು.[23]

ಅಂತಿಯೋಕ್ಯವು ಸುವಾರ್ತೆಯನ್ನು ಮತ್ತು ಅನ್ಯಜನರ ಮಧ್ಯದಲ್ಲಿ ಸೇವೆಯನ್ನು ವಿಸ್ತರಿಸುವದಕ್ಕೆ ಸೂಕ್ತವಾದ ಸ್ಥಳವಾಗಿತ್ತು. ಕೈಸರೈಯದಲ್ಲಿ ಕೊರ್ನೇಲ್ಯ ಮತ್ತು ಆತನ ಮನೆಯವರು ಪರಿವರ್ತನೆಗೊಂಡ ಪ್ರಥಮ ಅನ್ಯಜನರಾಗಿದ್ದರಾದರೂ (ಅಪೊಸ್ತಲರ ಕೃತ್ಯಗಳು 10:1-11:18), ಆನ್ಯಜನರ ಮಧ್ಯದಲ್ಲಿನ ಸೇವೆಯು ಬಹಳ ತ್ವರಿತಗತಿಯಲ್ಲಿ ಬೆಳೆಯಲಾರಂಭಿಸಿದ್ದು ಅಂತಿಯೋಕ್ಯದಲ್ಲಿಯೇ ಆಗಿತ್ತು. ಬಾರ್ನಬ ಮತ್ತು ಪೌಲ ಒಟ್ಟಾಗಿ ಬಹಳ ಯಶಸ್ವಿಯಾಗಿ ಸೇವೆಯನ್ನು ಮಾಡಿದ್ದರು (ಅಪೊಸ್ತಲರ ಕೃತ್ಯಗಳು 11:19-26). ಅಂತಿಯೋಕ್ಯದಲ್ಲಿನ ಸಭೆಯು ಬರಗಾಲದ ಪರಿಹಾರವನ್ನು ಕೊಟ್ಟು ಪೌಲ ಮತ್ತು ಬಾರ್ನಬರನ್ನು ಯೆರೂಸಲೇಮಿಗೆ ಕಳುಹಿಸಿ ಕೊಟ್ಟಿತ್ತು (ಅಪೊಸ್ತಲರ ಕೃತ್ಯಗಳು 11:27-30), ಮತ್ತು ಅದು ಈ ವ್ಯಕ್ತಿಗಳನ್ನು ಅವರ ಮೊದಲನೆಯ ಸುವಾರ್ತಾ ಪ್ರಯಾಣಕ್ಕೆ ಕಳುಹಿಸಿ ಕೊಟ್ಟಿತ್ತು (ಅಪೊಸ್ತಲರ ಕೃತ್ಯಗಳು 13:1-14:28).

ಯೆರೂಸಲೇಮಿನಲ್ಲಿದ್ದ ಸಭೆಯು ಮೂಲತಃ ಬಾರ್ನಬನನ್ನು ಅಂತಿಯೋಕ್ಯದಲ್ಲಿ ಸೇವೆ ಮಾಡಬೇಕೆಂದು ಕಳುಹಿಸಿತ್ತು. ಕಾಲದ ಯಾವದೋ ಒಂದು ಸಂದರ್ಭದಲ್ಲಿ, **ಕೇಫ** (ಪೇತ್ರ) ಅಲ್ಲಿಗೆ ಹೋಗಿದ್ದನು, ಬಹುಶಃ ಆತನು ಅಲ್ಲಿನ ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದು ಆಗಿರಬಹುದು. ಪೇತ್ರನು ಎಷ್ಟು ಸಮಯವನ್ನು ಅಂತಿಯೋಕ್ಯದಲ್ಲಿ ಕಳೆದನೆಂಬುದನ್ನು ವಾಕ್ಯಭಾಗವು ತಿಳಿಸುವದಿಲ್ಲ, ಆದರೆ "ಅನ್ಯಜನರೊಂದಿಗೆ ಕೂತುಕೊಂಡು ಊಟ ಮಾಡುವದಕ್ಕೆ ಯಾವದೇ ಹಿಂಜರಿಕೆಗಳು ಆತನಲ್ಲಿರಲಿಲ್ಲ"[24] ಎಂಬುದನ್ನು ಬೇರೆಯವರು ಗಮನಿಸುವದಕ್ಕೆ ಸಾಧ್ಯವಾಗುವಷ್ಟು ದೀರ್ಘಕಾಲ ಆಗಿತ್ತು.

ಪೇತ್ರನು ಅನ್ಯಜನಾಂಗದ ಕ್ರೈಸ್ತರಿಂದ ದೂರಕ್ಕೆ ಸರಿದುಕೊಂಡ ವೇಳೆ, ಪೌಲನು **ಅವನನ್ನು ಮುಖಾಮುಖಿಯಾಗಿ ಎದುರಿಸಿದನು**; ಆತನ ಆತ್ಮದ ಮೇಲಿನ ಪ್ರೀತಿ ಮತ್ತು ಕಳಕಳಿಯ ನಿಮಿತ್ತ ಪೌಲನು ನೇರವಾಗಿ ಆತನನ್ನು ಗದರಿಸಿದನು. ಖಂಡಿತವಾಗಿಯೂ, ಪೇತ್ರನು **ದೋಷಿಯಾಗಿ ಕಾಣಿಸಿಕೊಂಡದರಿಂದ**ಲೇ ಆತನು ಮಾತಾಡಿದ್ದನು. NIV1984 ತರ್ಜುಮೆಯು "ಆತನಲ್ಲಿ ಸ್ಪಷ್ಟವಾಗಿ ತಪ್ಪಿರುವದು ಕಾಣಿಸುತ್ತಿತ್ತು" ಎಂದು ಹೇಳುತ್ತದೆ. ಈ ದುರ್ಬಲವಾದ ಅನುವಾದವು καταγινώσκω (*kataginōskō*)[25] ಎಂಬ ಪದದ

ಗಂಭೀರತೆಯನ್ನು ಸೆರೆ ಹಿಡಿಯುವದಿಲ್ಲ.

**ವಚನ 12.** ಭಕ್ತಿಯುಳ್ಳ ಅನ್ಯಜನರು ಯೆಹೂದ್ಯರೊಂದಿಗೆ ಸಭಾಮಂದಿರಗಳಲ್ಲಿ ನಡೆಯುತ್ತಿದ್ದ ಆರಾಧನೆಗಳಿಗೆ ಹೋಗುವದು ಸಾಮಾನ್ಯವಾಗಿತ್ತಾದರೂ, ಯೆಹೂದ್ಯರು ಆಗಲೂ ಅವರ ಸಂಗಡ ಕೂತು ಊಟ ಮಾಡುತ್ತಿರಲಿಲ್ಲ. ಪೇತ್ರನು ಬೇರೆ ದಾರಿಯನ್ನು ಅನುಸರಿಸುತ್ತಿದ್ದನು, ಯಾಕೆಂದರೆ ಆತನಿಗೆ ಚರ್ಮಕಾರನಾದ ಸೀಮೋನನ ಮನೆಯ ಮಾಳಿಗೆಯ ಮೇಲೆ ಪ್ರಾರ್ಥನೆಯನ್ನು ಮಾಡುತ್ತಿದ್ದ ವೇಳೆ ಅಶುದ್ಧ ಪ್ರಾಣಿಗಳನ್ನೊಳಗೊಂಡ ಬಲೆಯೊಂದರ ದರ್ಶನವು ಉಂಟಾಗಿತ್ತು (ಅಪೊಸ್ತಲರ ಕೃತ್ಯಗಳು 10:9-16). ಒಂದು ಸ್ವರವು ಆತನಿಗೆ "ದೇವರು ಶುದ್ಧಮಾಡಿದ್ದನ್ನು ನೀನು ಹೊಲೆ ಎನ್ನಬೇಡವೆಂದು" ಎಂದು ಹೇಳಿತು (ಅಪೊಸ್ತಲರ ಕೃತ್ಯಗಳು 10:15). ಈ ದರ್ಶನದ ಬಳಿಕವಷ್ಟೇ ಪೇತ್ರನು ಅನ್ಯಜನರಿಗೆ ಸುವಾರ್ತೆಯನ್ನು ಸಾರುವದಕ್ಕಾಗಿ ಕೊರ್ನೇಲ್ಯನ ಮನೆಗೆ ಹೋಗಿದ್ದನು. ಅಲ್ಲಿ ಸೇರಿ ಬಂದಿದ್ದ ಜನರ ಗುಂಪಿಗೆ ಪೇತ್ರನು ಅನ್ಯಜನರೊಂದಿಗೆ ಸಂಬಂಧವಿಟ್ಟುಕೊಳ್ಳುವದು ಅಥವಾ ಭೇಟಿ ಮಾಡುವದು ಯೆಹೂದ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿದೆ, ಆದರೆ ತಾನು "ಯಾವ ಮನುಷ್ಯನನ್ನಾದರೂ ಹೊಲೆಯನು ಇಲ್ಲವೆ ಅಶುದ್ಧನು ಅನ್ನಬಾರದೆಂದು" ದೇವರು ತೋರಿಸಿ ಕೊಟ್ಟಿದ್ದಾನೆಂದು ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 10:28). ಕೊರ್ನೇಲ್ಯನ ಮನೆಯವರಿಗೆ ಸುವಾರ್ತೆಯನ್ನು ಸಾರಿ ಅವರಿಗೆ ದೀಕ್ಷಾಸ್ನಾನ ಮಾಡಿಸಿದ ಬಳಿಕ, ಅವರ ಬಳಿಯಲ್ಲಿ ಕೆಲವು ದಿವಸ ಉಳಿದುಕೊಳ್ಳಬೇಕೆಂದು ಪೇತ್ರನನ್ನು ಕೇಳಿಕೊಳ್ಳಲಾಗುತ್ತದೆ (ಅಪೊಸ್ತಲರ ಕೃತ್ಯಗಳು 10:48). ಅವರು ಅನ್ಯಜನರಾಗಿದ್ದರಾದರೂ, ಆತನು ಅವರ ಸಂಗಡ ಊಟ ಮಾಡಿದನು (ಅಪೊಸ್ತಲರ ಕೃತ್ಯಗಳು 11:3). ಅದೇ ರೀತಿಯಲ್ಲಿಯೇ, ಪೇತ್ರನು ಅಂತಿಯೋಕ್ಯದಲ್ಲಿ ಉಳಿದುಕೊಂಡಿದ್ದ ವೇಳೆ, **ಅವನು ಅನ್ಯಜನರ ಸಂಗಡ ಊಟಮಾಡುತ್ತಿದ್ದನು**.

ಪೇತ್ರನು ಅನ್ಯಜನರ ಸಂಗಡ ಕೂತುಕೊಂಡು ಊಟ ಮಾಡುತ್ತಿರುವ ಮಧ್ಯದಲ್ಲಿಯೇ ಅಂತಿಯೋಕ್ಯದಿಂದ **ಕೆಲವರು** ಬಂದಿದ್ದರು. ಇವರು ಸ್ಪಷ್ಟವಾಗಿ ಧರ್ಮಶಾಸ್ತ್ರಕ್ಕಾಗಿ ಅಭಿಮಾನ ಹೊಂದಿದ್ದ ಯೆರೂಸಲೇಮಿನ ಯೆರೂಸಲೇಮಿನ ಕ್ರೈಸ್ತರಾಗಿದ್ದರು. ಅವರು **ಯಾಕೋಬನ ಕಡೆಯಿಂದ** ಬಂದವರೆಂದು ಬಣ್ಣಿಸಲ್ಪಟ್ಟಿದ್ದಾರೆ, ಅಂದರೆ ಕರ್ತನ ತಮ್ಮನ ಕಡೆಯಿಂದ ಬಂದಿದ್ದರು (1:19; 2:9). ಅವರಿಗೆ ಯಾಕೋಬನ ಪರಿಚಯವು ಚೆನ್ನಾಗಿ ಇತ್ತೆಂಬುದರಲ್ಲಿ, ಮತ್ತು ಅಂತಿಯೋಕ್ಯಕ್ಕೆ ಹೋಗುವಂತೆ ಆತನು ಅವರಿಗೆ ಆದೇಶವನ್ನು ಸಹ ಕೊಟ್ಟಿರಬಹುದೆಂಬುದರಲ್ಲಿ ಸಂದೇಹವೇ ಇಲ್ಲ. ಹೇಗೂ, ಯೆಹೂದಿ ಹಾಗೂ ಅನ್ಯಜನಾಂಗದ ಕ್ರೈಸ್ತರ ನಡುವೆ ಸಾಮಾಜಿಕ ಪ್ರತ್ಯೇಕತೆಯನ್ನು ಕಡ್ಡಾಯಗೊಳಿಸಬೇಕೆಂದು ಆತನು ಅವರನ್ನು ಕಳುಹಿಸಿದ್ದನೆಂದು ಭಾವಿಸಿಕೊಳ್ಳಕೂಡದು. ಅನಂತರ, ಯೆರೂಸಲೇಮಿನ ಸಮಾಲೋಚನಾ ಸಭೆಯ ಫಲಿತವಾಗಿ ಬರೆಯಲ್ಪಟ್ಟಿದ್ದ ಪತ್ರದಲ್ಲಿ, ಅಪೊಸ್ತಲರು ಹಾಗೂ ಯೆರೂಸಲೇಮಿನ ಹಿರಿಯರು ಕೆಲವರು ತಮ್ಮ ಬಳಿಯಿಂದ ಹೊರಟು ಬಂದಿದ್ದಾರೆ, ಆದರೆ ಅವರು "ನಮ್ಮಿಂದ ಏನೂ ಅಪ್ಪಣೆಯನ್ನು ಹೊಂದಿಲ್ಲ" ಎಂದು ಬರೆದಿದ್ದರು (ಅಪೊಸ್ತಲರ ಕೃತ್ಯಗಳು 15:24).

ಯೆಹೂದಿಕರಣ ಮಾಡುವವರು ಅಂತಿಯೋಕ್ಯಕ್ಕೆ ಬಂದು ತಲುಪಿದಾಗ, ಪೇತ್ರನು **ಸುನ್ನತಿಯವರಾದ ಅವರಿಗೆ ಅವನು ಭಯಪಟ್ಟು ಅನ್ಯಜನರನ್ನು ಬಿಟ್ಟು ತನ್ನನ್ನು ಪ್ರತ್ಯೇಕಿಸಿಕೊಂಡನು**. ಸ್ಪಷ್ಟವಾಗಿರುವಂತೆ, ಆತನು ಅನ್ಯಜನಾಂಗದ ಕ್ರೈಸ್ತರ ಸಂಗಡ ಊಟ ಮಾಡಿದ್ದರೆ, ಯೆರೂಸಲೇಮಿನಿಂದ ಬಂದ ಯೆಹೂದ್ಯರು ಆತನನ್ನು ಅಶುದ್ಧನೆಂದು ಪರಿಗಣಿಸುತ್ತಿದ್ದರು ಮತ್ತು ಆತನ ಸಂಗಡ ಕೂತು ಊಟ ಮಾಡುತ್ತಿರಲಿಲ್ಲ. "ಅಶುದ್ಧ"

ಅನ್ಯಜನರ ಸಂಗಡ ಕೂತು ಊಟ ಮಾಡುವದರಿಂದ ದೂರವಿರುವ ಮೂಲಕ ಈ ಯೆಹೂದ್ಯರಿಗೆ ಪೇತ್ರನು ಹೆಚ್ಚು ಸ್ವೀಕೃತನಾಗುತ್ತಿದ್ದನು. "ಪ್ರತ್ಯೇಕಿಸಿಕೊಂಡನು" ಎಂಬುದಕ್ಕಿರುವ ಗ್ರೀಕ್ ಪದವು (ὑποστέλλω, *hupostellō*) ಎಂಬುದು "ಒಂದು ಸ್ಪಷ್ಟವಾಗಿ ಕಾಣಿಸದರ ಆಶ್ರಯದ ಸ್ಥಾನಕ್ಕೆ ಹಿಂದೆ ಸರಿದು ಹೋಗುವದನ್ನು ಅಥವಾ ಕಡಿತಗೊಳಿಸಿಕೊಳ್ಳುವದನ್ನು ಬಣ್ಣಿಸುವದಕ್ಕೆ ಬಳಸುವ ಒಂದು ಮಿಲಿಟರಿ ಅಥವಾ ರಾಜಕೀಯ ಶಬ್ದವಾಗಿರುತ್ತದೆ."[26]

ಪೇತ್ರನಿಗೆ ತನ್ನ ಸ್ವಂತ ಯೆಹೂದಿ ಸಹೋದರರಿಂದ ಟೀಕೆ ಅಥವಾ ಬಹಿಷ್ಕಾರಕ್ಕೆ ಗುರಿಯಾಗುವದು ಇಷ್ಟವಿರಲಿಲ್ಲ. ಆತನು ಅನ್ಯಜನರಿಂದ ತನ್ನನ್ನು ಪ್ರತ್ಯೇಕಿಸಿಕೊಂಡ ಕೃತ್ಯವು "ಸುನ್ನತಿಯಿಲ್ಲದ ಸಹೋದರರಿಗೆ ಇನ್ನಷ್ಟು ಅಶುದ್ಧತೆಯ ಕಳಂಕವನ್ನು ಹಚ್ಚುವದಾಗಿತ್ತು."[27] ಆತನು ಪ್ರತ್ಯೇಕಿಸಿಕೊಂಡಿದ್ದು ದೇವರಿಂದ ಆತನಿಗೆ ಬಂದಿದ್ದ ದರ್ಶನದೊಂದಿಗೆ, ಕೈಸರೈಯದಲ್ಲಿ ಕೊರ್ನೇಲ್ಯನ ಮನೆಯಲ್ಲಿನ ಆತನ ಕ್ರಿಯೆಗಳೊಂದಿಗೆ, ಮತ್ತು ಅಂತಿಯೋಕ್ಯದಲ್ಲಿ ಆತನು ಮುಂಚೆ ಮಾಡುತ್ತಿದ್ದ ಆಚರಣೆಗಳೊಂದಿಗೆ ಅಸಾಮಂಜಸ್ಯತೆಯುಳ್ಳದ್ದಾಗಿತ್ತು.

ಪೇತ್ರನು ಅನ್ಯಜನರೊಂದಿಗೆ ಊಟ ಮಾಡುತ್ತಿದ್ದದರ ಉಲ್ಲೇಖವು ಒಂದು ಸಾಮಾನ್ಯ ಊಟವಾಗಿತ್ತೆಂದು ತೋರುತ್ತದಾದರೂ, ಈ ಮನೋಭಾವವು ಕರ್ತನ ಭೋಜನದ ಆಚರಣೆಯ ಮೇಲೆ ಹೇಗೆ ಪರಿಣಾಮವನ್ನು ಬೀರಿರಲು ಸಾಧ್ಯವೆಂಬುದಾಗಿ ಒಬ್ಬನು ಚಕಿತಗೊಳ್ಳಬಹುದು. ಯೆರೂಸಲೇಮಿನ ಯೆಹೂದಿ ಕ್ರೈಸ್ತರು ಅನ್ಯಜನಾಂಗದ ಕ್ರೈಸ್ತರ ಸಂಗಡ ಆರಾಧನೆಯನ್ನು ಸಹ ಮಾಡುವರೋ? ಕರ್ತನ ಮೇಜಿನ ಸುತ್ತಲು ಒಟ್ಟಾಗಿ ಸಮಯವನ್ನು ಕಳೆಯುವ ವಿಷಯಕ್ಕೆ ಬಂದರೆ ಏನಾಗುವದು?

**ವಚನ 13.** ಪೇತ್ರನು ಒಬ್ಬ ಅಪೊಸ್ತಲನು ಮತ್ತು ಸಭೆಯ ನಾಯಕನು ಆಗಿದ್ದನಾದ್ದರಿಂದ, ಆತನ ಕೃತ್ಯಗಳು **ಇದಲ್ಲದೆ ಮಿಕ್ಕಾದ ಯೆಹೂದ್ಯರೂ ಅವನೊಂದಿಗೆ ಸೇರಿ ಹಾಗೆಯೇ ಕಪಟ ಮಾಡು**ವಂತೆ ಪ್ರಭಾವಗೊಳಿಸಿತ್ತು. ಅನ್ಯಜನರೊಂದಿಗೆ ಊಟದಲ್ಲಿ ಜೊತೆಯಾಗಿ ಕೂತುಕೊಂಡಿದ್ದ ಅಂತಿಯೋಕ್ಯದಲ್ಲಿದ್ದ ಯೆಹೂದಿ ಕ್ರೈಸ್ತರು ಸಹ ತಮ್ಮನ್ನು ಅವರಿಂದ ಪ್ರತ್ಯೇಕಿಸಿಕೊಂಡರು. "ಸೇರಿ ಹಾಗೆಯೇ ಕಪಟ ಮಾಡಿದರು" ಎಂಬುದು συνυποκρίνομαι (*sunupokrinomai*) ಎಂಬುದರ ಅನುವಾದವಾಗಿದ್ದು, ಅದರರ್ಥವು "ನಾಟಕ" ಅಥವಾ "ಕಪಟತನ"ದ ವಿಷಯಕ್ಕೆ ಸಂಬಂಧಿಸಿದಂತೆ "ಒಂದು ಪಾತ್ರವನ್ನ ನಿರ್ವವಹಿಸಲು ಅಥವಾ ಕಪಟವಾಡಲು ಜೊತೆಗೂಡಿಕೊಳ್ಳುವದು" ಎಂದಾಗಿದೆ.[28] ಈ ಪದವು ಹಿಂದಿನ ಕಾಲದಲ್ಲಿ ಗ್ರೀಕ್ ನಟರು ವಿವಿಧ ಪಾತ್ರಗಳನ್ನು ನಿರ್ವಹಿಸುವದಕ್ಕೆ ಮುಖವಾಡಗಳನ್ನು ಹಾಕಿಕೊಳ್ಳುತ್ತಿದ್ದದನ್ನು ನೆನಪಿಸುತ್ತದೆ.

ಯೆಹೂದಿ ಸಾಮಾಜಿಕ ಪದ್ಧತಿಗಳ ಪ್ರಕಾರ ನಡೆದುಕೊಳ್ಳಬೇಕೆಂಬ ಒತ್ತಡವು ಎಷ್ಟು ಅಧಿಕವಾಗಿತ್ತೆಂದರೆ **ಬಾರ್ನಬನೂ ಅವರ ಕಪಟದ ಸೆಳವಿಗೆ ಬಿದ್ದನು**. ಪೌಲನ ಸ್ವತಃ ನಿಷ್ಠೆಯುಳ್ಳ ಜೊತೆಗೆಲಸದವನು ಅನ್ಯಜನರಿಂದ ತನ್ನನ್ನು ಬೇರ್ಪಡಿಸಿಕೊಂಡನೆಂಬುದು ಆತನಿಗೆ ಬಹಳ ಆಳವಾದ ಆಘಾತ ಹಾಗೂ ನೋವು ತಂದಿರಬಹುದು. ಅಂತೂ, ಬಾರ್ನಬನು ಧೈರ್ಯದಾಯಕ (ಅಪೊಸ್ತಲರ ಕೃತ್ಯಗಳು 4:36) ಮತ್ತು ಕ್ರೈಸ್ತರನ್ನು ಒಗ್ಗೂಡಿಸಿದವನು ಎಂದು ಪರಿಚಿತನಾಗಿದ್ದನಷ್ಟೆ. ಬೇರೆ ಎಲ್ಲರೂ ಹೆದರಿದ್ದ ವೇಳೆ, ಆತನು ಪೌಲನನ್ನು (ಈ ಮುಂಚೆ ಹಿಂಸಕನಾಗಿದ್ದವನನ್ನು) ಯೆರೂಸಲೇಮಿನ ಸಭೆಯೊಂದಿಗೆ ಅನ್ಯೋನ್ಯತೆಯನ್ನು ಹೊಂದುವಂತೆ ಅಪೊಸ್ತಲರ ಬಳಿಗೆ ಕರೆದುಕೊಂಡು ಬಂದಿದ್ದನು (ಅಪೊಸ್ತಲರ ಕೃತ್ಯಗಳು

9:27). ಅಷ್ಟುಮಾತ್ರವಲ್ಲದೆ, ಬಾರ್ನಬನು ಅಂತಿಯೋಕ್ಯದಲ್ಲಿ ಸುವಾರ್ತೆಯನ್ನು ಸಾರುವದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದನು, ಮತ್ತು ಈ ಸೇವೆಯಲ್ಲಿ ಜೊತೆಗೂಡಬೇಕೆಂದು ಪೌಲನನ್ನು ಕರೆಯುವದಕ್ಕೆ ತಾರ್ಸಗೆ ಹೋದವನು ಈತನೇ ಆಗಿದ್ದನು (ಅಪೊಸ್ತಲರ ಕೃತ್ಯಗಳು 11:22-26). ಬಾರ್ನಬನು ಈಗ ತನ್ನನ್ನು ಅನ್ಯಜನರಿಂದ ಬೇರ್ಪಡಿಸಿಕೊಳ್ಳುವದನ್ನು, ಅವರಲ್ಲಿ ಕೆಲವರನ್ನು ಬಹುಶಃ ಆತನೇ ಕ್ರಿಸ್ತನ ಬಳಿಗೆ ನಡಿಸಿದ್ದರೂ ಅವರಿಂದ ಬೇರ್ಪಡಿಸಿಕೊಳ್ಳುವದನ್ನು ನೋಡಿ ಪೌಲನಿಗೆ ಗಮನಾರ್ಹವೆನಿಸಿತ್ತು. ಬಾರ್ನಬನು ತನ್ನ ಯೆಹೂದಿ ಸಹೋದರರ ಮಾದರಿಗಳನ್ನು ಅನುಸರಿಸದಿದ್ದರೆ ಬಹುಶಃ ಆತನು ಎಂದಿಗೂ ಈ ಕ್ರೈಸ್ತರಿಂದ ಬೇರ್ಪಡಿಸಿಕೊಂಡಿರುತ್ತಿರಲಿಲ್ಲ.

**ವಚನ 14.** ಈ ಮನುಷ್ಯರು **ಸುವಾರ್ತೆಯ ಸತ್ಯಾರ್ಥದ ಪ್ರಕಾರ ನೆಟ್ಟಗೆ ನಡೆಯುವದಿಲ್ಲವೆಂದು** ಹೇಳಿದನು. ಗ್ರೀಕ್ ಪದ ὀρθοποδέω (*orthopodeō*), ಇದು ಆಂಗ್ಲದ "ಆರ್ಥೋಪೆಡೆಕ್" ಎಂಬದರ ಹಿಂದೆ ಇರುವಂಥದಾಗಿದ್ದು ಅಕ್ಷರಶಃ "ನೆಟ್ಟಗೆ ನಡೆ" ಎಂಬ ಅರ್ಥವನ್ನು ಕೊಡುತ್ತದೆ. ಅದರಲ್ಲಿ ರಸ್ತೆಯಲ್ಲಿ ನಡೆಯುವದು ಅಥವಾ ಸರಿಯಾದ ಗುರಿಯ ಕಡೆಗೆ ಸಾಗುತ್ತಿರುವದು ಎಂಬ ಯೋಚನೆಯು ಅಡಕವಾಗಿರುತ್ತದೆ. ಅವರ ಕೃತ್ಯಗಳ ಮೂಲಕ, ಪೇತ್ರ ಹಾಗೂ ಯೆಹೂದಿ ಕ್ರೈಸ್ತರು "ಸುವಾರ್ತೆಯ ಸತ್ಯಾರ್ಥ"ವನ್ನು (2:5) - ಏನಂದರೆ ಯೆಹೂದ್ಯರು ಹಾಗೂ ಅನ್ಯಜನರು ಕ್ರಿಸ್ತನಲ್ಲಿ ಒಂದೇ ಆಗಿರುವರು ಎಂಬುದೆ (3:28) - ತಪ್ಪಾಗಿ ಅರ್ಥೈಸಿದ್ದರು. Leon Morrisನು ಗಮನಕ್ಕೆ ತರುವ ಪ್ರಕಾರ, ಊಟದ ಅನ್ಯೋನ್ಯತೆಯಿಂದ ಹಿಂದೆ ಸರಿದದ್ದು "ಅಲ್ಲಿಯ ತನಕವೂ ತಮಗೆ ಸಭೆಯೊಳಗೆ ಬೇರೆ ಯಾವದೇ ಯೆಹೂದ್ಯನಿಗಿರುವಂತೆಯೇ ಸ್ಥಾನವಿರುವದೆಂದು ಭಾವಿಸಿಕೊಂಡಿದ್ದ ಅನ್ಯಜನಾಂಗದ ವಿಶ್ವಾಸಿಗಳನ್ನು ದ್ವಿತಿಯ ದರ್ಜೆಯ ಕ್ರೈಸ್ತರನ್ನಾಗಿ ಮಾಡಿತ್ತು."[29]

ಪೌಲನು ಈ ವಿವಾದದ ಕುರಿತಾಗಿ ಪೇತ್ರನೊಂದಿಗೆ ಎಲ್ಲರ ಮುಂದೆ ಧೈರ್ಯದಿಂದ ಮಾತಾಡಿದ್ದನು. ಕೆಲವು ವಿಷಯಗಳನ್ನು ಏಕಾಂತದಲ್ಲಿ ಮಾತಾಡುವದು ಅವಶ್ಯಕವಾಗಿರುತ್ತದಾದರೂ, ಈ ವಿಷಯದ ಕುರಿತಂತೂ ಎಲ್ಲರ ಮುಂದೆಯೇ ಮಾತಾಡುವ ಅಗತ್ಯವಿತ್ತು. 2:1-10ರಲ್ಲಿ ಪದೇ ಪದೆ ಸೂಚಿಸಲ್ಪಟ್ಟಿರುವ ಪ್ರಕಾರ, ಪೌಲನು ತನ್ನನ್ನು ಸಭೆಯ ಬೇರೆ ಯಾವದೇ ನಾಯಕರಿಗಿಂದ ಕಡಿಮೆ ಎಂಬುದಾಗಿ ಭಾವಿಸಿಕೊಳ್ಳಲಿಲ್ಲ. ಪೇತ್ರನು ಕ್ರಿಸ್ತನ ಅಪೊಸ್ತಲನಾಗಿದ್ದನಾದರೂ, ಆತನು ದೋಷಾತೀತನೇನೂ ಆಗಿರಲಿಲ್ಲ.

ಪೌಲನು ಪೇತ್ರನನ್ನು ಹೀಗೆ ಕೇಳಿದನು, **ನೀನು ಯೆಹೂದ್ಯನಾಗಿದ್ದು ಯೆಹೂದ್ಯರಂತೆ ನಡೆಯದೆ ಅನ್ಯಜನರಂತೆ ನಡೆದ ಮೇಲೆ ಅನ್ಯಜನರಿಗೆ - ನೀವು ಯೆಹೂದ್ಯರ ಪದ್ಧತಿಗಳನ್ನು ಅನುಸರಿಸಬೇಕೆಂದು ನೀನು ಬಲಾತ್ಕಾರ ಮಾಡುವದು ಹೇಗೆ?** ಪೇತ್ರನು ಅಕ್ಷರಶಃ ಅಥವಾ ಉದ್ದೇಶಪೂರ್ವಕವಾಗಿ "ಅನ್ಯಜನರನ್ನು ಯೆಹೂದ್ಯರಂತೆ ಜೀವಿಸಬೇಕೆಂದು ಒತ್ತಾಯಿಸಲಿಲ್ಲ," ಆದರೆ ಆತನ ಕ್ರಿಯೆಗಳು ಅವರನ್ನು ಆ ದಿಕ್ಕಿನೆಡೆಗೆ ಸಾಗುವಂತೆ ಪ್ರಭಾವಗೊಳಿಸಿರಬಹುದಿತ್ತು. ಊಟದಿಂದ ಹಿಂದೆ ಸರಿಯುವ ಮೂಲಕ, ತಾನು ಅನ್ಯಜನರ ಸಂಗಡ ಊಟ ಮಾಡಬೇಕಾದರೆ ಮೊದಲು ಅವರು ಸುನ್ನತಿ ಮಾಡಿಸಿಕೊಳ್ಳಬೇಕು ಹಾಗೂ ಧರ್ಮಶಾಸ್ತ್ರಕ್ಕೆ ವಿಧೇಯರಾಗಬೇಕು ಎಂಬುದಾಗಿ ಸೂಚಿಸುವವನಾಗಿ ಕಾಣಿಸಿರುವ ಸಂಭವವಿತ್ತು. ಅನ್ಯಜನಾಂಗದವರು ಯೆಹೂದ್ಯರ ಪದ್ಧತಿಗಳನ್ನು ಅನುಸರಿಸಬೇಕೆಂಬುದು ತನ್ನ ಇಂಗಿತವಲ್ಲ ಎಂಬುದಾಗಿ ಪೇತ್ರನು ಪ್ರತ್ಯುತ್ತರವನ್ನು ಕೊಟ್ಟಿರುವ ಸಾಧ್ಯತೆಯಿದೆ. ಹಾಗಿದ್ದರೂ, ಯೆಹೂದಿಕರಣ ಮಾಡುವವರ ಗುರಿಯಂತೂ ಸರಿಯಾಗಿ ಅದೇ ಆಗಿತ್ತು - ಅದೇ ಕಾರಣಕ್ಕಾಗಿಯೇ ಅವರು ಅಂತಿಯೋಕ್ಯಕ್ಕೆ ಬಂದಿದ್ದರು. ಪೇತ್ರನು ಅನ್ಯಜನರಿಂದ

ಬೇರ್ಪಡಿಸಿಕೊಳ್ಳುವದು ಅವರ ಯೋಜನೆಯ ಭಾಗವಾಗಿತ್ತು, ಮತ್ತು ಪೌಲನು ಅದರ ವಿಷಯದಲ್ಲಿ ಪೇತ್ರನನ್ನು ಎಚ್ಚರಗೊಳಿಸಲು ಬಯಸಿದ್ದನು.[30]

ಪೌಲನು 2:14ರಲ್ಲಿ ಕೇಳುವ ಪ್ರಶ್ನೆಯೊಳಗೆ ಎರಡು ಗ್ರೀಕ್ ಪದಗಳು ಕಂಡು ಬರುತ್ತವೆ. ಮೊದಲನೆಯದು ἀναγκάζω (*anankazō*), ಇದು "ಒತ್ತಾಯಪಡಿಸು" ಎಂಬುದಕ್ಕಿರುವ ಪದವಾಗಿದೆ, ಅದು 2:3ರಲ್ಲಿ ಪುನರಾವರ್ತಿಸಲ್ಪಟ್ಟಿದೆ. ಆ ವಚನದಲ್ಲಿ, ಪೌಲನು ಯೆರೂಸಲೇಮಿನಲ್ಲಿರುವ ಮಾನಿಷ್ಠರೆನನಿಸಿಕೊಂಡ ನಾಯಕರನ್ನು - ಅದರಲ್ಲಿ ಪೇತ್ರನು ಸಹ ಸೇರಿದ್ದನು - ಭೇಟಿ ಮಾಡಿದ ವೇಳೆಯಲ್ಲಿ ಅನ್ಯಜನಾಂಗದ ಕ್ರೈಸ್ತನಾದ ತೀತನಿಗೆ "ಸುನ್ನತಿಯಾಗಬೇಕೆಂದು ಯಾರೂ ಬಲಾತ್ಕಾರ ಮಾಡಲಿಲ್ಲ" ಎಂದು ಹೇಳುತ್ತಾನೆ! ಇಲ್ಲಿ ಪೇತ್ರನು ಬೇರ್ಪಡಿಸಿಕೊಂಡಿದ್ದರ ಕಾರ್ಯರೂಪದ ಸೂಚ್ಯಾರ್ಥವು ಏನಾಗಿತ್ತೆಂದರೆ ಆತನು "ಅನ್ಯಜನರಿಗೆ - ನೀವು ಯೆಹೂದ್ಯರ ಪದ್ಧತಿಗಳನ್ನು ಅನುಸರಿಸಬೇಕೆಂದು ನೀನು ಬಲಾತ್ಕಾರ ಮಾಡುವ[ವವನಾಗಿದ್ದನು]" - ಅಂದರೆ ಸುನ್ನತಿ ಮಾಡಿಸಿಕೊಳ್ಳುವದು. "ಬಲತ್ಕಾರ" ಎಂಬ ಪದವು ಪುನರಾವರ್ತನೆಯಾಗಿರುವದು ಕಪಟತನವನ್ನು ಎತ್ತಿ ತೋರಿಸುತ್ತದೆ. ಇನ್ನೊಂದು ಮುಖ್ಯವಾದ ಪದವೆಂದರೆ Ἰουδαΐζω (*Ioudaizō*), ಅದು "ಯೆಹೂದ್ಯರ ಪದ್ಧತಿಗಳನ್ನು ಅನುಸರಿಸು" ಎಂಬುದಾಗಿ ಅನುವಾದಿಸಲ್ಪಟ್ಟಿದೆ. ಆಂಗ್ಲದ "ಜುಡೈಜ್" ಎಂಬ ಪದದ ಹಿಂದಿರುವ ಗ್ರೀಕ್ ಪದವು ಇದೇ ಆಗಿದೆ.[31] ಯೆಹೂದಿಕರಣಗೊಳಿಸುವದರ ಬದಲಾಗಿ, ಕ್ರೈಸ್ತರಿಗೆ ಧರ್ಮಶಾಸ್ತ್ರವನ್ನು ಕೈಗೊಂಡು ನಡೆಯಬೇಕಾಗಿಲ್ಲ ಮತ್ತು ಕ್ರಿಸ್ತನಲ್ಲಿ ಅನ್ಯಜನಾಂಗದ ವಿಶ್ವಾಸಿಗಳ ಐಕ್ಯತೆಯು ಹೆಚ್ಚು ಪ್ರಾಮುಖ್ಯವಾಗಿರುತ್ತದೆ ಎಂಬುದನ್ನು ಯೆಹೂದಿ ಕ್ರೈಸ್ತರು ಗ್ರಹಿಸಿಕೊಳ್ಳುವ ಅಗತ್ಯವಿತ್ತು.

## ಕ್ರಿಸ್ತನಲ್ಲಿಟ್ಟಿರುವ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವದು (2:15-21)

**15ನಾವಂತೂ ಹುಟ್ಟು ಯೆಹೂದ್ಯರು, ಪಾಪಿಗಳೆನಿಸಿಕೊಂಡ ಅನ್ಯಜನರಲ್ಲ; 16ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾವು ಸಹ ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. 17ಆದರೆ ನಾವು ಕ್ರಿಸ್ತನ ಆಶ್ರಯದಲ್ಲಿ ನೀತಿವಂತರೆಂಬ ನಿರ್ಣಯ ಹೊಂದುವದಕ್ಕೆ ಪ್ರಯತ್ನಿಸುತ್ತಿರುವಾಗ ನಾವೂ ಪಾಪಿಗಳಾಗಿ ತೋರಿಬಂದರೆ ಕ್ರಿಸ್ತನು ಪಾಪಕ್ಕೆ ಸಹಾಯಕನೆಂದು ಹೇಳಬೇಕೇನು? ಎಂದಿಗೂ ಹೇಳಬಾರದು. 18ನಾನು ಕೆಡವಿದ್ದನ್ನೇ ತಿರಿಗಿ ಕಟ್ಟಿದರೆ ನನ್ನನ್ನು ನಾನೇ ಅಪರಾಧಿ ಎಂದು ತೋರಿಸಿಕೊಳ್ಳುತ್ತೇನಲ್ಲಾ. 19ನಾನಂತೂ ದೇವರಿಗಾಗಿ ಜೀವಿಸುವದಕ್ಕೋಸ್ಕರ ಧರ್ಮಪ್ರಮಾಣದ ಮೂಲಕವಾಗಿ ಧರ್ಮಪ್ರಮಾಣದ ಪಾಲಿಗೆ ಸತ್ತೆನು. 20ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು. 21ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ. ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು**

**ಹೊಂದಿದ್ದಕ್ಕೆ ಕಾರಣವೇ ಇಲ್ಲ.**

NASBಯಲ್ಲಿ ಪೌಲನು ಅಧ್ಯಾಯದ ಉಳಿದ ಭಾಗದಲ್ಲೆಲ್ಲಾ ಪೇತ್ರನನ್ನು ಉದ್ದೇಶಿಸಿ ಮಾತಾಡುವದಾಗಿ ಇರುತ್ತದೆ (2:15-21); ವಾಕ್ಯಭಾಗವೆಲ್ಲವನ್ನೂ ಪ್ರಕ್ಷೆಪ ಚಿಹ್ನೆಯಲ್ಲಿಡಲಾಗಿರುತ್ತದೆ (ನೋಡಿರಿ NIV; NKJV). ಹಲವು ತರ್ಜುಮೆಗಳು ಉಲ್ಲೇಖನವನ್ನು 2:14ರ ಅಂತ್ಯಭಾಗದಲ್ಲಿ ನಿಲ್ಲಿಸುತ್ತವೆ (GNT; NJB; NRSV; REB; NCV; ESV) ಅಥವಾ 2:16ರ ಅಂತ್ಯಭಾಗದಲ್ಲಿ ನಿಲ್ಲಿಸುತ್ತವೆ (NLT). ಈ ವಿಭಾಗವು ವಿಶೇಷವಾಗಿ ಪೌಲನು ಪೇತ್ರನೊಂದಿಗೆ ಮಾಡುವ ಸಂಭಾಷಣೆಯೊಂದಿಗೆ ಸಂಬಂಧಿಸಿರಬಹುದಾದರೂ, ಅದು ಅಂತಿಯೋಕ್ಯದಲ್ಲಿದ್ದ ಇತರ ಯೆಹೂದಿ ಕ್ರೈಸ್ತರಿಗೆ - ಮತ್ತು ಪೌಲನ ಗಲಾತ್ಯದ ಶ್ರೋತೃಗಳಿಗೆ - ಸಹ ಸಂಬಂಧಪಟ್ಟದ್ದಾಗಿತ್ತು.

**ವಚನ 15.** ಪೌಲನು ಮುಂದುವರೆಸಿ ಹೀಗೆ ಹೇಳಿದನು, **ನಾವಂತೂ ಹುಟ್ಟು ಯೆಹೂದ್ಯರು, ಪಾಪಿಗಳೆನಿಸಿಕೊಂಡ ಅನ್ಯಜನರಲ್ಲ**. "ನಾವು" (ἡμεῖς, *hēmeis*) ಎಂಬ ಪುರುಷವಾಚಕ ಸರ್ವನಾಮವು ಗ್ರೀಕ್ ಭಾಷೆಯಲ್ಲಿ ಒತ್ತಿ ಹೇಳುವಂಥದಾಗಿದೆ; ಪೌಲನು ಈ ಜೊತೆ ಯೆಹೂದ್ಯರೊಂದಿಗೆ ತನ್ನನ್ನು ಸಂಬಂಧಗೊಳಿಸಿಕೊಳ್ಳುತ್ತಿದ್ದಾನೆ, ಅವರ ಪೂರ್ವಜರು ಒಂದೇ ಆಗಿದ್ದರು, ಅಂದರೆ ಅಬ್ರಹಾಮ, ಇಸಾಕ, ಮತ್ತು ಯಾಕೋಬರು. "ಹುಟ್ಟು" (φύσις, *phusis*) ಎಂಬುದು "ಸ್ವಾಭಾವಿಕ ಕ್ರಮ" ಅಥವಾ "ಸ್ವಾಭಾವಿಕ ಸ್ಥಿತಿ" ಎಂಬುದನ್ನು ಸೂಚಿಸುತ್ತದೆ. NRSV ತರ್ಜುಮೆಯಲ್ಲಿ "ನಾವು ಸ್ವತಃ ಜನ್ಮದಿಂದಲೇ ಯೆಹೂದ್ಯರು" ಎಂದಿರುತ್ತದೆ. ಈ ಜನರಿಗೆ ದೇವರ ಒಡಂಬಡಿಕೆಯ ಜನಾಂಗದಲ್ಲಿ ಹುಟ್ಟಿದವರಾಗಿ ಒಂದು ಶ್ರೇಷ್ಠವಾದ ಸವಲತ್ತು ಇತ್ತು (ನೋಡಿರಿ 3:1, 2).

ಯೆಹೂದ್ಯರಾಗಿರುವದು ಅವರನ್ನು "ಅನ್ಯಜನರಿಂದ" ಪ್ರತ್ಯೇಕಿಸಿತ್ತು, ಅವರನ್ನು ಅನೇಕ ಸಾರಿ "ಪಾಪಿಗಳು" (ἁμαρτωλός, *hamartōlos* ಎಂಬದರಿಂದ ಬಂದದ್ದು) ಕರೆಯಲಾಗುತ್ತಿತ್ತು. ಅನ್ಯಜನರನ್ನು ನಿಯಂತ್ರಣವಿಲ್ಲದವರು, ಧರ್ಮಶಾಸ್ತ್ರವಿಲ್ಲದವರು ಎಂದು ನೋಡಲಾಗುತ್ತಿತ್ತು. ಖಂಡಿತವಾಗಿಯೂ, ಅನೇಕ ಅನ್ಯಜನರು ತಮ್ಮ ವಿಗ್ರಹಾರಾಧನೆ, ಲೈಂಗಿಕ ವಿಕೃತಿಗಳು, ಮತ್ತು ಇತರ ಘೋರವಾದ ಪಾಪಗಳಿಂದಾಗಿ ದೇವರಿಂದ ಬಹಳಷ್ಟು ದೂರವಾಗಿ ಸಾಗಿ ಬಿಟ್ಟಿದ್ದರು (ರೋಮಾ 1:18-32). "ಪಾಪಿಗಳೆನಿಸಿಕೊಂಡ" ಎಂಬ ಪದವು ಧರ್ಮಶಾಸ್ತ್ರದ ಪ್ರಕಾರ ನಡೆಯದವರಾಗಿ ಯೆಹೂದಿ ಜನಾಂಗದಲ್ಲಿದ್ದವರಿಗೆ ಸಹ ಅನ್ವಯಿಸಲಾಗುತ್ತಿತ್ತು; ಇದು ಪರಿಚಿತವಾಗಿರುವ "ಸುಂಕದವರು ಮತ್ತು ಪಾಪಿಗಳು" ಎಂಬ ಪದಗುಚ್ಛದಲ್ಲಿ ಕಾಣಿಸಿಕೊಳ್ಳುತ್ತದೆ (ಮತ್ತಾಯ 9:10, 11; 11:19; ಮಾರ್ಕ 2:15, 16; ಲೂಕ 5:30; 7:34; 15:1).

**ವಚನ 16.** ಪೌಲನು, ಪೇತ್ರ, ಮತ್ತು ಇತರ ಯೆಹೂದಿ ಕ್ರೈಸ್ತರಿಗೆ ಅನ್ಯಜನರಿಗಿಂತ ಅನುಕೂಲ ಸ್ಥಿತಿ ಇತ್ತಾದರೂ, ಅವರು ಆಗಲೂ ರಕ್ಷಣೆಯ ಅಗತ್ಯತೆಯಲ್ಲಿದ್ದರು. ಪೌಲನು ಈ ವ್ಯಕ್ತಿಗಳಿಗೆ, ಮಾತ್ರವಲ್ಲದೆ ತನ್ನ ಗಲಾತ್ಯದ ವಾಚಕರಿಗೆ ಸಹ ಹೇಳಿದ್ದೇನೆಂದರೆ, **ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.** ಯೆಹೂದ್ಯರು ಧರ್ಮಶಾಸ್ತ್ರಕ್ಕೆ ದೋಷವಿಲ್ಲದಂತೆ ವಿಧೇಯರಾಗುವದಕ್ಕೆ ಅಶಕ್ತರಾಗಿದ್ದರಾದ್ದರಿಂದ, ಅವರು ದೇವರೊಂದಿಗಿನ ತಮ್ಮ ಸಂಬಂಧವನ್ನು ಸರಿಪಡಿಸಿಕೊಳ್ಳಲಾಗಲಿಲ್ಲ (ರೋಮಾ 7:7-25). ಒಬ್ಬ ವ್ಯಕ್ತಿಯು ಧರ್ಮಶಾಸ್ತ್ರದ ಕ್ರಿಯೆಗಳಿಂದಾಗಿ ರಕ್ಷಣೆ ಹೊಂದಬಲ್ಲನು ಎಂಬುದನ್ನು ಪೌಲನು ನಿರಂತರವಾಗಿ ನಿರಾಕರಿಸುತ್ತಲೇ ಬಂದನು. ಅವರು **ಯೇಸು ಕ್ರಿಸ್ತನಲ್ಲಿ** ನಂಬಿಕೆಯಿಟ್ಟದ್ದೇ

ಅವರು **ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟರು** ಎಂಬುದನ್ನು ತೋರ್ಪಡಿಸಿತ್ತು.

16ನೇ ವಚನವು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಒಂದು ಮುಖ್ಯವಾದ ದೈವಶಾಸ್ತ್ರೀಕ ಹೇಳಿಕೆಯಾಗಿರುತ್ತದೆ, "ನೀತಿವಂತರೆಂಬ ನಿರ್ಣಯ," "ನೇಮನಿಷ್ಠೆಗಳು," ಮತ್ತು "ಕ್ರಿಸ್ತನ ಮೇಲಣ ನಂಬಿಕೆ" ಎಂಬ ಪದಗಳನ್ನು ಪುನರಾವರ್ತಿಸುತ್ತದೆ. ಕೆಲವರು ಕಡೆಯ ಪದಗುಚ್ಛವನ್ನು "ಕ್ರಿಸ್ತನ ನಂಬಿಕೆ" (ವ್ಯಕ್ತಿನಿಷ್ಠ ಷಷ್ಠೀ ವಿಭಕ್ತಿ; KJV) ಎಂದು ಅನುವಾದಿಸಬೇಕೆಂದು ವಾದಿಸುವವರಾಗಿ, ದೇವರಲ್ಲಿ ಪರಿಪೂರ್ಣ ವಿಧೇಯತೆ ಹಾಗೂ ವಿಧೇಯತೆಯ ಕಡೆಗೆ ಬೆರಳು ತೋರಿಸುತ್ತಾರೆ. ಮನುಷ್ಯನು ನೀತಿವಂತನೆಂದು ನಿರ್ಣಯಿಸಲ್ಪಡುವದು ಖಂಡಿತವಾಗಿಯೂ ಕ್ರಿಸ್ತನ ನಂಬಿಗಸ್ತಿಕೆಯ ಮೇಲೆಯೇ ಅವಲಂಭಿತವಾಗಿರುತ್ತಾದರೂ (2 ಕೊರಿಂಥ 5:21), NASB ಮತ್ತು ಇತರ ತರ್ಜುಮೆಗಳು "ಕ್ರಿಸ್ತನ*ಲ್ಲಿ* ನಂಬಿಕೆ" ಎಂದು ಅನುವಾದಿಸಿರುತ್ತವೆ (ಒಂದು ವಸ್ತುನಿಷ್ಠ ಷಷ್ಠೀ ವಿಭಕ್ತಿ). ಕ್ರೈಸ್ತನ ನಂಬಿಕೆಯು ಕೇವಲ ಬುದ್ಧಿಯಿಂದ ಸಮ್ಮತ್ತಿಸುವಿಕೆ ಮಾತ್ರವೇ ಆಗಿರುವದಿಲ್ಲ; ಅದರಲ್ಲಿ ವಿಶ್ವಾಸಿಸುವದು ಮತ್ತು ಒಪ್ಪಿಸಿಕೊಡುವಿಕೆ ಸಹ ಸೇರಿರುತ್ತವೆ.

ಪೌಲನು ತನ್ನ ಅಂಶವನ್ನು ಇನ್ನಷ್ಟು ಒತ್ತಿ ಹೇಳುವವನಾಗಿ, ಕೀರ್ತನೆ 143:2 ನ್ನು ಸೂಚ್ಯಾರ್ಥವಾಗಿ ಬಳಸುತ್ತಾನೆ, **ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.** ಈ ಜೋಡನೆಯು ರೋಮಾ 3:20ರಲ್ಲಿ ಇನ್ನಷ್ಟು ಸ್ಪಷ್ಟವಾಗಿ ಕಾಣಿಸುತ್ತದೆ: "ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ *ಸನ್ನಿಧಿಯಲ್ಲಿ* ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ" (ಒತ್ತಿ ಹೇಳಿದ್ದು ನನ್ನದು). NASBಯು ಕೀರ್ತನೆ 143:2ರ ಇಬ್ರಿಯ ವಾಕ್ಯವನ್ನು ಈ ವಿಧದಲ್ಲಿ ಅನುವಾದಿಸುತ್ತದೆ: "ನಿಮ್ಮ ದೃಷ್ಟಿಯಲ್ಲಿ ಜೀವಿಸುತ್ತಿರುವ ಯಾವ ಮನುಷ್ಯನೂ ನೀತಿವಂತನಲ್ಲ."

ಪೌಲನು ಯೆಹೂದ್ಯರಿಗೂ ಅನ್ಯಜನರಿಗೂ ಕ್ರಿಸ್ತನಲ್ಲಿ ಲಭ್ಯವಿರುವ ನೀತಿವಂತರೆಂಬ ನಿರ್ಣಯದ ಅಗತ್ಯವಿದೆ ಎಂಬುದನ್ನು ಸ್ಥಾಪಿಸುತ್ತಿದ್ದಾನೆ. ಆದದರಿಂದ, ಯೆಹೂದ್ಯ ಕ್ರೈಸ್ತರು ಹೊಗಳಿಕೊಳ್ಳುವದಕ್ಕಾಗಲಿ ಅಥವಾ ತಮ್ಮನ್ನು ಸಮಾನರಾದ ಅನ್ಯಜನರಿಂದ ಬೇರ್ಪಡಿಸಿಕೊಳ್ಳುವದಕ್ಕೆ ಕಾರಣವೇ ಇರಲಿಲ್ಲ.[32] ಅಪೊಸ್ತಲರ ಕೃತ್ಯಗಳು 15:9ನೇ ವಚನವು ಪೇತ್ರನು ಯೆರೂಸಲೇಮಿನ ಸಮಾಲೋಚನಾ ಸಭೆಯಲ್ಲಿ ಇದೇ ವಾದವನ್ನು ಮಾಡುವವನಾಗಿ ದೇವರು "ಇದಲ್ಲದೆ ಆತನು ನಮಗೂ ಅವರಿಗೂ ಏನೂ ಭೇದಮಾಡದೆ ಅವರ ಹೃದಯಗಳನ್ನೂ ನಂಬಿಕೆಯ ಮೂಲಕವಾಗಿ ಶುದ್ಧೀಕರಿಸಿದನು" ಎಂದನು ಎಂಬುದಾಗಿ ಹೇಳುತ್ತದೆ. ಆತನು ಇನ್ನೂ ಹೇಳಿದ್ದೇನೆಂದರೆ, "ಕರ್ತನಾದ ಯೇಸುವಿನ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವೆವೆಂಬದಾಗಿ ನಂಬುತ್ತೇವಲ್ಲಾ; ಹಾಗೆಯೇ ಅವರೂ ಹೊಂದುವರು" (ಅಪೊಸ್ತಲರ ಕೃತ್ಯಗಳು 15:11).

**ವಚನ 17.** ರೋಮಾಪುರದವರಿಗೆ ತಾನು ಬರೆದ ಪತ್ರಿಕೆಯಲ್ಲಿರುವಂತೆಯೇ, ಪೌಲನು ಇಲ್ಲಿ ಸಹ ಒಬ್ಬ ಆಕ್ಷೇಪಣೆಗಾರನು ತನ್ನ ಉಪದೇಶಕ್ಕೆ ಹೇಗೆ ಪ್ರತಿಕ್ರಿಯಿಸಬಹುದೆಂದು ಊಹಿಸಿಕೊಂಡನು. ಆತನು ಹೀಗೆ ಕೇಳುತ್ತಾನೆ, **ಆದರೆ ನಾವು ಕ್ರಿಸ್ತನ ಆಶ್ರಯದಲ್ಲಿ ನೀತಿವಂತರೆಂಬ ನಿರ್ಣಯ ಹೊಂದುವದಕ್ಕೆ ಪ್ರಯತ್ನಿಸುತ್ತಿರುವಾಗ ನಾವೂ ಪಾಪಿಗಳಾಗಿ ತೋರಿಬಂದರೆ ಕ್ರಿಸ್ತನು ಪಾಪಕ್ಕೆ ಸಹಾಯಕನೆಂದು ಹೇಳಬೇಕೇನು?** "ಸೇವಕನು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು διάκονος (*diakonos*), ಇದನ್ನು ಅನೇಕ ಸಾರಿ "ದಾಸನು"

ಅಥವಾ "ಸಭಾ ಹಿರಿಯ" ಎಂದು ಅನುವಾದಿಸಲಾಗುತ್ತದೆ. ಈ ಸನ್ನಿವೇಶದಲ್ಲಿ, ಅದು "ಸಹಾಕನು" ಅಥವಾ "ನಡಿಸಿ ಕೊಡುವವನು" ಎಂಬುದನ್ನು ಸೂಚಿಸುತ್ತದೆ. REBಯಲ್ಲಿ, ಪ್ರಶ್ನೆಯ ಕಡೇ ಭಾಗವು ಈ ವಿಧದಲ್ಲಿರುತ್ತದೆ, "ಇದರ ಅರ್ಥವು ಕ್ರಿಸ್ತನು ಪಾಪಕ್ಕೆ ಉತ್ತೇಜಿಸುವನೆಂದೋ?" GNTಯಲ್ಲಿ "ಕ್ರಿಸ್ತನು ಪಾಪದ ಪರವಾಗಿ ಕೆಲಸ ಮಾಡುತ್ತಿರುವನೆಂದು ಇದರರ್ಥವೋ?" ಎಂದಿರುತ್ತದೆ. ಪೌಲನು ಈ ಸಲಹೆಯನ್ನು ಸಂಪೂರ್ಣ ಅಸಾಧ್ಯವೆಂದು ತಳ್ಳಿ ಹಾಕುವವನಾಗಿ ಹೀಗೆ ಉದ್ಗಾರದಿಂದ ಹೇಳುತ್ತಾನೆ, **ಎಂದಿಗೂ ಹೇಳಬಾರದು.**

17ನೇ ವಚನದಿಂದ ಎರಡು ಅತ್ಯಾವಶ್ಯಕವಾದ ಆಲೋಚನೆಗಳನ್ನು ತೆಗೆದುಕೊಳ್ಳಬಹುದಾಗಿದೆ. ಮೊದಲನೆಯದಾಗಿ, ಕ್ರಿಸ್ತನ ಮೂಲಕ ರಕ್ಷಿಸಲ್ಪಡಬೇಕೆಂದರೆ, ಯೆಹೂದ್ಯರು ತಾವು ಸ್ವತಃ "ಪಾಪಿಗಳು" ಆಗಿದ್ದಾರೆಂಬ ಎಂಬ ವಾಸ್ತವಿಕತೆಯನ್ನು ಎದುರಿಸಬೇಕಾಗಿತ್ತು. ಇಲ್ಲಿ ಅದೇ ಗ್ರೀಕ್ ಪದವು ಬಳಸಲ್ಪಟ್ಟಿದ್ದು, *ಹಮಾರ್ಟೋಲೊಸ* ಎಂಬ ಪದವು ಅನ್ಯಜನರಿಗಾಗಿ ಸಹ 2:15ರಲ್ಲಿ ಕಾಣಿಸಿಕೊಳ್ಳುತ್ತದೆ. ಎರಡೂ ಗುಂಪುಗಳು ಪಾಪಿಗಳಾಗಿದ್ದರು ಮತ್ತು ರಕ್ಷಣೆಯ ಅಗತ್ಯತೆಯಲ್ಲಿದ್ದರು (ನೋಡಿರಿ ರೋಮಾ 1-3).

ಎರಡನೆಯದಾಗಿ, ವಿಧೇಯತೆಯುಳ್ಳ ನಂಬಿಕೆಯ ಮೂಲಕ ಕೃಪೆಯಿಂದ (ಧರ್ಮಶಾಸ್ತ್ರವಿಲ್ಲದೆ) ರಕ್ಷಣೆಯಾಗುವದೆಂದು ಸಾರುವ ವೇಳೆ, ಇದು ಒಳ್ಳೇ ಯೆಹೂದ್ಯರನ್ನು ಪಾಪದೊಳಗೆ ನಡಿಸುವದು ಮತ್ತು ಅನ್ಯಜನರನ್ನು ಪಾಪಮಾಡದಂತೆ ನಿಗ್ರಹಿಸುವದಕ್ಕೆ ವಿಫಲವಾಗುವದೆಂಬುದಾಗಿ ಯೆಹೂದಿಕರಣಗೊಳಿಸುವವರು ಯೋಚಿಸಿದರು. ಇದೇ ರೀತಿಯ ವಾದವು ರೋಮಾ 6:1, 2ರಲ್ಲಿ ಬಳಸಲ್ಪಟ್ಟಿದೆ, ಅದು ಕೃಪೆಯು ಪಾಪ ಮಾಡುವದಕ್ಕೆ ಒಂದು ಪರವಾನಿಗೆ ಆಗಿರುತ್ತದೆಂಬ ಸುಳ್ಳು ಕಲ್ಪನೆಗೆ ಪ್ರತ್ಯುತ್ತರವನ್ನು ಕೊಡುವ ವಾಕ್ಯಭಾಗವಾಗಿದೆ: "ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು" ಅನಂತರದಲ್ಲಿ, ಗಲಾತ್ಯ 5:13-26ರೊಳಗೆ, ಪೌಲನು ತನ್ನ ವಾಚಕರೊಳಗಿದ್ದ ಉದಾರವಾದಿ ಮನೋಭಾವಗಳ ಕುರಿತು ನೇರವಾಗಿ ಮಾತಾಡುತ್ತಾನೆ. ಆತನು ಕಲಿಸಿದ್ದೇನೆಂದರೆ, "ನೈತಿಕ ವಿಕೃತಿಗಳು ಹೆಚ್ಚು ಕಟ್ಟಳೆಗಳನ್ನು ಅನ್ವಯಿಸುವದರಿಂದ ಸರಿಪಡಿಸಲ್ಪಡುವದಿಲ್ಲ ಆದರೆ [ಜನರ] ಜೀವಿತಗಳಲ್ಲಿ ಪವಿತ್ರಾತ್ಮನ ಮಾರ್ಗದರ್ಶನವನ್ನು ಅಂಗೀಕರಿಸಿಕೊಳ್ಳುವದರಿಂದಲೇ ಆಗುತ್ತದೆ."[33]

**ವಚನ 18.** ಪೌಲನು ಒಂದು ಕಾಲದಲ್ಲಿ ಧರ್ಮಶಾಸ್ತ್ರಕ್ಕೆ ವಿಧೇಯನಾಗುವ ಮೂಲಕ ತನ್ನ ನೀತಿವಂತಿಕೆಯನ್ನು ಸ್ಥಾಪಿಸುವದಕ್ಕೆ ಪ್ರಯತ್ನಿಸಿದ್ದನು. ಹೇಗೂ, ಜೀವಿತದ ವಿಷಯದಲ್ಲಿ ತಾನು ಅನುಸರಿಸಿದ ದಾರಿಯು ಎಷ್ಟು ವ್ಯರ್ಥವಾದದ್ದೆಂಬುದನ್ನು ಗ್ರಹಿಸಿಕೊಂಡಿದ್ದನು. ಕ್ರಿಸ್ತನ ಸುವಾರ್ತೆಯ ಶಕ್ತಿಯ ಮೂಲಕ ಪಾಪದಿಂದ ಬಿಡಿಸಲ್ಪಟ್ಟವನಾಗಿ, ಆತನಿಗೆ ಹಳೆಯ ವ್ಯವಸ್ಥೆಯ ಕಡೆಗೆ ಹಿಂದಿರುಗುವ ಯಾವ ಬಯಕೆಯೂ ಇರಲಿಲ್ಲ. ಆತನು ಹೀಗೆ ಬರೆದನು, **ನಾನು ಕೆಡವಿದ್ದನ್ನೇ ತಿರಿಗಿ ಕಟ್ಟಿದರೆ ನನ್ನನ್ನು ನಾನೇ ಅಪರಾಧಿ ಎಂದು ತೋರಿಸಿಕೊಳ್ಳುತ್ತೇನಲ್ಲಾ.** ಸುವಾರ್ತೆಯು ಮನುಷ್ಯರ ಕಡೆಗೆ ದೇವರು ತೋರಿಸುವ ಪ್ರೀತಿಯ ಒಂದು ಅತಿ ಶ್ರೇಷ್ಠವಾದ ವ್ಯಕ್ತಪಡಿಸುವಿಕೆಯಾಗಿರುವದರಿಂದ, ಅದಕ್ಕೆ ಪರ್ಯಾಯವಾಗಿ ಕ್ರೈಸ್ತ-ಪೂರ್ವ ದಾರಿಗಳನ್ನು ಅನುಸರಿಸುವದು ಅತ್ಯಂತ ಮೂರ್ಖತನವಾಗುತ್ತದೆ. "ತಿರಿಗಿ ಕಟ್ಟಿದರೆ" ಎಂಬುದು ನೀತಿಯನ್ನು ಕೊಡುವ ಮೂಲವೆಂದು ಪುನಃ ಧರ್ಮಶಾಸ್ತ್ರದ ಕಡೆಗೆ ಹೋಗುವದನ್ನು ಸೂಚಿಸುತ್ತದೆ. ಧರ್ಮಶಾಸ್ತ್ರದ ಮೇಲೆ ಅವಲಂಭಿತರಾಗಿರುವದು ಮನುಷ್ಯನ ದುರ್ಬಲತೆಯನ್ನೇ ಬಯಲುಗೊಳಿಸುತ್ತದಷ್ಟೆ; ಅದು ಒಬ್ಬನು "ಅಪರಾಧಿ" (παραβάτης, *parabatēs*) ಎಂದು

ತೋರಿಸಿ ಕೊಟ್ಟಿತು. ಈ ಪದವು, ಬಹುಶಃ "ಪಾಪಿ" ಎಂಬುದಕ್ಕಿಂತಲೂ ಬಲವಾದದ್ದಾಗಿ ಇರಬಹುದಾಗಿದ್ದು, ಧರ್ಮಶಾಸ್ತ್ರದ ಗಡಿಗಳನ್ನು ದಾಟಿ ಹೆಜ್ಜೆಯಿಟ್ಟಿರುವ ಅಥವಾ ಉಲ್ಲಂಘನೆ ಮಾಡಿರುವ ವ್ಯಕ್ತಿಯೊಬ್ಬನನ್ನು ಸೂಚಿಸುತ್ತದೆ. ಧರ್ಮಶಾಸ್ತ್ರಾಧಾರಿತ ನೀತಿಗೋಸ್ಕರ ಸುವಾರ್ತೆಯನ್ನು ತಿರಸ್ಕರಿಸುವದರ ಫಲಿತವು ಕೇವಲ ವಿಫಲತೆಯೇ ಆಗಿರುತ್ತದೆ; ಅದು ಒಬ್ಬನನ್ನು ದೇವರಿಂದಾಗುವ ದಂಡನೆಗೆ ಅಧೀನಪಡಿಸುತ್ತದೆ.

**ವಚನ 19.** ಅಪೊಸ್ತಲನು ಮುಂದುವರೆಸಿ ಹೇಳುವದೇನೆಂದರೆ, **ನಾನಂತೂ ದೇವರಿಗಾಗಿ ಜೀವಿಸುವದಕ್ಕೋಸ್ಕರ ಧರ್ಮಪ್ರಮಾಣದ ಮೂಲಕವಾಗಿ ಧರ್ಮಪ್ರಮಾಣ ಪಾಲಿಗೆ ಸತ್ತೆನು.** ಧರ್ಮಶಾಸ್ತ್ರವು ಪಾಪ ಮತ್ತು ಮರಣಕ್ಕೆ ಕಾರಣವಾಗಿತ್ತಾದ್ದರಿಂದ (1 ಕೊರಿಂಥ 15:56), ಪೌಲನು ಕ್ರೈಸ್ತ ಪರಿವರ್ತನೆಯನ್ನು ಧರ್ಮಶಾಸ್ತ್ರದ ಪಾಲಿಗೆ ಮರಣಿಸುವದು (ರೋಮಾ 7:4-6) ಮತ್ತು ಪಾಪದ ಪಾಲಿಗೆ (ರೋಮಾ 6:2) ಮರಣಿಸುವದು ಎಂದು ಕರೆಯಲು ಶಕ್ತನಾಗಿದ್ದನು. ಖಂಡಿತವಾಗಿಯೂ, ಧರ್ಮಶಾಸ್ತ್ರದ ಪಾಲಿಗೆ ಮರಣಿಸುವ ಯೋಚನೆಯು ಯೆಹೂದ್ಯ ಕ್ರೈಸ್ತರಿಗೆ ಹೆಚ್ಚು ಅನ್ವಯವಾಗುವದಾಗಿತ್ತು, ಅವರೇ ಒಂದು ಕಾಲದಲ್ಲಿ ಧರ್ಮಶಾಸ್ತ್ರದ ಅಧೀನದಲ್ಲಿ ಜೀವಿಸಿದ್ದರು. Bruceನು ಅದನ್ನು ಈ ವಿಧದಲ್ಲಿ ಹೇಳುತ್ತಾನೆ: "ಧರ್ಮಶಾಸ್ತ್ರದ ಪಾಲಿಗೆ ಸತ್ತ ಬಳಿಕವೂ ತಮ್ಮನ್ನು ಪುನಃ ಧರ್ಮಶಾಸ್ತ್ರಾಧೀನ ಮಾಡಿಕೊಳ್ಳುವದು ಅವರಿಗೆ ಅರ್ಥಶೂನ್ಯವಾಗಿರುವದಾದರೆ, ಯಾವ ಮೂಲಪಿತೃಗಳೂ ಸಮರ್ಪಣೆ ಮಾಡಿಕೊಳ್ಳದೆ ಇದ್ದ ಧರ್ಮಶಾಸ್ತ್ರದ ನೊಗದಲ್ಲಿ ಸಿಕ್ಕಿಕೊಳ್ಳುವದು ಅನ್ಯಜನಾಂಗದ ಕ್ರೈಸ್ತರಿಗೆ ಇನ್ನೂ ಅಧಿಕವಾಗಿ ಅರ್ಥಶೂನ್ಯವಾಗಿತ್ತಷ್ಟೆ."[34]

**ವಚನ 20.** ಒಂದು ಕಾಲದಲ್ಲಿ ಪೌಲನು ಯೆರೂಸಲೇಮಿನಲ್ಲಿ ರಬ್ಬಿಯ ವಿದ್ಯಾರ್ಥಿಯಾಗಿದ್ದ ವೇಳೆ ಆತನ ಆಲೋಚನೆಗಳು ಹಾಗೂ ಆಕಾಂಕ್ಷೆಗಳ ಮೇಲೆ ಧರ್ಮಶಾಸ್ತ್ರವು ಪ್ರಾಬಲ್ಯವನ್ನು ಮೆರೆದಿತ್ತು; ಆದರೆ ಅದೆಲ್ಲದರ ಸ್ಥಾನವನ್ನು ಈಗ ಯೇಸು ಕ್ರಿಸ್ತನ ಕಡೆಗೆ ಆತನಿಗಿರುವ ಭಕ್ತಿಯು ತೆಗೆದುಕೊಂಡಿತ್ತು (ಫಿಲಿಪ್ಪಿ 1:21; 3:7-11). ಧರ್ಮಶಾಸ್ತ್ರದ ನೊಗದಿಂದ ಬಿಡುಗಡೆಗೊಳಿಸಲ್ಪಟ್ಟವನಾಗಿ, ಪೌಲನು ಯೇಸುವಿನೊಂದಿಗೆ ತನಗಿರುವ ಗುರುತಿನ ಮೂಲಕವಾಗಿ ಪರಿಶುದ್ಧವಾಗಿ ಜೀವಿಸುವದಕ್ಕೆ ಪ್ರೇರಣೆಯನ್ನು ಕಂಡುಕೊಂಡಿದ್ದನು. ಆತನು ಹೀಗೆ ಬರೆದನು, **ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ.**

ಪೌಲನು ಇಲ್ಲಿ ದಮಸ್ಕದ ಮಾರ್ಗದಲ್ಲಿ ತಾನು ಕ್ರಿಸ್ತನವನಾಗಿ ಪರಿವರ್ತನೆಗೊಂಡದ್ದನ್ನು ಸೂಚಿಸಿ ಹೇಳುತ್ತಿದ್ದಾನೆ. ಆ ಮಾರ್ಗದಲ್ಲಿ ಯೇಸುವು ಆತನಿಗೆ ಒಂದು ದರ್ಶನದಲ್ಲಿ ಕಾಣಿಸಿಕೊಂಡ ಬಳಿಕ, ಪೌಲನನ್ನು ಪಟ್ಟಣದೊಳಗೆ ಕರೆದೊಯ್ಯಲಾಗಿತ್ತು, ಅಲ್ಲಿ ಆತನು ಮೂರು ದಿನಗಳ ಕಾಲ ಕಣ್ಣು ಕಾಣದವನಾಗಿದ್ದನು. ಆ ಕಾಲದ ಅಂತ್ಯದಲ್ಲಿ, ಅನನೀಯನು ಆತನಿಗೆ ಹೀಗೆ ಅಪ್ಪಣೆ ಕೊಟ್ಟನು, "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ಆತನು ಅನಂತರದಲ್ಲಿ ದೀಕ್ಷಾಸ್ನಾನವನ್ನು ಕುರಿತು ಮಾತಾಡುವ ವೇಳೆ ತಿಳಿಸಿದ ಪ್ರಕಾರವೇ "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡನು" ಮತ್ತು "ಆತನ ಮರಣದಲ್ಲಿ ಪಾಲುಗಾರನಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡನು" (ರೋಮಾ 6:3; ನೋಡಿರಿ ಕೊಲೊಸ್ಸೆ 2:12-14). ಸರಳ ಮಾತುಗಳಲ್ಲಿ ಹೇಳುವದಾದರೆ, ಪೌಲನು ಕ್ರಿಸ್ತನಲ್ಲಿ ಮುಳುಗಿಸಲ್ಪಟ್ಟ ವೇಳೆ, ಆತನು ಕ್ರಿಸ್ತನ ಮರಣದಲ್ಲಿ ಆತನೊಂದಿಗೆ ಕೂಡಿಕೊಂಡನು. ಯೇಸುವು ಮನುಷ್ಯನಿಗೆ ಕ್ಷಮಾಪಣೆಯನ್ನು ಒದಗಿಸುವದಕ್ಕಾಗಿ ಮರಣಸಿದ್ದನು (ಮತ್ತಾಯ 26:28), ಮತ್ತು ನೀರಿನ ಸಮಾಧಿಯೊಳಗೆ ಪೌಲನು ತನ್ನ ಪಾಪಗಳ ಪಾಲಿಗೆ ಸತ್ತು ಕ್ರಿಸ್ತನ

ಮರಣದಿಂದಾದ ಪ್ರಯೋಜನಗಳನ್ನು ಪಡೆದುಕೊಂಡಿದ್ದನು. ಆ ಹಂತದಲ್ಲಿ, ಜೀವನದ ಬಗ್ಗೆ ಆತನಿಗಿದ್ದ ಇಡೀ ಬಾಹ್ಯನೋಟವೇ ಬದಲಾಗಿತ್ತು. ಆತನಿಗೆ ತನಗಿದ್ದ ಫರಿಸಾಯದ ಗರ್ವವನ್ನು ಹಿಂದೆ ಬಿಟ್ಟು, ಯೇಸುವನ್ನು ಶಿಲುಬೆಯ ಕಡೆಗೆ ನಡಿಸಿದ ಆತನ ದೀನ ಜೀವಿತ ರೀತಿಯನ್ನು ಅಳವಡಿಸಿಕೊಂಡನು; ಆತನ ಉದ್ದೇಶಗಳು ಹಾಗೂ ಗುರಿಗಳೆಲ್ಲಾ ಬದಲಾಗಿ ಬಿಟ್ಟಿದ್ದವು. ಯೇಸುವಿನ ಹಾಗೆಯೇ, "ನಿನ್ನ ಚಿತ್ತವು ನೆರವೇರಿಸಲ್ಪಡಲಿ" ಎಂಬುದರ ಅರ್ಥವನ್ನು ತಿಳಿದುಕೊಂಡಿದ್ದನು (ನೋಡಿರಿ ಮತ್ತಾಯ 6:10; 26:42). ಆತನು ತನ್ನ ಜೀವಿತವನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಟ್ಟನು.[35]

ಪೌಲನು ಪಾಪದ ಪಾಲಿಗೆ ಸತ್ತಿದ್ದು ಕೇವಲ ಗತಕಾಲದ ಘಟನೆಯಷ್ಟೇ ಆಗಿರಲಿಲ್ಲ; ಅದು ಸ್ವ-ನಿರಾಕಣೆಯ ನಿರಂತರವಾದ ಅನುಭವವಾಗಿ ಮಾರ್ಪಟ್ಟಿತ್ತು.[36] ಈಗ ಪೌಲನ ಆಲೋಚನೆಗಳು ಹಾಗೂ ಆಯ್ಕೆಗಳಲ್ಲಿ ಯೇಸು ಕ್ರಿಸ್ತನು ಪ್ರಾಬಲ್ಯ ಮೆರೆಯುತ್ತಿದ್ದನು. ಆತನು ಹೀಗೆ ಹೇಳಿದನು, **ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ.** ಗ್ರೀಕ್ ವಾಕ್ಯದಲ್ಲಿರುವ ಪದಗಳ ಕ್ರಮವು ವ್ಯಕ್ತಿಯ ಮೇಲೆ ಒತ್ತು ಕೊಡುತ್ತದೆ: "ಜೀವಿಸುವವನು ಇನ್ನು *ನಾನು* ಅಲ್ಲ, ಆದರೆ ನನ್ನಲ್ಲಿ ಜೀವಿಸುವವನು *ಕ್ರಿಸ್ತನೇ.*" ಕ್ರಿಸ್ತನು ಪವಿತ್ರಾತ್ಮನು ಪೌಲನಲ್ಲಿ ವಾಸಿಸುತ್ತಿದ್ದ ರೀತಿಯಲ್ಲಿಯೇ, ಯೇಸುವು ಅವನಲ್ಲಿ ಸಜೀವನಾಗಿದ್ದನು (ರೋಮಾ 5:5; 8:9-11, 23; 2 ಕೊರಿಂಥ 13:5; ಎಫೆಸ 3:17; ಕೊಲೊಸ್ಸೆ 1:27).

ಪೌಲನು **ಈಗ ಶರೀರದಲ್ಲಿ ಜೀವಿಸುವದು ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ** ಆಗಿತ್ತು (ನೋಡಿರಿ 2 ಕೊರಿಂಥ 5:7). ಆತನು ಇನ್ನು ಮೇಲೆ ತನ್ನ ಸ್ವನೀತಿಯಲ್ಲಿ ಭರವಸವಿಡುವವನಾಗಿರಲಿಲ್ಲ, ಆದರೆ ಯೇಸು ಕ್ರಿಸ್ತನ ನೀತಿಯಲ್ಲಿಯೇ ಆಗಿತ್ತು. ಕ್ರಿಸ್ತನ ಯಜ್ಞದ ಕುರಿತಾಗಿ ಅಪೊಸ್ತಲನಿಗಿದ್ದ ಅಭಿಪ್ರಾಯವು ತೀವ್ರವಾಗಿ ವೈಯಕ್ತಿಕವಾಗಿತ್ತು. ಆತನು ಯೇಸುವಿನ ಕುರಿತಾಗಿ **ಆತನು *ನನ್ನನ್ನು* ಪ್ರೀತಿಸಿ *ನನಗೋಸ್ಕರ* ತನ್ನನ್ನು ಒಪ್ಪಿಸಿಬಿಟ್ಟನು** ಎಂದು ಬಣ್ಣಿಸುತ್ತಾನೆ (ಒತ್ತಿ ಹೇಳಿದ್ದು ನನ್ನದು). ಯೇಸುವು ಇಡೀ ಲೋಕಕ್ಕಾಗಿ ಮರಣಿಸಿದ್ದನೆಂಬುದನ್ನು ಆತನು ಗ್ರಹಿಸಿಕೊಂಡಿದ್ದನು (1 ತಿಮೊಥೆ 2:6); ಹೀಗಿದ್ದರೂ, ಆತನು ಯೇಸುವನ್ನು ತನ್ನ ವೈಯಕ್ತಿಕ ರಕ್ಷಕನೆಂದು ಕಂಡನು. ಕ್ರಿಸ್ತನು ಸ್ವಯಿಚ್ಛೆಯಿಂದ *ಆತನಿಗೋಸ್ಕರ* ಶಿಲುಬೆಯ ಮೇಲೆ ಮರಣಿಸಿದ್ದನು.

**ವಚನ 21.** ಪೌಲನು ಯೇಸು ಕ್ರಿಸ್ತನಲ್ಲಿ ತೋರಿಬಂದ **ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ**. "ನಿರರ್ಥಕ" (ἀθετέω, *atheteō*) ಎಂಬುದು, ಪುನಃ 3:15ರಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಇದೊಂದು ಒಡಂಬಡಿಕೆಗಳು ಹಾಗೂ ಉಯಿಲುಗಳ ಕ್ಷೇತ್ರದಿಂದ ಆರಿಸಿಕೊಳ್ಳಲಾಗಿರುವ ಕಾನೂನಿನ ಪದವಾಗಿದೆ.[37] ಪೌಲನು ಧರ್ಮಶಾಸ್ತ್ರದ ದಾಸತ್ವದಲ್ಲಿ ಸಿಕ್ಕಿಕೊಳ್ಳಲು ಪುನಃ ಹೋಗದವನು ಹಾಗೂ ಕ್ರಿಸ್ತನಲ್ಲಿ ದೊರೆತ ರಕ್ಷಣೆಯನ್ನು ಕಳೆದುಕೊಳ್ಳದವನು ಆಗಿದ್ದನು (ನೋಡಿರಿ 5:4).

ಅಪೊಸ್ತಲನು ಒತ್ತಿ ಹೇಳಿದ್ದೇನೆಂದರೆ **ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ** ("ಉದ್ದೇಶವಿಲ್ಲದ್ದು"; ESV). ಈ ಹೇಳಿಕೆಯು ಯೆಹೂದಿಕರಣ ಮಾಡುವವರ ನಿಲುವು ಅಸಂಬದ್ಧವಾದದ್ದೆಂಬುದನ್ನು ತೋರಿಸಿ ಕೊಡುತ್ತದೆ. ಕ್ರಿಸ್ತನ ಮುಖಾಂತರವಾಗಿ ಮಾತ್ರವೇ ದೇವರ ಮುಂದೆ ನೀತಿವಂತರೆಂಬ ನಿರ್ಣಯವನ್ನು ಪಡೆಯುವದಕ್ಕೆ ಸಾಧ್ಯವಿರುತ್ತದೆ (3:10-14; ರೋಮಾ 3:21-26).

# ಹೆಚ್ಚಿನ ಅಧ್ಯಯನಕ್ಕಾಗಿ:
# ಗಲಾತ್ಯ 2:1ರಲ್ಲಿ ಯೆರೂಸಲೇಮಿಗೆ ಮಾಡಿದ ಪ್ರಯಾಣವು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ಯಾವ ಪ್ರಯಾಣವನ್ನು ಸೂಚಿಸುತ್ತದೆ?

ಪೌಲನು ಗಲಾತ್ಯ 2:1-10ರಲ್ಲಿ ಸಭಾಸ್ತಂಭಗಳೆನಿಸಿಕೊಂಡವರನ್ನು ಭೇಟಿಯಾದ ಸಮಯದಲ್ಲಿ ಯೆರೂಸಲೇಮಿಗೆ ಮಾಡಿದ್ದ ಪ್ರಯಾಣವನ್ನು ವಿಷಯದಲ್ಲಿ ಕಾಲಾನುಕ್ರಮದ ಘಟನಾವಳಿಗಳ ಬಗ್ಗೆ ಚರ್ಚಿಸುವ ವೇಳೆ ಕೆಳಗಿನ ಉಪಯುಕ್ತ ಅಂಶಗಳನ್ನು ಪರಿಗಣಿಸತಕ್ಕದ್ದು:

1. ಲೂಕನು ತಾನು "ಕ್ರಮವಾಗಿ ಬರೆಯು"ತ್ತಿರುವದಾಗಿ (ಲೂಕ 1:3) ಅಥವಾ "ಮೊದಲಿಂದ ಕ್ರಮವಾಗಿ ವಿವರಿಸಿ" ಬರೆಯುತ್ತಿರುವದಾಗಿ (ಅಪೊಸ್ತಲರ ಕೃತ್ಯಗಳು 11:4) ಹೇಳಿಕೊಂಡನು. ಈ ಸನ್ನಿವೇಶದಲ್ಲಿ ಬಳಸಲಾಗಿರುವ ಪದವು καθεξῆς (*kathexēs*), ಇದರರ್ಥವು "ಸಮಯ, ಸ್ಥಳ, ಅಥವಾ ತರ್ಕಗಳಲ್ಲಿ *ಕ್ರಮಾನುಗತಿಯಲ್ಲಿ, ಒಂದಾದ ಮೇಲೊಂದಕ್ಕೆ* ಸಂಬಂಧಿ[ಸಿದ ಹಾಗೆ]"ಎಂದಾಗಿರುತ್ತದೆ.[38]

2. ಗಲಾತ್ಯ 1 ಮತ್ತು 2ರಲ್ಲಿ, ಪೌಲನು ತನ್ನ ಅಪೊಸ್ತಲತನದ ಕುರಿತು, ತಾನು ಬೇರೆ ಅಪೊಸ್ತಲರಿಂದಲ್ಲದೆ ಸ್ವತಂತ್ರವಾಗಿ ಸುವಾರ್ತೆಯನ್ನು ಪಡೆದುಕೊಂಡಿದ್ದರ ಕುರಿತು ಪ್ರತಿವಾದವನ್ನು ಮಾಡುತ್ತಿದ್ದಾನೆ. ವಾಸ್ತವಿಕದಲ್ಲಿ, ಆತನು ತಾನು ಯೆರೂಸಲೇಮಿಗೆ ಮಾಡಿದ ಪ್ರಯಾಣಗಳ ಬಗ್ಗೆ 1:18, 19 ಮತ್ತು 2:1-10ರಲ್ಲಿ ಪ್ರಸ್ತಾಪ ಮಾಡಿದ್ದ ಇದೊಂದೇ ಕಾರಣಕ್ಕಾಗಿ ಆಗಿತ್ತು.

3. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನ ಬದುಕಿನ ಕುರಿತಾಗಿ ಪ್ರತಿಯೊಂದು ವಿವರಗಳನ್ನು ಕೊಡುವ ಹೊಣೆಗಾರಿಕೆಯು ಲೂಕನ ಮೇಲಿತ್ತು. ಆತನು ಒಟ್ಟಾರೆಯಾಗಿ ಕ್ರೈಸ್ತತ್ವ ಚಳುವಳಿಯ ಆರಂಭಿಕ ಹಾಗೂ ಪ್ರಗತಿಯ ಕುರಿತು ಸಾಮಾನ್ಯ ಕಥನವನ್ನು ಮುಂದಿಡುತ್ತಿರುವಂತೆ ತೋರುತ್ತದೆ. ಲೂಕನು ಪೇತ್ರನಿಗಿಂತಲೂ ಪೌಲನ ಸಂಗಡ ಹೆಚ್ಚು ನಿಕಟತೆಯನ್ನು ಹೊಂದಿದ್ದನೆಂಬುದು ಸ್ಪಷ್ಟವಾಗಿರುತ್ತದಾದರೂ, ಪೇತ್ರನ ಘನತೆಗೆ ಭಂಗ ತರುವಂಥ ಯಾವದನ್ನೇ ಆಗಲಿ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಬರೆಯುವದಕ್ಕೆ ಲೂಕನಿಗೆ ಸಕಾರಣವೇ ಇರಲಿಲ್ಲ. ಅಂತೂ, ಸಭೆಯನ್ನು ಆರಂಭಿಸುವದರಲ್ಲಿ ಪೇತ್ರನು ಪ್ರಮುಖ ವ್ಯಕ್ತಿಯಾಗಿದ್ದನಷ್ಟೆ.

4. ಪೌಲನಿಗಾದರೋ, ಪರಿಸ್ಥಿತಿಯು ಬಹಳ ಭಿನ್ನವಾಗಿತ್ತು. ಆತನ ಅಪೊಸ್ತಲತನವು ದ್ವಿತಿಯ ದರ್ಜೆಯದ್ದು ಅಥವಾ ಕಡಿಮೆಯಾದದ್ದು ಎಂಬುದಾಗಿ ದಾಳಿ ನಡೆಯುತ್ತಿದ್ದ ಕಾರಣ, ಆತನು ಪೇತ್ರನೊಂದಿಗೆ ಸರಿಸಮಾನನು (2:6-9) ಮತ್ತು ಅಂತಿಯೋಕ್ಯದಲ್ಲಿ ಪೇತ್ರನನ್ನು ಮುಖಾಮುಖಿಯಾಗಿ ಎದುರಿಸಿದ್ದು (2:11-21) ಇವರೆಡೂ ಆತನ ವಾದಕ್ಕೆ ಸಂಬಂಧ ಹೊಂದಿದ್ದವು. ವಾಸ್ತವಿಕದಲ್ಲಿ, ಅವುಗಳು ಅತ್ಯಂಥ ಅಧಿಕ ಪ್ರಾಮುಖ್ಯತೆ ಹೊಂದಿದ್ದವು.

5. ಪೌಲನು ಪರಿವರ್ತನೆಯ ಬಳಿಕ ಯೆರೂಸಲೇಮಿಗೆ ಮಾಡಿದ ಹಲವಾರು ಪ್ರಯಾಣಗಳ ಕುರಿತಾಗಿ ಲೂಕನು ಬರೆಯುತ್ತಾನೆ. ಈ ಚರ್ಚೆಗೆ ಪ್ರಸ್ತುತವಾದಂಥ ಭೇಟಿಗಳು ಈ ಕೆಳಗಿನಂತಿವೆ:

> ಅಪೊಸ್ತಲರ ಕೃತ್ಯಗಳು 9:26-29ರಲ್ಲಿ, ಪೌಲನು ಯೆರೂಸಲೇಮಿಗೆ ಹೋದನು, ಅಲ್ಲಿ ಬಾರ್ನಬನು ಆತನನ್ನು ಅಪೊಸ್ತಲರಿಗೆ (ಮುಖ್ಯವಾಗಿ ಪೇತ್ರನಿಗೆ) ಪರಿಚಯಿಸಿದನು. ಈ ಭೇಟಿಯು ದಮಸ್ಕದ ಮಾರ್ಗದಲ್ಲಿ ಪೌಲನು ಪರಿವರ್ತನೆಯಾಗಿ ಮೂರು ವರ್ಷಗಳಾದ ಬಳಿಕ ಆಗಿತ್ತು (ಗಲಾತ್ಯ 1:18, 19).

ಅಪೊಸ್ತಲರ ಕೃತ್ಯಗಳು 11:29, 30 ಮತ್ತು 12:25, ಪೌಲ ಮತ್ತು ಬಾರ್ನಬರು ಬರಗಾಲದ ಪರಿಹಾರಕ್ಕಾಗಿ ಸಂಗ್ರಹಿಸಿದ್ದ ಹಣ ಸಹಾಯವನ್ನು ಯೆರೂಸಲೇಮಿನಲ್ಲಿರುವ ಹಿರಿಯರ ಕೈಗೆ ಒಪ್ಪಿಸಿದ್ದರು. ಲೂಕನ ಕಥನದಲ್ಲಿ, ಇದು ಪೌಲನು ಯೆರೂಸಲೇಮಿಗೆ ನೀಡಿದ ಎರಡನೆಯ ಭೇಟಿಯಾಗಿತ್ತು. ಪೌಲನು ಈ ಭೇಟಿಯ ಕುರಿತು ಬರೆಯದೆ ಬಿಟ್ಟನೋ, ಅಥವಾ ಇದು ಗಲಾತ್ಯ 2:1-10ರಲ್ಲಿನ ಭೇಟಿಯಾಗಿರಬಹುದೋ, ಅದು "ಪ್ರಕಟನೆ"ಗೆ ಪ್ರತಿಕ್ರಿಯೆಯಾಗಿ ಮಾಡಿದ ಪ್ರಯಾಣವಾಗಿತ್ತು? (2:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

ಅಪೊಸ್ತಲರ ಕೃತ್ಯಗಳು 15ರಲ್ಲಿ, ಪೌಲ ಮತ್ತು ಬಾರ್ನಬರು ಸುನ್ನತಿ ಹಾಗೂ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ವಿಷಯ ಕುರಿತು ಚರ್ಚಿಸುವ ಸಭೆಗೆ ಹೋಗಿದ್ದರು. ಆಗ ಅವರನ್ನು ಸಹೋದರರು ಹೋಗುವದಕ್ಕೆ ನೇಮಿಸಿದರೆಂದು ಊಹಿಸಲಾಗುತ್ತದೆ (ಅಪೊಸ್ತಲರ ಕೃತ್ಯಗಳು 15:2),[39] ಆ ವಾಕ್ಯಭಾಗವು ಪ್ರಕಟನೆಯೊಂದು ಉಂಟಾಯಿತು ಎಂಬ ಕುರಿತು ಏನನ್ನೂ ಹೇಳುವದಿಲ್ಲ.

## ಅನ್ವಯಿಸುವಿಕೆ

**ಬಾರ್ನಬನ ಗುಣಸ್ವಭಾವ, ಭಾಗ 1 (2:1-10, 13)**

ಬಾರ್ನಬನು ಪೌಲನ ಜೊತೆಯಲ್ಲಿ ಪ್ರಯಾಣಿಸುವವನು ಎಂಬುದಾಗಿ ಸ್ಮರಿಸಲ್ಪಡುತ್ತಾನೆ, ಆದರೆ ಅನೇಕ ಸಾರಿ ಆತನ ಕಡೆಗೆ ಹೆಚ್ಚು ಗಮನವನ್ನು ಕೊಡಲಾಗುವದಿಲ್ಲ. ನಮ್ಮನ್ನು ಕರ್ತನೊಂದಿಗೆ ಇನ್ನಷ್ಟು ನಿಕಟವಾಗಿ ನಡೆಯುವಂತೆ ಪ್ರಭಾವಿಸಬಹುದಾದಂಥ ಈ ಸಕಾರಾತ್ಮಕ ಗುಣಗಳು ಆತನಲ್ಲಿದ್ದವೆಂಬುದನ್ನು ಆಲೋಚಿಸಿರಿ.

*ಆತನು "ಧೈರ್ಯದಾಯಕ" ಆಗಿದ್ದನು.* ಆತನ ವಾಸ್ತವವಾದ ಹೆಸರು ಯೋಸೇಫ, ಆದರೆ ಅಪೊಸ್ತಲರು ಆತನಿಗೆ "ಬಾರ್ನಬ" ಎಂಬ ಅಡ್ಡ ಹೆಸರು ಇಟ್ಟಿದ್ದರು, ಅದರರ್ಥವು "ಧೈರ್ಯದಾಯಕ" (ಅಪೊಸ್ತಲರ ಕೃತ್ಯಗಳು 4:36). "ಧೈರ್ಯದಾಯಕತೆ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವನ್ನು (παράκλησις, *paraklēsis*) "ಆದರಣೆ" (KJV) ಅಥವಾ "ಪ್ರೋತ್ಸಾಹಿಸುವಿಕೆ" (NEB) ಎಂದು ಸಹ ಅನುವಾದಿಸಬಹುದು. ಲೂಕನು ಆದಿ ಸಭೆಯ ಕುರಿತು ನೀಡಿರುವ ಐತಿಹಾಸಿಕ ದಾಖಲೆಯಲ್ಲಿ, ಆತನು ಆದರಣೆ, ಧೈರ್ಯದಾಯಕತೆ, ಮತ್ತು ಪ್ರೋತ್ಸಾಹಿಸುವಿಕೆಯ ಗುಣಗಳನ್ನು ಒಳಗೊಂಡಿದ್ದ ಈ ಮನುಷ್ಯನ ಕುರಿತು ಪ್ರತ್ಯೇಕವಾಗಿ ಗಮನ ಹರಿಸುತ್ತಾನೆ. ಸ್ಪಷ್ಟವಾಗಿರುವಂತೆ, ಬಾರ್ನಬನ ಆತ್ಮೀಕತೆಗೆ ಸಂಬಂಧ ಪಟ್ಟಂತೆ ಅಪೊಸ್ತಲರ ಮೇಲೆ ಯಾವದೋ ಒಂದು ಸಂಗತಿಯು ಬಹಳ ಆಳವಾದ ಪ್ರಭಾವವನ್ನು ಬೀರಿತ್ತು.

"ಮಗನು" ಎಂಬ ಮಾತು ಒಂದು ಯೆಹೂದಿ ಗಾದೆಯಾಗಿದ್ದು ಅದು ಅತ್ಯಂಥ ತೀಕ್ಷ್ಣತೆಯನ್ನು ಹೊಂದಿರುವಂತೆ ಕಾಣಿಸುತ್ತದೆ. ಅದು ಒಬ್ಬನು ಸಂಗತಿಯಿಂದ (ಈ ಪ್ರಕರಣದಲ್ಲಿ "ಧೈರ್ಯ ತುಂಬುವಿಕೆ") ಹುಟ್ಟಿದ್ದಾನೆನೋ ಎಂಬಂತೆ, ಅದರ ಸ್ವಭಾವವನ್ನೇ ಹಂಚಿಕೊಂಡು ಹುಟ್ಟಿರುವಂತೆ ಆಗಿತ್ತು. ಈ ವಿಧವಾದ ಮಾತಿಗೆ ಹೊಸ ಒಡಂಬಡಿಕೆಯಲ್ಲಿರುವ ಇತರ ಉದಾಹರಣೆಗಳೆಂದರೆ "ಅವಿಧೇಯತೆಯ ಮಕ್ಕಳು" (ಎಫೆಸ 2:2), "ನರಕದ ಪುತ್ರ" (ಮತ್ತಾಯ 23:15), "ಗುಡುಗಿನ ಮರಿಗಳು" (ಮಾರ್ಕ 3:17), "ಬೆಳಕಿನ ಮಕ್ಕಳು" (ಲೂಕ 16:8),

ಮತ್ತು "ಪುನರುತ್ಥಾನದ ಮಕ್ಕಳು" (ಲೂಕ 20:36). ಬಾರ್ನಬನಿಗಿದ್ದ ಸ್ವಭಾವವೇ ಕರ್ತನನ್ನು ಹಿಂಬಾಲಿಸುವಂತೆ ಬೇರೆಯವರನ್ನು ಪ್ರೋತ್ಸಾಹಿಸುವದಾಗಿತ್ತು; ಆತನು ಬೇರೆಯವರನ್ನು ಕೆಡವಿ ಹಾಕುವದರ ಬದಲಾಗಿ ಅವರನ್ನು ಕಟ್ಟುವವನಾಗಿ ತಿರುಗಾಡಿದನು.

*ಆತನು ದಾರಾಳಿಯಾಗಿದ್ದನು* (ಅಪೊಸ್ತಲರ ಕೃತ್ಯಗಳು 4:37). ಬಾರ್ನಬನಿಗೆ ಬೇರೆಯವರ ಕುರಿತಾಗಿ ಇದ್ದ ಕಾಳಜಿಯು ಆತನು ಸಭೆಗೆ ದಾರಾಳವಾಗಿ ಕೊಡುವದರಲ್ಲಿ ತೋರಿ ಬಂದಿತ್ತು. ಆತನು "ತನಗಿದ್ದ ಭೂಮಿಯನ್ನು ಮಾರಿ ಬಂದ ಹಣವನ್ನು ತಂದು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಟ್ಟನು" ಎಂದು ಲೂಕನು ತಿಳಿಸಿದನು (ಅಪೊಸ್ತಲರ ಕೃತ್ಯಗಳು 4:37). ಯೇಸು ತಿಳಿಸಿದಂಥ ರೀತಿಯ ಬೆಳಕನ್ನು ಪ್ರಕಾಶಿಸುವಂತೆ ಸಭೆಗೆ ಪ್ರೇರಣೆ ಹಾಗೂ ಧೈರ್ಯವನ್ನು ಕೊಟ್ಟಂಥ ದಾರಾಳತನಕ್ಕೆ ಬಾರ್ನಬನು ಒಂದು ವಿಶ್ವಸನೀಯವಾದ ಉದಾಹರಣೆಯಾಗಿದ್ದಾನೆ. ಜನರಿಗೆ ಬೇರೆ ದಾರಿಯೇ ಇಲ್ಲದೆ ಅವರ ಸತ್ಕಾರ್ಯಗಳನ್ನು ಕಂಡು "ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವವರು" ಆಗಿದ್ದರು (ಮತ್ತಾಯ 5:16).

ಬಾರ್ನಬನು ಆತನ ಔದಾರ್ಯಕ್ಕೆ ಹೆಸರುವಾಸಿಯಾಗಿದ್ದನು, ಅದು ತನ್ನ ವಿರುದ್ಧ ಸಂಗತಿಗೆ - ಆಶಿಸುವಿಕೆ ಅಥವಾ ಲೋಭದ ಪಾಪ - ಸಂಪೂರ್ಣ ತದ್ವಿರುದ್ಧವಾಗಿರುತ್ತದೆ. ಕೊಲೊಸ್ಸೆ 3:5ರಲ್ಲಿ, ಪೌಲನು "ಲೋಭ"ವನ್ನು ಬಿದ್ದು ಹೋಗಿರುವ ಮಾನವರಲ್ಲಿ ಸಹಜವಾಗಿರುವ, ಕ್ರೈಸ್ತರು ಸಾಯಿಸಬೇಕಾಗಿರುವಂಥ ಪಾಪಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುತ್ತಾನೆ. ಆತನು ಲೋಭವನ್ನು "ವಿಗ್ರಹಾರಾಧನೆ"ಗೆ ಸಮಾನಗೊಳಿಸುತ್ತಾನೆ. ಸಂಪತ್ತಿಗಾಗಿ ಬೆನ್ನತ್ತುವದು ಜೀವನದಲ್ಲಿ ಎಷ್ಟೊಂದು ಪ್ರಾಮುಖ್ಯವಾದ ಗುರಿ ಮತ್ತು ಭದ್ರತೆಗೆ ತಳಹದಿಯಾಗಿ ಮಾರ್ಪಡಬಲ್ಲದೆಂದರೆ ಅದು ದೇವರಿಗೆ ಮಾತ್ರವೇ ಸ್ವಂತವಾಗಿರುವಂಥ ನಂಬಿಕೆಯನ್ನೇ ಆಕ್ರಮಿಸಿಕೊಂಡು ಬಿಡುತ್ತದೆ. ಬೇರೊಂದು ಕಡೆಯಲ್ಲಿ, ಪೌಲನು ಹೀಗೆ ಎಚ್ಚರಿಸುತ್ತಾನೆ, "ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ" (1 ತಿಮೊಥೆ 6:9). ಬಾರ್ನಬನು ಅಂತಹ ಮನುಷ್ಯನಾಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನು ದಾರಾಳತನಕ್ಕೆ ಒಂದು ಮಾದರಿ ಆಗಿದ್ದನು.

*ಆತನು ಧೈರ್ಯವಂತನಾಗಿದ್ದನು.* ಬಾರ್ನಬನು ಧೈರ್ಯವುಳ್ಳ ಮನುಷ್ಯನಾಗಿದ್ದನು, ಅದನ್ನು ತೀವ್ರವಾಗಿ ಪರಿವರ್ತನೆಗೊಂಡ ತಾರ್ಸದ ಸೌಲನೊಂದಿಗೆ ಆತನು ನಡೆದುಕೊಂಡ ರೀತಿಯಲ್ಲಿ ಕಾಣಬಹುದಾಗಿದೆ. ದಮಸ್ಕದಲ್ಲಿ ಕೂದಲೆಳೆಯ ಅಂತರದಲ್ಲಿ ಮರಣದಿಂದ ತಪ್ಪಿಸಿಕೊಂಡ ಬಳಿಕ, ಪೌಲನು ಯೆರೂಸಲೇಮಿನಲ್ಲಿರುವ ದೇವಜನರ ಬಳಗದೊಂದಿಗೆ ಸೇರಿಕೊಳ್ಳಲು ಪ್ರಯತ್ನಿಸಿದ ವಿಫಲನಾಗಿದ್ದನು.

> ಅವನು ಯೆರೂಸಲೇಮಿಗೆ ಬಂದು ಶಿಷ್ಯರೊಳಗೆ ಸೇರಿಕೊಳ್ಳಬೇಕೆಂದು ಪ್ರಯತ್ನ ಮಾಡಿದಾಗ ಎಲ್ಲರು ಅವನನ್ನು ಶಿಷ್ಯನೆಂದು ನಂಬದೆ ಅವನಿಗೆ ಭಯಪಟ್ಟರು. ಆದರೆ ಬಾರ್ನಬನು ಅವನನ್ನು ಕೈಹಿಡಿದು ಅಪೊಸ್ತಲರ ಬಳಿಗೆ ಕರೆದುಕೊಂಡುಹೋಗಿ ಅವನು ದಾರಿಯಲ್ಲಿ ಕರ್ತನನ್ನು ಕಂಡದ್ದನ್ನೂ ಕರ್ತನು ಅವನ ಸಂಗಡ ಮಾತಾಡಿದ್ದನ್ನೂ ದಮಸ್ಕದೊಳಗೆ ಯೇಸುವಿನ ಹೆಸರಿನಲ್ಲಿ ಧೈರ್ಯದಿಂದ ಮಾತಾಡಿದ್ದನ್ನೂ ಅವರಿಗೆ ವಿವರವಾಗಿ ಹೇಳಿದನು (ಅಪೊಸ್ತಲರ ಕೃತ್ಯಗಳು 9:26, 27).

ಬಾರ್ನಬನು ಮೊದಲ ಬಾರಿಗೆ ಯಾವ ಪರಿಸ್ಥಿತಿಗಳಲ್ಲಿ ಸೌಲನನ್ನು ಭೇಟಿಯಾದನೆಂಬದರ ಬಗ್ಗೆ ನಮಗೆ ನೇರವಾಗಿ ಹೇಳಲ್ಪಟ್ಟಿರುವದಿಲ್ಲ. ಹೇಗೂ, ಆತನ ಸಮೀಪಕ್ಕೆ ಬರುವದಕ್ಕೆ ಮಿಕ್ಕ ಎಲ್ಲರೂ ಹೆದರಿದವರಾಗಿದ್ದರೆಂಬುದು ತಿಳಿಸಲ್ಪಟ್ಟಿರುತ್ತದೆ. ಇದು ಬಾರ್ನಬನು ಧೈರ್ಯವಂತ ಮನುಷ್ಯನಾಗಿದ್ದನೆಂಬ ವಾಸ್ತವಾಂಶವನ್ನು ಪ್ರಮಾಣೀಕರಿಸುತ್ತದೆ. ಮಿಕ್ಕವರು ಸೌಲನಿಗೆ ಹೆದರಿದ್ದಕ್ಕೂ ಕಾರಣವಿತ್ತು. ಅಧ್ಯಾಯದ ಆರಂಭದಲ್ಲಿ ಆತನು "ಇನ್ನು ಕರ್ತನ ಶಿಷ್ಯರ ಮೇಲೆ ರೌದ್ರನಾಗಿದ್ದು ಬೆದರಿಕೆಯ ಮಾತುಗಳನ್ನಾಡುತ್ತಾ ಅವರನ್ನು ಸಂಹರಿಸಬೇಕೆಂದು ಆಶೆಪಡುತ್ತಾ" ಇದ್ದನು ಎಂದು ಹೇಳಲಾಗುತ್ತದೆ (ಅಪೊಸ್ತಲರ ಕೃತ್ಯಗಳು 9:1). ಸೌಲನ ಬಳಿಗೆ ರಕ್ಷಣೆಯ ಮಾತುಗಳನ್ನು ತೆಗೆದುಕೊಂಡು ಹೋಗಬೇಕೆಂದು ಆದೇಶಿಸಲ್ಪಟ್ಟಾಗ ಅನನೀಯನ ಪ್ರತಿಕ್ರಿಯೆಯು ಅಪಾಯದ ಗ್ರಹಿಕೆಯಿತ್ತೆಂಬುದಕ್ಕೆ ಸಾಕ್ಷಿಯಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:13, 14). ಅಂತೂ, ಕ್ರೈಸ್ತರನ್ನು ಸೆರೆಮನೆಗೆ ಹಾಕಿಸಿದ್ದನು, ಅವರಿಗೆ ಮರಣ ದಂಡನೆಯಾಗಬೇಕೆಂದು ಸಮ್ಮತಿ ಸೂಚಿಸಿದ್ದನು, ಹೊರಗಿನ ನಗರಗಳಲ್ಲಿಯೂ ಅವರನ್ನು ಬೆನ್ನತ್ತಿ ಹೋಗಿದ್ದನು, ಮತ್ತು ಯೇಸುವಿನ ನಾಮವನ್ನು ದೂಷಿಸುವಂತೆ ಅವರನ್ನು ಒತ್ತಾಯಿಸಲು ಪ್ರಯತ್ನಿಸಿದ್ದನು (ಅಪೊಸ್ತಲರ ಕೃತ್ಯಗಳು 26:9-11).

ನಿಸ್ಸಂಶಯವಾಗಿ, ಜೀವ ಪಣಕ್ಕಿಟ್ಟು ಈ ಕೆಲಸವನ್ನು ಮಾಡುವದಕ್ಕೆ ಬಾರ್ನಬನಿಗೆ ನಿಜಕ್ಕೂ ಸಾಕಷ್ಟು ಧೈರ್ಯದ ಅಗತ್ಯವಿತ್ತು. ಆತನು ಧೈರ್ಯವನ್ನು ತೋರಿಸಿದ್ದು ಮಾತ್ರವೇ ಆಗಿರಲಿಲ್ಲ, ಅಪೊಸ್ತಲರು ತನಗೆ ನೀಡಿದ "ಧೈರ್ಯದಾಯಕ" ಎಂಬ ಅಡ್ಡ ಹೆಸರಿಗೆ ತಕ್ಕಂತೆ ಜೀವಿಸಿ ತೋರಿಸಿದನು. ಪೌಲನು ಈಗ ಯೆಹೂದ್ಯರ ದ್ವೇಷಕ್ಕೆ ಗುರಿಯಾಗಿದ್ದ ವಿಶ್ವಾಸದ್ರೋಹಿಯಾಗಿದ್ದನು ಮತ್ತು ಕರ್ತನ ಶಿಷ್ಯರಿಂದ ಸಹ ದೂರ ಮಾಡಲ್ಪಟ್ಟಿದ್ದನು. ಆತನಿಗೆ ಬಹಳವಾಗಿ ಏಕಾಂತದ ಅನುಭವ ಆಗಿರಬಹುದು ಹಾಗೂ ಯೆರೂಸಲೇಮಿನ ಸಭೆಯೊಂದಿಗೆ ಸಂಪರ್ಕಕ್ಕೆ ತರುವದರ ಮೂಲಕ ಬಾರ್ನಬನು ಆತನಿಗೆ ಉಂಟುಮಾಡಿದಂಥ ಪ್ರೋತ್ಸಾಹದ ಅಗತ್ಯತೆಯಲ್ಲಿ ಪೌಲನು ಇದ್ದನು.

*ಆತನು ವಿಶ್ವಾಸಾರ್ಹನಾಗಿದ್ದನು.* ಯೆರೂಸಲೇಮಿನಲ್ಲಿದ್ದ ಸಭೆಯ ವಿರುದ್ಧ ಹಿಂಸೆಯುಂಟಾದದ್ದರ ಫಲಿತವಾಗಿ, ಕ್ರೈಸ್ತರು ಫಿಲಿಷ್ಟಿಯ ಮತ್ತು ಅದಾರಬೆಯ ಅನೇಕ ಭಾಗಗಳಿಗೆ ಚದುರಿ ಹೋದರು. ಅವರು ಹೋದ ಕಡೆಗಳಲ್ಲೆಲ್ಲಾ, ಬೇರೆಯವರ ಸಂಗಡ ಕ್ರಿಸ್ತನ ಸುವಾರ್ತೆಯನ್ನು ಹಂಚಿಕೊಂಡರು. ಕೊರ್ನೇಲ್ಯನ ಮನೆಯಲ್ಲಿ ಪ್ರಥಮ ಅನ್ಯಜನರ ಪರಿವರ್ತನೆಯ ಬಳಿಕ, "ಕುಪ್ರದ್ವೀಪದವರು . . . ಕುರೇನ್ಯದವರು ಕೆಲವರೂ ಅಂತಿಯೋಕ್ಯಕ್ಕೆ ಬಂದು ಗ್ರೀಕರ ಸಂಗಡಲೂ ಮಾತಾಡಿ ಕರ್ತನಾದ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದರು." ಅದರ ಫಲಿತವು ಏನಾಗಿತ್ತೆಂದರೆ "ಕರ್ತನ ಹಸ್ತವು ಅವರಿಗೆ ಸಹಾಯವಾದ್ದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು" (ಅಪೊಸ್ತಲರ ಕೃತ್ಯಗಳು 11:20, 21).

ಬಹಳಷ್ಟು ಜನರು ಕ್ರಿಸ್ತನಲ್ಲಿ ನಂಬಿಕೆಯಿಟ್ಟರೆಂಬುದರ ಕುರಿತು ಸುದ್ದಿಯು ಕೇಳಿದಾಗ ಯೆರೂಸಲೇಮಿನ ಸಭೆಯವರಿಗೆ ಮುಟ್ಟಿದಾಗ, ಅವರು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 11:22). ಅವರು ಆತನ ವಿಶ್ವಾಸಾರ್ಹತೆಯ ಕಾರಣದಿಂದಲೇ ಆತನನ್ನು ಆಯ್ಕೆ ಮಾಡಿದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸ್ಪಷ್ಟವಾಗಿರುವಂತೆ, ಆತನು ಯೆರೂಸಲೇಮಿನ ಸಭೆಯವರ ಕಣ್ಣುಗಳಾಗಿಯೂ ಕಿವಿಗಳಾಗಿಯೂ ಇರುವಂತೆ ಯೆರೂಸಲೇಮ ಸಭೆಯಿಂದ ಸಂಪೂರ್ಣ ಅಧಿಕಾರವನ್ನು ಪಡೆದವನಾಗಿ ಕಳುಹಿಸಲ್ಪಟ್ಟಿದ್ದನು. ಅಷ್ಟುಮಾತ್ರವಲ್ಲದೆ, ಆತನು ಅಲ್ಲಿನ ಪರಿಸ್ಥಿತಿಯ ಕುರಿತು

ಮೌಖಿಕವಾಗಿ ವರದಿಯನ್ನು ಕೊಡುವದಕ್ಕೋಸ್ಕರ ಯೆರೂಸಲೇಮಿಗೆ ಹಿಂದಿರುಗಿ ಬರಲಿಲ್ಲ. ಬಾರ್ನಬನು ಪರಿಸ್ಥಿತಿಯನ್ನು ಸಮರ್ಪಕವಾಗಿ ಪರೀಶಿಲಿಸಿ ಸೂಕ್ತವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆಂಬ ವಿಶ್ವಾಸವು ಅವರಿಗಿತ್ತು. “ಆದಕಾರಣ ಅಲ್ಲಿಗೆ ಬಂದು ದೇವರ ಕೃಪಾಕಾರ್ಯವನ್ನು ನೋಡಿದಾಗ ಸಂತೋಷಪಟ್ಟು - ನೀವು ದೃಢಮನಸ್ಸಿನಿಂದ ಕರ್ತನಲ್ಲಿ ನೆಲೆಗೊಂಡಿರ್ರಿ ಎಂದು ಅವರೆಲ್ಲರಿಗೆ ಬುದ್ಧಿ ಹೇಳಿದನು” (ಅಪೊಸ್ತಲರ ಕೃತ್ಯಗಳು 11:23).[40]

## ಬಾರ್ನಬನ ಗುಣಸ್ವಭಾವ, ಭಾಗ 2 (2:1-10, 13)

ಅನ್ಯಜನರಿಗೆ ಅಪೊಸ್ತಲನಾಗಿದ್ದವನ ನೆರಳಿನಲ್ಲಿ ಮರೆಯಾಗಲ್ಪಟ್ಟಿದ್ದಾಗ್ಯೂ, ಬಾರ್ನಬನು ಆತನು ಸ್ವತಃ ಒಬ್ಬ ಅದ್ಭುತವಾದ ಕ್ರೈಸ್ತನಾಗಿದ್ದನು. ಆತನಲ್ಲಿದ್ದ ಗುಣಸ್ವಭಾವಗಳಲ್ಲಿನ ಈ ಕೆಳಗಿನ ಗುಣಗಳನ್ನು ಆಲೋಚಿಸಿರಿ.

*ಆತನು “ಒಳ್ಳೆಯವನೂ.”* ಲೂಕನು ತನ್ನ ಕಥನವನ್ನು ಮುಂದುವರೆಸಿದ ಹಾಗೆ, ಆತನು ಬಾರ್ನಬನನ್ನು “ಒಳ್ಳೇಯವನು” ಎಂದು ಬಣ್ಣಿಸಿದನು (ಅಪೊಸ್ತಲ ಕೃತ್ಯಗಳು 11:24). ಒಬ್ಬನನ್ನು “ಒಳ್ಳೆಯ ಮನುಷ್ಯ” ಎಂದು ಹೇಳುವದು ನಮಗೆ ಬಹಳ ಸಾಮಾನ್ಯವಾಗಿರುತ್ತದಾದರೂ, ಶಾಸ್ತ್ರಗಳಲ್ಲಿ ಇದು ಅತ್ಯಂಥ ಅಸಹಜವಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ, ಶಿಷ್ಯರೊಳಗೆ ಬಾರ್ನಬ ಹಾಗೂ ಅರಿಮಥಾಯದ ಯೋಸೇಫ (ಲೂಕ 23:50) ಇವರನ್ನು ಮಾತ್ರವೇ “ಒಳ್ಳೆಯ” (ἀγαθός, *agathos*) ಎಂಬ ಗುಣವಾಚಕದೊಂದಿಗೆ ಬಣ್ಣಿಸಲಾಗಿರುತ್ತದೆ. ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ, ಈ “ಒಳ್ಳೇತನ” ಎಂಬುದು ನಾಮವಾಚಕ ಪದವು ಪವಿತ್ರಾತ್ಮನ ಫಲಗಳಲ್ಲೊಂದು ಎಂಬುದಾಗಿ ಕೊಡಲ್ಪಟ್ಟಿದೆ (5:22).

*ಆತನು “ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ” ಆಗಿದ್ದನು.* “ಒಳ್ಳೆಯವನು” ಆಗಿರುವದರ ಜೊತೆಗೆ, ಬಾರ್ನಬನನ್ನು “ಪವಿತ್ರಾತ್ಮಭರಿನೂ ನಂಬಿಕೆಯಿಂದ ತುಂಬಿದವನೂ” ಎಂದು ಬಣ್ಣಿಸಲಾಗಿದೆ (ಅಪೊಸ್ತಲರ ಕೃತ್ಯಗಳು 11:24). ಬಾರ್ನಬನ ಜೀವಿತದಲ್ಲಿ ಪವಿತ್ರಾತ್ಮನ ಕೆಲಸವನ್ನು ಅಪೊಸ್ತಲರ ಕೃತ್ಯಗಳು 4ರಲ್ಲಿ ಆರಂಭವಾಗಿತ್ತೆಂದು ಹೇಳಬಹುದು. ಯೆಹೂದಿ ಅಧಿಕಾರಿಗಳಿಂದಾಗಿ ಆದಿ ಸಭೆಯು ಚಿವುಟಿ ಹಾಕಲ್ಪಡಬಹುದಾದ ಅಪಾಯದಲ್ಲಿದ್ದಂಥ ಸಮಯದಲ್ಲಿ, ಶಿಷ್ಯರ ಪ್ರಾರ್ಥನೆಗೆ ಪ್ರತ್ಯುತ್ತರವಾಗಿ ಪವಿತ್ರಾತ್ಮನು ಬಹುಬಲವಾಗಿ ಮಧ್ಯಪ್ರವೇಶ ಮಾಡಿದ್ದನು: “ಅವರೆಲ್ಲರು ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು” (ಅಪೊಸ್ತಲರ ಕೃತ್ಯಗಳು 4:31). ಹೇಗೂ, ಪವಿತ್ರಾತ್ಮನ ಕೆಲಸವು ಶಿಷ್ಯರು ಬಾಯಿಂದ ಹೇಳುತ್ತಿದ್ದ ಸಾಕ್ಷಿಯನ್ನು ದಾಟಿ ಬಹು ದೂರಕ್ಕೆ ಸಾಗಿತ್ತು, ಅದೆಷ್ಟೊಂದು ಬಲವಾಗಿತ್ತೆಂದರೆ ಸಭಿಕರು ಸಹ ಪವಿತ್ರಾತ್ಮನ ಐಕ್ಯತೆ ಹಾಗೂ ದಾರಾಳತನವನ್ನು ಹೊಂದಿಕೊಂಡರು (ಅಪೊಸ್ತಲರ ಕೃತ್ಯಗಳು 4:32–35). ಆ ಹಂತದಲ್ಲಿ, ನಮಗೆ “ಧೈರ್ಯದಾಯಕ”ನಾದ ಬಾರ್ನಬನು ಪರಿಚಯಿಸಲ್ಪಡುತ್ತಾನೆ, ಆತನು ತನ್ನ ಹೊಲವನ್ನು ಮಾರಿ ಬಂದ ಹಣವನ್ನು ಸಭೆಗೆ ಕೊಟ್ಟನು. ಖಂಡಿತವಾಗಿಯೂ, ಆತನಲ್ಲಿ ಕೊಡುವಿಕೆ ಹಾಗೂ ಪ್ರೋತ್ಸಾಹಿಸುವಂಥ ಆತ್ಮೀಕ ವರಗಳಿದ್ದವು (ರೋಮಾ 12:8). ಅದರ ಜೊತೆಗೆ, ಅನಂತರದಲ್ಲಿ ಬಾರ್ನಬನನ್ನು ಅಂತಿಯೋಕ್ಯದಲ್ಲಿದ್ದ “ಪ್ರವಾದಿಗಳೂ ಭೋದಕರೂ” ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುತ್ತಾನೆ (ಅಪೊಸ್ತಲರ ಕೃತ್ಯಗಳು 13:1); ಪ್ರವಾದನೆ ಹಾಗೂ ಬೋಧನೆಗಳು ಸಹ ಪವಿತ್ರಾತ್ಮನ ವರಗಳಾಗಿದ್ದವು (ರೋಮಾ 12:6, 7; 1 ಕೊರಿಂಥ 12:10, 29).

*ಆತನು ಸುವಾರ್ತಿಕವಾಗಿದ್ದನು.* ಬಾರ್ನಬನು ಅಂತಿಯೋಕ್ಯಕ್ಕೆ ಬಂದ ಬಳಿಕ ಮತ್ತು

ಅಲ್ಲಿನ ಸಭೆಯವರಿಗೆ ಪ್ರೋತ್ಸಾಹ ಮಾಡಿದ ಮೇಲೆ, ವಾಕ್ಯಭಾಗವು "ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು" ಎಂದು ಹೇಳುತ್ತದೆ (ಅಪೊಸ್ತಲರ ಕೃತ್ಯಗಳು 11:24). ಬಳಿಕ, ಬಾರ್ನಬನು ಸೌಲನನ್ನು ಹುಡುಕಿಕೊಂಡು ತಾರ್ಸಗೆ ಪ್ರಯಾಣಿಸಿದನು. ಆತನು ಅವನನ್ನು ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು, ಅಲ್ಲಿ ಅವರು "ಪೂರಾ ಒಂದು ವರುಷ" ಶ್ರೇಷ್ಠವಾದ ಬೋಧನಾ ಸೇವೆಯನ್ನು ನಡಿಸಿದರು. ಈ ಕಾಲಾವದಿಯ ವೇಳೆಯಲ್ಲಿಯೇ "ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅಪೊಸ್ತಲರ ಕೃತ್ಯಗಳು 11:25, 26).

ಬಾರ್ನಬನು ಸುವಾರ್ತಾಸೇವೆ ಹಾಗೂ ನಂಬಿಕೆಯಲ್ಲಿ ಕೂಸುಗಳಾಗಿದ್ದ ಈ ಅನ್ಯಜನರನ್ನು ನೆಲೆಗೊಳಿಸುವ ದೊಡ್ಡ ಜವಾಬ್ದಾರಿಗಳನ್ನು ಹಂಚಿಕೊಳ್ಳುವದಕ್ಕೆ ಜೊತೆಗೆಲಸದವನಾಗಿ ಸೌಲನನ್ನು ಆರಿಸಿಕೊಂಡು ಉತ್ತಮ ವಿವೇಚನೆಯನ್ನು ತೋರ್ಪಡಿಸಿದನು. ಸೌಲನು ಇಸ್ರಾಯೇಲಿನ ನಂಬಿಕೆಯಲ್ಲಿ ಪಾಂಡಿತ್ಯದ ತರಬೇತಿ ಮಾತ್ರವಲ್ಲದೆ ಒಂದು ವಿಶೇಷವಾದ ಕರೆಯುವಿಕೆ ಮತ್ತು ಕ್ರಿಸ್ತನ ಸುವಾರ್ತೆಯ ಮರ್ಮಗಳನ್ನು ಸಾರುವದಕ್ಕೆ ದೈವಿಕ ಪ್ರೇರಣೆಯನ್ನು ಪಡೆದವನಾಗಿ ಒಂದು ವಿಶಿಷ್ಟವಾದ ಹಿನ್ನಲೆಯನ್ನು ಹೊಂದಿದ್ದನು. ಬಾರ್ನಬನಿಗೆ ಈತನಿಗಿಂತಲೂ ಉತ್ತಮ ಅರ್ಹತೆಯನ್ನು ಹೊಂದಿದ ಮತ್ತೊಬ್ಬ ವ್ಯಕ್ತಿಯು ಎಲ್ಲಿ ಸಿಕ್ಕಿರುವದಕ್ಕೆ ಸಾಧ್ಯವಿತ್ತು?

*ಆತನು ದೀನನಾಗಿದ್ದನು.* ಅನಂತರದಲ್ಲಿ ಪೌಲನು ಇಬ್ಬರೊಳಗೆ ಹೆಚ್ಚು ಪ್ರಬಲನಾದ ವೇಳೆ, ಪೌಲನ ಸರಿಸಾಟಿಯಿಲ್ಲದ ಸಾಮರ್ಥ್ಯವನ್ನು ಗುರುತಿಸಿ ಸುವಾರ್ತೆಯ ತಮ್ಮ ಶ್ರೇಷ್ಠವಾದ ಕೆಲಸದಲ್ಲಿ ತನ್ನ ಪಾಲುಗಾರರನ್ನಾಗಿ ಆರಿಸಿಕೊಂಡಿದ್ದು ಬಾರ್ನಬನೇ ಆಗಿದ್ದನು - ಹೊರತು ಪೌಲನು ಆತನನ್ನು ಆರಿಸಿಕೊಳ್ಳಲಿಲ್ಲ - ಎಂಬುದನ್ನು ಮರೆತು ಹೋಗುವದು ಸುಲಭವಾಗಿರುತ್ತದೆ. ಹಾಗಿದ್ದರೂ, ಮೊದಲ ಸುವಾರ್ತಾ ಪ್ರಯಾಣ ವೇಳೆ ಪೌಲನ ಜೊತೆಯಾಗಿ ಬಾರ್ನಬನು ಸಂತೋಷದಿಂದ ಸೇವೆ ಮಾಡಿದನು, ಗಲಾತ್ಯದಲ್ಲಿ ಸಭೆಗಳನ್ನು ಸ್ಥಾಪಿಸಿದರು. ಇಬ್ಬರಲ್ಲಿಯೂ ತೀಕ್ಷ್ಣವಾದ ಭಿನ್ನಾಭಿಪ್ರಾಯವು ಉಂಟಾದ ವೇಳೆ, ಅದಕ್ಕೆ ಯಾರು ದೊಡ್ಡವರು ಎಂಬ ಅಹಂಭಾವವು ಕಾರಣವಾಗಿರಲಿಲ್ಲ. ಬದಲಾಗಿ, ಬಾರ್ನಬನು ಯೋಹಾನನೆಸಿಕೊಳ್ಳುವ ಮಾರ್ಕನಿಗೆ - ಮೊದಲ ಸುವಾರ್ತಾ ಪ್ರಯಾಣದಲ್ಲಿ ಹಿಂದಿರುಗಿ ಹೋಗಿದ್ದವನು (ಅಪೊಸ್ತಲರ ಕೃತ್ಯಗಳು 13:13) - ಇನ್ನೊಂದು ಅವಕಾಶವನ್ನು ಕೊಡುವದಕ್ಕೆ ಬಯಸಿದ್ದನು. ಹೇಗೂ, ಪೌಲನು ಆತನನ್ನು ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಜೊತೆಯಲ್ಲಿ ಕರೆದುಕೊಂಡು ಹೋಗುವದಕ್ಕೆ ಬಯಸಲಿಲ್ಲ. ಹೀಗಿರುವದರಿಂದ ಇವರಿಬ್ಬರು ತಮ್ಮ ತಮ್ಮ ದಾರಿಯಲ್ಲಿ ಸಾಗಿದ್ದರು, ಆದರೆ ಇಬ್ಬರೂ ಕ್ರಿಸ್ತನ ಕೆಲಸವನ್ನಂತೂ ಮುಂದುವರೆಸಿದರು (ಅಪೊಸ್ತಲರ ಕೃತ್ಯಗಳು 15:36-41).

### ಅಪೊಸ್ತಲರ ಹಾಗೂ ಯೇಸುವಿನ ಸಾಕ್ಷಿ (2:7, 8)

ತಾವು ಸುವಾರ್ತೆಗೆ ಪ್ರಾಥಮಿಕ ಸಾಕ್ಷಿಗಳಾಗಿರುವ ವಿಶಿಷ್ಟವಾದ ಪಾತ್ರವನ್ನು ನಿರ್ವಹಿಸುವದಕ್ಕೆ ದೇವರಿಂದ ಆರಿಸಿಕೊಳ್ಳಲ್ಪಟ್ಟವರು ಎಂಬ ಪೂರ್ಣ ಪ್ರಜ್ಞೆಯು ಅಪೊಸ್ತಲರಿಗೆ ಇತ್ತು (ನೋಡಿರಿ ಲೂಕ 24:44-49). ಯೇಸುವು ಅವರಿಗೆ ಸ್ಪಷ್ಟವಾಗಿ ಬರಲಿರುವ ಪವಿತ್ರಾತ್ಮನ ಬಗ್ಗೆ ತಿಳಿಸಿದ್ದನು: "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13). ವಾಗ್ದಾನ ಮಾಡಲ್ಪಟ್ಟಂತೆ "ಮೇಲಣ ಲೋಕದಿಂದ . . . ಶಕ್ತಿ" ಬಂದಾಗ (ಲೂಕ 24:49; ನೋಡಿರಿ ಅಪೊಸ್ತಲರ ಕೃತ್ಯಗಳು 1:1-5) ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನವು ನೆರವೇರಿದ

ಮೇಲೆ (ಅಪೊಸ್ತಲರ ಕೃತ್ಯಗಳು 2:1-13), ಒಂದು ದಿಗ್ಭ್ರಮೆಗೊಳಿಸುವಂತಹ ರೂಪಾಂತರವು ಸಂಭವಿಸಿತ್ತು. ಇನ್ನು ಮೇಲೆ ಅವರು ಅನಿಶ್ಚಿತತೆ ಹಾಗೂ ಸಂದೇಹಗಳಲ್ಲಿ ಮುದುಡಿಕೊಂಡಿರಬೇಕಾದ ಅಗತ್ಯವಿರಲಿಲ್ಲ, ಆದರೆ ಧೈರ್ಯವಂತರಾಗಿ ಯೆಹೂದಿ ಸಮೂಹಗಳನ್ನು ಎದುರಿಸಿದರು. ಅಪೊಸ್ತಲರು ಅವರ ಮೇಲೆ ದೀರ್ಘಕಾಲದಿಂದ ಅವರು ಎದುರು ನೋಡುತ್ತಿದ್ದ ಮೆಸ್ಸೀಯನಾದ ಯೇಸುವನ್ನು ಶಿಲುಬೆಗೆ ಹಾಕಿಸಿದವರೆಂದು ದೋಷ ಹೊರಿಸಿದರು, ಮತ್ತು ಕಥೆಯ ಮಿಕ್ಕ ಭಾಗವನ್ನು ಬಯಲುಗೊಳಿಸಲಾರಂಭಿಸಿದರು, ಪಶ್ಚಾತ್ತಾಪ, ಪಾಪಗಳ ಕ್ಷಮಾಪಣೆ, ಮತ್ತು ಪವಿತ್ರಾತ್ಮನ ವರದಾನಗಳ ಕುರಿತಾಗಿ ಸಾರಿದರು (ಅಪೊಸ್ತಲರ ಕೃತ್ಯಗಳು 2:14-40). ಅಂಥ ಶಕ್ತಿಯು - ಮಾತುಗಳಲ್ಲಿ ಮಾತ್ರವೇ ಅಲ್ಲ, ಆದರೆ ಅದ್ಭುತಕರವಾದ ಸೂಚಕ ಹಾಗೂ ಮಹತ್ಕಾರ್ಯಗಳು - ಎಷ್ಟೊಂದು ಗೋಚರವಾಗಿತ್ತೆಂದರೆ, ಪಂಚಾಶತ್ತಮ ದಿನದಂದು, ಸುಮಾರು ಮೂರು ಸಾವಿರ ಆತ್ಮಗಳ ಸದಸ್ಯತ್ವದೊಂದಿಗೆ ಗಲಿಲಾಯದ ಈ ದೀನ ಮನುಷ್ಯರ ಮೂಲಕವಾಗಿ ದೇವರ ಸಭೆಯು ಆರಂಭಿಸಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 2:41-47).

ಅವರು ಈ ರಕ್ಷಣೆಯ ವಿಷಯದಲ್ಲಿ ಸಾಕ್ಷಿ ಹೇಳುವದನ್ನು ಮುಂದುವರೆಸಿದ ಹಾಗೆ, ಅಪೊಸ್ತಲರು ತಮಗೆ ಒಪ್ಪಿಸಲ್ಪಟ್ಟಿರುವ ಈ ಕೆಲಸವು ಎಷ್ಟು ಘನವಾದದ್ದೆಂಬುದನ್ನು ಒತ್ತಿ ಹೇಳಿದರು. ಪೇತ್ರನು ಯೆಹೂದಿ ಹಿರೀ ಸಭೆಯರ ಮೇಲೆ ದೋಷಾರೋಪಣೆ ಮಾಡುತ್ತಾ, ಹೀಗೆ ನುಡಿದನು,

> ನೀವು ಮರದ ಕಂಭಕ್ಕೆ ತೂಗಹಾಕಿ ಕೊಂದ ಯೇಸುವನ್ನು ನಮ್ಮ ಪಿತೃಗಳ ದೇವರು ಎಬ್ಬಿಸಿದನು. ದೇವರು ಆತನನ್ನೇ ಇಸ್ರಾಯೇಲ್ ಜನರಿಗೆ ಮಾನಸಾಂತರವನ್ನೂ ಪಾಪಪರಿಹಾರವನ್ನೂ ದಯಪಾಲಿಸುವದಕ್ಕಾಗಿ ನಾಯಕನೆಂತಲೂ ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಿದನು. ಈ ಕಾರ್ಯಗಳಿಗೆ ನಾವು ಸಾಕ್ಷಿ; ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ ಸಾಕ್ಷಿ ಎಂದು ಹೇಳಿದರು (ಅಪೊಸ್ತಲರ ಕೃತ್ಯಗಳು 5:30-32).

ಕೊರ್ನೇಲ್ಯನ ಮನೆಯಲ್ಲಿ, ಪೇತ್ರನು ಯೇಸುವಿನ ಸೇವೆಯನ್ನು ಕುರಿತು ಪುನಃ ಉಚ್ಛರಿಸುತ್ತಾನೆ:

> ಆತನು ಯೆಹೂದ್ಯರ ಸೀಮೆಯಲ್ಲಿಯೂ ಯೆರೂಸಲೇಮಿನಲ್ಲಿಯೂ ಮಾಡಿದ ಎಲ್ಲಾ ಕಾರ್ಯಗಳಿಗೆ ನಾವು ಸಾಕ್ಷಿಗಳಾಗಿದ್ದೇವೆ. ಆತನನ್ನು ಮರದ ಕಂಭಕ್ಕೆ ತೂಗಹಾಕಿ ಕೊಂದರು. ದೇವರು ಆತನನ್ನು ಮೂರನೆಯ ದಿನದಲ್ಲಿ ಎಬ್ಬಿಸಿ ಪ್ರತ್ಯಕ್ಷನಾಗುವಂತೆ ಮಾಡಿದನು; ಆತನು ಎಲ್ಲರಿಗೆ ಪ್ರತ್ಯಕ್ಷನಾಗದೆ ದೇವರು ಮುಂಚಿತವಾಗಿ ಆರಿಸಿಕೊಂಡಿದ್ದ ಸಾಕ್ಷಿಗಳಾದ ನಮಗೆ ಪ್ರತ್ಯಕ್ಷನಾದನು. ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಮೇಲೆ ನಾವು ಆತನ ಸಂಗಡ ಅನ್ನಪಾನಗಳನ್ನು ತಕ್ಕೊಂಡೆವು. ಆತನೇ ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ ದೇವರಿಂದ ನೇಮಕವಾದವನು ಎಂಬದನ್ನು ಜನರಿಗೆ ಸಾರಿ ಸಾಕ್ಷಿಹೇಳಬೇಕೆಂದು ದೇವರು ನಮಗೆ ಅಪ್ಪಣೆಕೊಟ್ಟನು. ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿಹೇಳಿದ್ದಾರೆ ಅಂದನು (ಅಪೊಸ್ತಲರ ಕೃತ್ಯಗಳು 10:39-42)

ಪಿಸಿದ್ಯದ ಅಂತಿಯೋಕ್ಯದಲ್ಲಿ ಪೌಲನು ನೀಡಿದ ಸಾಕ್ಷಿಯು ಸಹ ಅತ್ಯಂಥ ದಿಟ್ಟತನದಿಂದ

ಕೊಡಲ್ಪಟ್ಟದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 13:29-32).

ಪೇತ್ರನು ಬರೆದ ಮೊದನೆಯ ಪತ್ರಿಕೆಯಿಂದ ಆಯ್ದ ವಾಕ್ಯವೊಂದು ಸಾಕ್ಷಿಯಾಗಿ ಆತನಿಗಿರುವ ಪಾತ್ರವನ್ನು ಕುರಿತು ಎತ್ತಿ ತೋರಿಸುತ್ತದೆ: "ಸಭೆಯ ಹಿರಿಯರೇ, ಜೊತೆಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವದೇನಂದರೆ" (1 ಪೇತ್ರ 5:1). ಎರಡನೆಯ ಪತ್ರಿಕೆಯಲ್ಲಿ, ಪೇತ್ರನು ಸವಿಸ್ತಾರವಾದ ಪ್ರಸಂಗದಲ್ಲಿ ತನ್ನ ಸಾಕ್ಷಿಯನ್ನು ತಿಳಿಸುತ್ತಾನೆ:

> ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು. ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ಮೆಚ್ಚಿದ್ದೇನೆ ಎಂಬಂಥ ವಾಣಿಯು ಸರ್ವೋತ್ಕೃಷ್ಟಪ್ರಭಾವದಿಂದ ಆತನಿಗೆ ಉಂಟಾದದ್ದರಲ್ಲಿ ಆತನು ತಂದೆಯಾದ ದೇವರಿಂದ ಘನಮಾನಗಳನ್ನು ಹೊಂದಿದನಲ್ಲವೇ. ನಾವು ಪರಿಶುದ್ಧಪರ್ವತದ ಮೇಲೆ ಆತನ ಸಂಗಡ ಇದ್ದಾಗ ಆಕಾಶದಿಂದ ಬಂದ ಆ ವಾಣಿಯನ್ನು ನಾವೇ ಕೇಳಿದೆವು. ಇದಲ್ಲದೆ ಪ್ರವಾದನವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು (2 ಪೇತ್ರ 1:16-19).

ಪೇತ್ರನು ಕೊಡಲ್ಪಟ್ಟ ಸಂದೇಶವನ್ನು ಜ್ಞಾಪಿಸುವವನಾಗಿ ತನ್ನ ಪತ್ರಿಕೆಗಳನ್ನು ಮುಕ್ತಾಯಗೊಳಿಸುತ್ತಾನೆ:

> ಪ್ರಿಯರೇ, ನಿಮಗೀಗ ಬರೆಯುವದು ಎರಡನೆಯ ಪತ್ರಿಕೆ. ಪರಿಶುದ್ಧ ಪ್ರವಾದಿಗಳು ಪೂರ್ವದಲ್ಲಿ ಹೇಳಿದ ಮಾತುಗಳನ್ನೂ ಕರ್ತನಾದ ರಕ್ಷಕನು ನಿಮ್ಮ ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆಯನ್ನೂ ನೀವು ಜ್ಞಾಪಕಮಾಡಿಕೊಳ್ಳಬೇಕೆಂದು ಈ ಎರಡು ಪತ್ರಿಕೆಗಳಲ್ಲಿಯೂ ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪ್ರೇರಿಸಿದ್ದೇನೆ (2 ಪೇತ್ರ 3:1, 2).

ಈ ಕೆಲವು ವಾಕ್ಯಭಾಗಗಳು ಖಂಡಿತವಾಗಿಯೂ ಒಂದು ಸಮಗ್ರವಾದ ಪಟ್ಟಿಯನ್ನು ಒಳಗೊಂಡಿರುವದಿಲ್ಲ. ಬಹಳ ತದ್ವಿರುದ್ಧವಾಗಿ, ಪ್ರಾಥಮಿಕವಾಗಿ ಒಬ್ಬನೇ ಒಬ್ಬ ಅಪೊಸ್ತಲನಿಂದ ಬಂದ ಅಂಥ ಸಾಕ್ಷಿ-ಸಂಬಂಧಿಸಿದ ಮಾತುಗಳಲ್ಲಿ ಬಹಳ ಮಿತವಾದ ಆಯ್ದ ಮಾತುಗಳನ್ನು ಪ್ರತಿನಿಧಿಸುತ್ತವಷ್ಟೆ. "ಕಂಡವರು" ಮತ್ತು "ಸಾಕ್ಷಿ" ಎಂಬ ಪದಗಳು ನ್ಯಾಯಾಲಯದ ಭಾಷೆಯಿಂದ ಹೊರಹೊಮ್ಮುವಂಥವುಗಳಾಗಿದ್ದು, ಅಲ್ಲಿ ಪ್ರಕರಣಗಳನ್ನು ವಿಚಾರಣೆ ಮಾಡಲಾಗುತ್ತದೆ ಮತ್ತು ಒಂದು ತೀರ್ಮಾನಕ್ಕೆ ಬಂದು ತೀರ್ಪೊಂದನ್ನು ಪ್ರಕಟಿಸುವದಕ್ಕೆ ಸಾಧ್ಯವಾಗುವಂತೆ ಸಾಕ್ಷ್ಯಗಳನ್ನು ಕೊಡುವದಕ್ಕಾಗಿ ಸಾಕ್ಷಿಗಳನ್ನು ಕರೆಯಲಾಗುತ್ತದೆ. ನಮ್ಮ ದೇವರು ನ್ಯಾಯದ ದೇವರಾಗಿದ್ದಾನೆ. ನಮ್ಮ ನೀತಿಕರಣದ ವ್ಯವಸ್ಥೆಯು ನಂಬಿಕೆ (ವಿಶ್ವಾಸ) ಮೂಲಕ ಕೃಪೆಯ ಮೇಲೆ ಆಧಾರವಾಗಿದೆಯಾದರೂ, ಪೌಲನು ಸಾಕ್ಷಿ ನುಡಿದ ಪ್ರಕಾರ, "ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10).[41] ಇದು ವಿರೋಧಾಭಾಸದಂತೆ ಕಾಣಿಸಬಹುದಾದರೂ, ನಾವು

ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವಾದರೂ, ನ್ಯಾಯತೀರ್ಪು ನಮ್ಮ ಕೃತ್ಯಗಳಿಗೆ ಅನುಸಾರವಾಗಿರುವದು ಎಂಬುದು ಹೊಸ ಒಡಂಬಡಿಕೆಯ ಏಕರೂಪ ಉಪದೇಶವಾಗಿದೆ.[42]

ಹಲವಾರು ವಾಕ್ಯಭಾಗಗಳಲ್ಲಿ (ಪ್ರಕಟನೆ 1:2, 9; 12:17; 19:10), ನಾವು "ಯೇಸುವಿನ ವಿಷಯವಾದ ಸಾಕ್ಷಿ" ಎಂಬ ಉಲ್ಲೇಖಗಳನ್ನು ಕಾಣುತ್ತೇವೆ, ಅದರ ಅರ್ಥವು ಯೇಸುವಿನ "ವಿಷಯವಾದ" ಅಥವಾ "ಕುರಿತಾದ" (ದ್ವಿತೀಯಾರ್ಥ ಷಷ್ಠೀ) ಸಂದೇಶ ಎಂಬುದೆ. ಈ "ಸಾಕ್ಷಿ" ಎಂಬುದು "ಸುವಾರ್ತೆ" ಎಂಬುದಕ್ಕಿರುವ ಇನ್ನೊಂದು ಪದವಾಗಿದೆ (ನೋಡಿರಿ 2 ತಿಮೊಥೆ 1:8-10; ಪ್ರಕಟನೆ 6:9). ಸ್ವತಃ ಯೇಸುವು "ಪೊಂತ್ಯ ಪಿಲಾತನ ಕಾಲದಲ್ಲಿ ಶ್ರೇಷ್ಠಪ್ರತಿಜ್ಞೆಯನ್ನು ತಾನೇ ಸಾಕ್ಷಿಯಾಗಿದ್ದನು" (1 ತಿಮೊಥೆ 6:13). ಕೆಲವು ವಾಕ್ಯಭಾಗಗಳಲ್ಲಿ "ಯೆಸುವಿನ ವಿಷಯವಾದ ಸಾಕ್ಷಿ" ಎಂಬುದು ಒಂದು ನಿರ್ದಿಷ್ಟ ಕಾಲದಲ್ಲಿ ಸ್ವತಃ ಯೇಸುವು ನುಡಿದ ಸಂಗತಿಗಳನ್ನು ಸೂಚಿಸುವ ಸಾಧ್ಯತೆಯಿದೆಯಾದರೂ,[43] ಶಾಸ್ತ್ರವು ಆಗಲೂ ಒಂದೇ ವಾಸ್ತವಾಂಶವನ್ನು ಮುಂದಿಡುತ್ತದೆ: ಯೇಸುವೇ ಕ್ರಿಸ್ತನು, ಮೆಸ್ಸೀಯನು, ಯೆಹೂದ್ಯರ ಅರಸನು, ಲೋಕದ ರಕ್ಷಣೆಗೋಸ್ಕರ ತನ್ನ ಪ್ರಾಣವನ್ನು ಈಡು ಕೊಟ್ಟವನು.

## "ಕ್ರಿಸ್ತನ ವಿಷಯವಾದ ಮರ್ಮ" (2:11-21)

ದೇವರು ಕ್ರಿಸ್ತನ ಮುಖಾಂತರವಾಗಿ ಈ ಲೋಕಕ್ಕೆ ತಂದ ಸಮಾಧಾನದ ಅತ್ಯಂಥ ಪ್ರಾಮುಖ್ಯವಾದ ಅಂಶಗಳೊಳಗೆ ಮುಂಚಿತವಾಗಿ ಮರೆಯಾಗಿಡಲ್ಪಟ್ಟಿದ್ದ ಒಂದು ಅಂಶವು ಏನೆಂದರೆ ಆತನು ಅರಿಸಿಕೊಂಡ ಇಸ್ರಾಯೇಲ್ ಜನರು ಹಿಂದೆ ಮಿಕ್ಕ ಎಲ್ಲಾ ಜನಾಂಗಗಳಿಂದ ಪ್ರತ್ಯೇಕಿಸಲ್ಪಟ್ಟ ಸಂಗತಿಯು ಈಗ ಕ್ರಿಸ್ತನಲ್ಲಿ ತೆಗೆದು ಹಾಕಲ್ಪಟ್ಟಿದೆ ಎಂಬುದೆ. ಪೌಲನು "ಕ್ರಿಸ್ತನ ವಿಷಯವಾದ ಮರ್ಮ" ಎಂಬ ಪದಗುಚ್ಛವನ್ನು ಯೆಹೂದ್ಯರು ಹಾಗೂ ಅನ್ಯಜನಾಂಗದ ನಡುವಿನ ಈ ಸಂಪೂರ್ಣ ಹೊಸ ಸಮಸ್ಯೆಗೆ ಅನ್ವಯಗೊಳಿಸುತ್ತಾನೆ. ಹೊಸ ಒಡಂಬಡಿಕೆಯಲ್ಲಿ ಇನ್ನೂ ಅನೇಕ ಮರ್ಮಗಳು ಕಾಣಿಸಿಕೊಳ್ಳುತ್ತವೆ,[44] ಆದರೆ ಇದು ಎಷ್ಟೊಂದು ಮಹತ್ವಪೂರ್ಣವಾದದ್ದೆಂದರೆ ಪೌಲನು ಇದರ ಕುರಿತು ಬರೆಯಲು, ವಿಶೇಷವಾಗಿ ಆತನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಸಾಕಷ್ಟು ಸ್ಥಳವನ್ನು ಕೊಡುತ್ತಾನೆ:

> ಅದನ್ನು ಕುರಿತು ನಾನು ಹಿಂದೆ ಸಂಕ್ಷೇಪವಾಗಿ ಬರೆದಿದ್ದೇನೆ; ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು. ಆ ಮರ್ಮವು ಈ ಕಾಲದಲ್ಲಿ ದೇವರ ಪರಿಶುದ್ಧ ಅಪೊಸ್ತಲರಿಗೂ ಪ್ರವಾದಿಗಳಿಗೂ ಪವಿತ್ರಾತ್ಮನಿಂದ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ. ಅದು ಯಾವದಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ ಸುವಾರ್ತೆಗೆ ಸೇವಕನಾದೆನು. ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ

ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದ್ದನು (ಎಫೆಸ 3:4-11).

ಈ ವಾಕ್ಯಭಾಗದಲ್ಲಿರುವ ಪ್ರಮುಖವಾದ ವಿಚಾರವೇನೆಂದರೆ, ದೇವರು ಇಸ್ರಾಯೇಲ್ಯರ ಸಂಗಡ ಸೀನಾಯ್ ಪರ್ವತದಲ್ಲಿ ಮಾಡಿಕೊಂಡ ಒಡಂಬಡಿಕೆಯ ಅಡಿಯಲ್ಲಿ ವ್ಯವಹರಿಸುತ್ತಿದ್ದ 1,500 ವರ್ಷಗಳಲ್ಲಿ, ಅವರು ನಂಬುವವರಾದ ಪ್ರಕಾರ, ಅವರ ಮೇಲೆಯೇ ಆತನ ಇಡೀ ಗಮನವು ಇರಲಿಲ್ಲ. ಅವರು ಒಂದು ರೀತಿಯಲ್ಲಿ ವಸ್ತುನಿಷ್ಠ ಪಾಠದಂತಿದ್ದರು, ದೇವರು ಆದಿಯಿಂದಲೂ ಮನಸ್ಸಿನಲ್ಲಿ ಹೊಂದಿದ್ದ "ಮರ್ಮ"ದಲ್ಲಿ ಒಂದು ಭಾಗವಾಗಿದ್ದರಷ್ಟೆ. ಎಫೆಸದವರಿಗೆ 3ನೇ ಅಧ್ಯಾಯದ ಸನ್ನಿವೇಶದಲ್ಲಿ, ಒಂದು ಕಾಲದಲ್ಲಿ ಮರೆಯಾಗಿಡಲ್ಪಟ್ಟಿದ್ದ ಸತ್ಯವು ಏನೆಂದರೆ ಕ್ರಿಸ್ತನು ನಾಶನದಲ್ಲಿರುವ ಇಡೀ ಲೋಕಕ್ಕೆ, ಸಕಲ ಜನಾಂಗಗಳಿಗೆ (τὰ ἔθνη, *ta ethnē*, "ಅನ್ಯಜನಗಳು") ರಕ್ಷಕನಾಗಿರಲಿದ್ದನು ಎಂಬುದೆ. ಇಸ್ರಾಯೇಲ್ಯರು ಅದುವರೆಗೂ ನಂಬಿದ್ದಕ್ಕೆ ಸಂಪೂರ್ಣ ಮತಭೇದವುಳ್ಳದ್ದೇನೆಂದರೆ, ದೇವರು ಅವರನ್ನು ಮಾತ್ರವೇ ಪ್ರತ್ಯೇಕವಾಗಿ ಪ್ರೀತಿಸಲಿಲ್ಲ. ಆತನು ಅವರನ್ನು ತನ್ನ ಉದ್ದೇಶಕ್ಕೋಸ್ಕರ ಆರಿಸಿಕೊಂಡಿದ್ದಂತೂ ನಿಜವೇ ಆಗಿತ್ತು; ಆದರೆ ಯೇಸುವಿನ ಮೂಲಕವಾಗಿ ತೋರಿ ಬಂದ ಆತನ ಪ್ರೀತಿಯು ಇಡೀ "ಲೋಕದ" ಕಡೆಗೆ ಆಗಿತ್ತು (ಯೋಹಾನ 3:16).

ಇಸ್ರಾಯೇಲ್ಯರು ದೇವರ ಸಂಗಡ ಪ್ರತ್ಯೇಕ ಒಡಂಬಡಿಕೆಯ ಸಂಬಂಧದಲ್ಲಿದ್ದ ಆ ಕಾಲದ ವೇಳೆಯಲ್ಲಿ (ವಿಮೋಚನಕಾಂಡ 19:1-6), ಅವರ ಅನ್ಯಜನರೊಂದಿಗೆ ಸಕಲ ವಿಧವಾದ ಸಂಬಂಧಗಳಿಂದಲೂ ದೂರವಿಟ್ಟುಕೊಳ್ಳಬೇಕಾಗಿತ್ತು. ಅವರು ದೇವರ ಸ್ವಕೀಯವಾಗಿದ್ದು, ಆತನಿಗೋಸ್ಕರ ಮೀಸಲಾದ ಪರಿಶುದ್ಧ ಜನ, ಮತ್ತು "ಜನಾಂಗಗಳಿಗೆ ಬೆಳಕಾಗಿ" (ಯೆಶಾಯ 42:6) ಇರುವದಕ್ಕೋಸ್ಕರ ವಿಶೇಷವಾದ ಪ್ರಜೆಗಳಾಗಿರುವದಕ್ಕೆ ಕರೆಯಲ್ಪಟ್ಟಿದ್ದರು. ಇಸ್ರಾಯೇಲ್ ಜನರನ್ನು ಮಿಕ್ಕ ಜನಗಳಿಗಿಂತ ಭಿನ್ನವಾಗಿರುವಂತೆ ಮಾಡುವದಕ್ಕೆ ದೇವರು ಧರ್ಮಶಾಸ್ತ್ರವನ್ನು ಒದಗಿಸಿದ್ದನು, ಅದು ಅವರಿಗೆ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವಂತೆ ಆಜ್ಞಾಪಿಸಿತ್ತು. ಅದರ ಸ್ವಭಾವದಂತೆಯೇ, ಅನೇಕ ದಾರಿಗಳಲ್ಲಿ ಅವರಿಗೆ ಒಂದು ಆಶೀರ್ವಾದವಾಗಿ ಇತ್ತಾದರೂ (ನೋಡಿರಿ ರೋಮಾ 3:1, 2), ಧರ್ಮಶಾಸ್ತ್ರವು ಯೆಹೂದ್ಯರು ಹಾಗೂ ಅನ್ಯಜನರ ನಡುವೆ ಒಂದು ವೈರತ್ವಕ್ಕೆ ಒಂದು ತಳಹದಿಯಾಗಿ ಕಂಡು ಬಂದಿತ್ತು. ಸುವಾರ್ತೆಯು ಸಕಲ ಜನಾಂಗಗಳಿಗೋಸ್ಕರವಾಗಿದೆ ಎಂಬುದಾಗಿ ಪೌಲ ಹಾಗೂ ಇತರ ಅಪೊಸ್ತಲರು ಸಾರಿದಾಗ, ಯೆಹೂದ್ಯರು ಕೋಪದಿಂದ ಪ್ರತಿಕ್ರಿಯಿಸಿದ್ದರು, ಕೊಲೆ ಮಾಡುವ ಹಂತಕ್ಕೂ ಹೋಗಿದ್ದರು (ಅಪೊಸ್ತಲರ ಕೃತ್ಯಗಳು 22:20-23). ದ್ವೇಷದಿಂದ ತುಂಬಿದ್ದ ಅವರು, ಎಲ್ಲಾ ಮಾನವರಿಗಾಗಿದ್ದ ಸರ್ವರನ್ನು-ಒಳಗೊಂಡಿದ್ದ ದೇವರ ಪ್ರೀತಿಗೆ ಕುರುಡರಾಗಿದ್ದರು (ನೋಡಿರಿ ಯೆಶಾಯ 6:8-10; ಮತ್ತಾಯ 13:13-15). ಇದು ಧರ್ಮಶಾಸ್ತ್ರದ ಗುಣದಿಂದಾಗಿ ಅಸ್ತಿತ್ವದಲ್ಲಿದ್ದ ತಡೆಯು ಇದಾಗಿತ್ತು, ಪೌಲನು ಹೇಳಿದಂತೆ, "ಅಗಲಿಸಿದ ಅಡ್ಡಗೋಡೆ"ಯು ಯೆಹೂದ್ಯರು ಹಾಗೂ ಅನ್ಯಜನರ ನಡುವೆ ನಿಂತಿತ್ತು ಮತ್ತು ಅದನ್ನು ಯೇಸುವು ಮುರಿದು ಹಾಕಿದನು:

ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು. ಆತನು ಸಮಾಧಾನಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನಪುರುಷನನ್ನಾಗಿ

> ನಿರ್ಮಿಸಿದ್ದಾನೆ; ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ. ಇದಲ್ಲದೆ ಆತನು ಬಂದು ದೂರವಾಗಿದ್ದ ನಿಮಗೂ ಸಮಾಧಾನವನ್ನು ಮತ್ತು ಸಮೀಪವಾಗಿದ್ದವರಿಗೂ ಸಮಾಧಾನವನ್ನು ಸಾರಿದನು. ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು (ಎಫೆಸ 2:14-18).

ಎಫೆಸದಲ್ಲಿ ಚರ್ಚೆಯಲ್ಲಿರುವ "ಮರ್ಮ"ವು "ದೇವರಲ್ಲಿ ಮರೆಯಾಗಿದ್ದ" "ಸಮಾಧಾನ" (εἰρήνη, *eirēnē*) ಆಗಿತ್ತು, ಅಂದರೆ, "ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ" (ಎಫೆಸ 3:6, 9). ಸಂದೇಶವು ಸ್ಪಷ್ಟವಾಗಿರುತ್ತದೆ: ಕ್ರಿಸ್ತ ಯೇಸುವಿನಲ್ಲಿ, ಚರ್ಮದ ವರ್ಣ, ಸಮಾಜಿಕ ವರ್ಗ, ಅಥವಾ ಬಾಹ್ಯ ತೋರಿಕೆಗೆ ಸಂಬಂಧಿಸಿದ ಬೇರೆ ಯಾವದೇ ಭೇದದ ಆಧಾರದಲ್ಲಿ ಜನಾಂಗೀಯ ಭೇದ ಅಥವಾ ಪಕ್ಷಪಾತಕ್ಕೆ ಅವಕಾಶವೇ ಇರುವದಿಲ್ಲ; ಯಾಕೆಂದರೆ "ದೇವರಿಗೆ ಪಕ್ಷಪಾತವಿಲ್ಲ" (ರೋಮಾ 2:11; KJV).[45] ಗ್ರೀಕ್ ವಾಕ್ಯದಲ್ಲಿ, προσωποληµψία (*prosōpolēmpsia*) ಎಂಬ ಮಾತು "ಮುಖವನ್ನು ಅಥವಾ ವ್ಯಕ್ತಿಯನ್ನು ಸ್ವೀಕರಿಸಿಕೊಳ್ಳುವವನು [ಅಥವಾ 'ಅಂಗೀಕರಿಸಿಕೊಳ್ಳುವವನು']" - ಅಂದರೆ, ಹೊರಗಿನ ತೋರಿಕೆಯನ್ನು ನೋಡುವವನಾಗಿ ಸಾಮಾಜಿಕ ಸ್ಥಾನ, ಐಶ್ವರ್ಯ, ಮತ್ತು ಇತ್ಯಾದಿಗಳ ಪರಿಸ್ಥಿತಿಗಳನ್ನಾಧರಿಸಿ ಪಕ್ಷಪಾತ ಅಥವಾ ವಿಶೇಷ ಪ್ರೀತಿ ತೋರಿಸುವಂಥ ವ್ಯಕ್ತಿ - ಎಂದು ಸೂಚಿಸುತ್ತದೆ. ಅನ್ಯಜನರಲ್ಲಿ ಪರಿವರ್ತನೆಗೊಂಡ ಮೊದಲ ವ್ಯಕ್ತಿಯಾಗಿದ್ದ ಕೊರ್ನೇಲ್ಯನ ಮನೆಗೆ ಹೋಗಬೇಕೆಂದು ಕರೆಯಲ್ಪಟ್ಟಾಗ, ಜನಾಂಗೀಯ ಆಧಾರದಲ್ಲಿನ ಪಕ್ಷಪಾತವು ಸಹ ನಿಷೇಧಿಸಲ್ಪಟ್ಟಿರುತ್ತದೆಂಬುದನ್ನು ಪೇತ್ರನು ಕಲಿತುಕೊಂಡನು. ಆತನು ಅವರ ಸಂಗಡ ಮಾತಾಡುವದಕ್ಕಾರಂಭಿಸಿದಾಗ, ಹೀಗೆ ಹೇಳುತ್ತಾನೆ, "ಆಗ ಪೇತ್ರನು ಉಪದೇಶಮಾಡಲಾರಂಭಿಸಿ ಹೇಳಿದ್ದೇನಂದರೆ - ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆಂದು ಈಗ ಸಂದೇಹವಿಲ್ಲದೆ ನನಗೆ ತಿಳಿದುಬಂದಿದೆ (ಅಪೊಸ್ತಲರ ಕೃತ್ಯಗಳು 10:34, 35).

ಆದದರಿಂದ, ಯೇಸುವಿನ ಶಿಷ್ಯರೊಳಗೆ ಪೇತ್ರನಿಗೆ ಮೊಟ್ಟಮೊದಲನೆಯದಾಗಿ ಕ್ರಿಸ್ತನ ಸಮಾಧಾನಗೊಳಿಸುವ ಧ್ಯೇಯದ ಪಕ್ಷಪಾತವಿಲ್ಲದ ಸ್ವಭಾವದ ಪರಿಚಯವು ಮಾಡಲ್ಪಟ್ಟಿತ್ತು. ಸ್ಪಷ್ಟವಾಗಿರುವಂತೆ, ಆತನು ಸ್ವತಃ ಪಂಚಾಶತ್ತಮ ದಿನದಂದು ಬೋಧಿಸಿದ್ದನ್ನು ಪೂರ್ತಿಯಾಗಿ ಗ್ರಹಿಸಿಕೊಂಡಿರಲಿಲ್ಲ: "ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" (ಅಪೊಸ್ತಲರ ಕೃರತ್ಯಗಳು 2:39). ಯೇಸುವು ವೈಯಕ್ತಿಕವಾಗಿ ತನ್ನ ಶಿಷ್ಯರೊಂದಿಗೆ ಅನ್ಯಜನರು ಈ ರೀತಿಯಾಗಿ ಸ್ವೀಕರಿಸಿಕೊಳ್ಳಲ್ಪಡುವದರ ಕುರಿತು ಮಾತಾಡಿದ್ದನು (ಮತ್ತಾಯ 8:5-12; 28:18-20; ಯೋಹಾನ 10:16); ಆದರೆ, ಆತನು ಅವರಿಗೆ ಕಲಿಸಿಕೊಟ್ಟ ಬಹಳಷ್ಟು ವಿಷಯದಲ್ಲಿ ನಡೆದ ಪ್ರಕಾರವೇ, ಆತನು ಹೇಳುವದನ್ನು ಅವರು ಗ್ರಹಿಸಿಕೊಳ್ಳಲು ವಿಫಲರಾದರು ಯಾಕೆಂದರೆ ಅವರ ಮನಸ್ಸುಗಳು ಮುಚ್ಚಲ್ಪಟ್ಟಿದ್ದವು (ಮತ್ತಾಯ 15:15, 16; ಮಾರ್ಕ 8:15-21; ಲೂಕ

18:34).

ಯೆಹೂದ್ಯರ ಕಡೆಗೆ ವಿಶೇಷ ಒಲವು ಮತ್ತು ಅನ್ಯಜನರಿಗೆ ವಿರುದ್ಧ ಪಕ್ಷಪಾತವನ್ನು ಜಯಿಸುವದಕ್ಕೆ ಅಷ್ಟು ಸುಲಭವಾಗಿರಲಿಲ್ಲ, ನಾಯಕತ್ವದಲ್ಲಿರುವವರಿಗೆ ಸಹ ಅದು ಕಷ್ಟವೇ ಆಗಿತ್ತು. ದೇವರು ಪೇತ್ರನನ್ನು ಅನ್ಯಜನರಿಗೆ ದೇವರ ರಾಜ್ಯದಲ್ಲಿ ಬರುವಂತೆ ಬಾಗಲು ತೆರೆಯುವ ಹಾಗೆ ಬಳಸಿಕೊಂಡನಾದರೂ, ದೇವರು ತನಗೆ ಪ್ರಕಟಗೊಳಿಸಿದ್ದ ಸತ್ಯವನ್ನು ಹಿಡಿದುಕೊಳ್ಳಲು ಸ್ವತಃ ಪೇತ್ರನಿಗೆ ಎಷ್ಟು ಕಷ್ಟಕರವಾಗಿತ್ತೆಂಬುದನ್ನು ಗಲಾತ್ಯ 2:11–14 ವಚನಗಳು ನಮಗೆ ತಿಳಿಸುತ್ತವೆ. ಅನ್ಯಜನರೊಳಗೆ ರಾಜ್ಯವು ವಿಸ್ತರಿಸಲ್ಪಡುವದರಲ್ಲಿ ಬಾರ್ನಬನು ಮುಖ್ಯ ಪಾತ್ರವನ್ನು ವಹಿಸಿದ್ದನು; ಆದರೆ, ಒತ್ತಡದಲ್ಲಿ ಸಿಲುಕಿದವನಾಗಿ, ಆತನು ಸಹ ಸತ್ಯದಿಂದ ಹಿಂದೆ ಸರಿದಿದ್ದನು. ಪೌಲನು ಗದರಿಸಿದ್ದು ಈ ಇಬ್ಬರಿಗೂ ಪುನಃ ಬುದ್ಧಿ ತಿಳಿಯುವಂತೆ ಹಾಗೂ ಅನ್ಯಜನಾಂಗದ ಸಹೋದರರ ಅನ್ಯೋನ್ಯತೆಯೊಳಗೆ ಪುನಃ ಬರಮಾಡಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

## ಅನ್ಯಜನರ ಸಂದಿಗ್ಧತೆ (2:11-21)

ಅನ್ಯಜನರ ಕಡೆಗೆ ಕಪಟತನವನ್ನು ತೋರಿಸಿದ್ದಕ್ಕಾಗಿ ಇತರ ಯೆಹೂದಿ ಕ್ರೈಸ್ತರನ್ನು ಮುಖಾಮುಖಿಯಾಗಿ ಎದುರಿಸಬೇಕಾಗಿ ಬಂದ ನೋವುದಾಯಕ ಕಥೆಯನ್ನು ಗಲಾತ್ಯದವರೊಂದಿಗೆ ಪೌಲನು ಹಂಚಿಕೊಳ್ಳುತ್ತಾನೆ (2:11–14). ಅಂತಿಯೋಕ್ಯದಲ್ಲಿನ ಸಭೆಗೆ ಭೇಟಿ ಕೊಟ್ಟ ವೇಳೆ, ಪೇತ್ರನು ಅಲ್ಲಿ ಸ್ವಲ್ಪ ಸಮಯ ಅನ್ಯಜನಾಂಗದ ವಿಶ್ವಾಸಿಗಳೊಂದಿಗೆ ಸಾಮಾಜಿಕ ಅನ್ಯೋನ್ಯತೆಯನ್ನಿಟ್ಟುಕೊಂಡಿದ್ದನು. ಹೇಗೂ, "ಯಾಕೋಬನ ಕಡೆಯಿಂದ ಕೆಲವರು" ಅಂತಿಯೋಕ್ಯಕ್ಕೆ ಬಂದಾಗ, ಪೇತ್ರನು ಸ್ವತಃ ಅನ್ಯಜನರಿಂದ ಬೇರ್ಪಡಿಸಿಕೊಂಡನು (2:12). ಪರಿಸ್ಥಿತಿಯನ್ನು ವಿರೋಧಿಸಿದ ಪೌಲನು ಎಲ್ಲರ ಮುಂದೆಯೇ ಪೇತ್ರನನ್ನು ಕಠಿಣವಾಗಿ ಖಂಡಿಸಿದನು.

ಈ ವ್ಯಕ್ತಿಗಳು ಯೆರೂಸಲೇಮಿನಿಂದ ಬಂದಿದ್ದರೆಂಬುದು ವಾಸ್ತವಾಂಶವಾಗಿರುತ್ತದೆ, ಅಲ್ಲಿ ಯಾಕೋಬನನ್ನು ಸಭೆಯ ಹೆಗ್ಗಳಿಕೆ ಹೊಂದಿರುವ ನಾಯಕನೆಂದು ಪರಿಗಣಿಸಲಾಗಿತ್ತು (2:9). ಹೇಗೂ, ಯಾಕೋಬನ ಹೆಸರು ಅಂತಿಯೋಕ್ಯದಲ್ಲಿ ಬಿಕ್ಕಟ್ಟನ್ನು ಸೃಷ್ಟಿಸಿದವರೊಂದಿಗೆ ಜೋಡಿಸಲ್ಪಟ್ಟಿದೆ ಎಂಬ ಒಂದೇ ಕಾರಣಕ್ಕಾಗಿ ಯಾಕೋಬನು ಒಂದು ರೀತಿಯಲ್ಲಿ ಅದಕ್ಕೆ ಜವಾಬ್ದಾರನೆಂಬುದಾಗಿ ಅವಸರದಿಂದ ಒಬ್ಬನು ತೀರ್ಮಾನಕ್ಕೆ ಬರಕೂಡದು. ಅಪೊಸ್ತಲರು ಹಾಗೂ ಹಿರಿಯರನ್ನೊಳಗೊಂಡ ಯೆರೂಸಲೇಮಿನ ಸಮಾಲೋಚನಾ ಸಭೆಯಲ್ಲಿ, ಪೌಲ ಮತ್ತು ಬಾರ್ನಬರ ಪರವಾಗಿ ಪ್ರಮುಖವಾಗಿ ಯಾಕೋಬನೇ ವಾದಿಸಿದ್ದನು. ಶಾಸ್ತ್ರಗಳನ್ನು ಉಪಯೋಗಿಸಿಕೊಂಡು, ಮೊದಲ ಪ್ರಯಾಣದಲ್ಲಿ ಇವರಿಬ್ಬರು ಗೆದ್ದುಕೊಂಡಿದ್ದ ಅನ್ಯಜನರ ನಡುವಿನ ಸೇವೆಯನ್ನು ಅನುಮೋದಿಸಿದ್ದನು, ಮತ್ತು ಸಭೆಗಳಲ್ಲಿ ಅನ್ಯಜನರ ವಿಷಯವಾಗಿ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಸಲಹೆಯನ್ನು ಸಹ ಕೊಟ್ಟನು (ಅಪೊಸ್ತಲರ ಕೃತ್ಯಗಳು 15:13–21). ಅಪೊಸ್ತಲರು ಹಾಗೂ ಹಿರಿಯರು "ಅಂತಿಯೋಕ್ಯ ಸಿರಿಯ ಕಿಲಿಕ್ಯ ಸೀಮೆಗಳಲ್ಲಿ ವಾಸಿಸುವ" ಅನ್ಯಜನಾಂಗದ ಸಹೋದರರಿಗೆ ಬರೆಯುವ ವೇಳೆ, ಅವರು ಈ ಮಾತುಗಳನ್ನು ಸೇರಿಸಿದ್ದರು: ". . . ಅದಾಗಿ ನಮ್ಮೊಳಗಿಂದ ಹೋದ ಕೆಲವರು *ನಮ್ಮಿಂದ ಏನೂ ಅಪ್ಪಣೆಹೊಂದದೆ* ತಮ್ಮ ಮಾತುಗಳಿಂದ ನಿಮ್ಮಲ್ಲಿ ಅಸಮಾಧಾನವನ್ನು ಹುಟ್ಟಿಸಿ ನಿಮ್ಮ ಮನಸ್ಸುಗಳನ್ನು ಕಳವಳಗೊಳಿಸಿದ್ದಾರೆಂಬದನ್ನು ಕೇಳಿದ್ದರಿಂದ" (ಅಪೊಸ್ತಲರ ಕೃತ್ಯಗಳು 15:23, 24; ಒತ್ತಿ ಹೇಳಿದ್ದು ನನ್ನದು).

ಅಂತಿಯೋಕ್ಯದಲ್ಲಿ ಪೇತ್ರನ ವರ್ತನೆಯು ಅಪ್ಪಟ ಕಪಟತನವಾಗಿತ್ತು - ಪೌಲನ ದೃಷ್ಟಿಕೋನದಲ್ಲಿ. ಅಂತೂ, ಪ್ರೇರಣೆಯ ಮೂಲಕವಾಗಿ, ಪೇತ್ರನು ದೇವರ ವಾಗ್ದಾನವು "ದೂರವಾಗಿರುವವರೆಲ್ಲರಿಗೂ" ಲಭ್ಯವಿರುತ್ತದೆಂದು ಮಾತಾಡಿದ್ದನು (ಅಪೊಸ್ತಲರ ಕೃತ್ಯಗಳು 2:39). ಅಷ್ಟುಮಾತ್ರವಲ್ಲದೆ, ದೇವರ ಎಡೆಬಿಡದ ಪ್ರೇರಣೆಯಿಂದಾಗಿ, ಕೊರ್ನೇಲ್ಯನ ಮನೆಗೆ ಹೋಗಿ ಮೊದಲ ಅನ್ಯಜನರಿಗೆ ಸುವಾರ್ತೆಯನ್ನು ಸಾರಿದವನು ಆತನೇ ಆಗಿದ್ದನು (ಅಪೊಸ್ತಲರ ಕೃತ್ಯಗಳು 10). ಯೆರೂಸಲೇಮಿನಲ್ಲಿದ್ದ ಯೆಹೂದಿ ಕ್ರೈಸ್ತರು ಕೊರ್ನೇಲ್ಯ ಹಾಗೂ ಆತನ ಮನೆಯವರಿಗೆ ದೀಕ್ಷಾಸ್ನಾನ ಮಾಡಿಸಿದ್ದರ ಕುರಿತು ಪೇತ್ರನು ಪಟ್ಟಣಕ್ಕೆ ಹಿಂದಿರುಗಿ ಬಂದ ಕೂಡಲೇ ವಿರೋಧಿಸಿದ್ದರು. ಅವರು ಆತನ ಮೇಲೆ ಆರೋಪ ಮಾಡುತ್ತಾ ಹೀಗೆ ಹೇಳಿದ್ದರು, "ನೀನು ಸುನ್ನತಿಯಿಲ್ಲದವರಲ್ಲಿ ಸೇರಿ ಅವರ ಸಂಗಡ ಊಟಮಾಡಿದೆಯಲ್ಲಾ" (ಅಪೊಸ್ತಲರ ಕೃತ್ಯಗಳು 11:3). ಅದಕ್ಕೆ ಪ್ರತ್ಯುತ್ತರವಾಗಿ, ಪೇತ್ರನು ತನ್ನ ಕೃತ್ಯಗಳನ್ನು ಸಮರ್ಥಿಸಿಕೊಂಡಿದ್ದನು, ತಾನು ಅನ್ಯಜನರ ಬಳಿಗೆ ದೈವಿಕವಾಗಿ ನಡಿಸಲ್ಪಟ್ಟಿದ್ದನು ಮತ್ತು ಅವರು ಪವಿತ್ರಾತ್ಮನ ವರವನ್ನು (ಆರಂಭದಲ್ಲಿ ಅಪೊಸ್ತಲರು ಸ್ವೀಕರಿಸಿಕೊಂಡಿದ್ದ ರೀತಿಯಲ್ಲಿಯೇ) ಸ್ವೀಕರಿಸಿಕೊಂಡರು ಎಂಬುದಾಗಿ ವಿವರಿಸಿದನು. ಪೇತ್ರನ ವಾದಗಳು ಪರಿಣಾಮಕಾರಿಯಾಗಿದ್ದವು, ಆತ ವಿರೋಧಿಗಳನ್ನು "ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ" ಎಂಬ ತೀರ್ಮಾನಕ್ಕೆ ಬರುವಂತೆ ನಡಿಸಿದ್ದವು (ಅಪೊಸ್ತಲರ ಕೃತ್ಯಗಳು 11:4-18).

ಪೇತ್ರನು ಯೆರೂಸಲೇಮಿನ ಸಭೆಯಲ್ಲಿ "ಸ್ತಂಭ" (ಗಲಾತ್ಯ 2:9) ಆಗಿದ್ದನಾದ್ದರಿಂದ, ಆತನ ಕ್ರಿಯೆಗಳು ಬೇರೆಯವರ ಮೇಲೆ ಪ್ರಭಾವವನ್ನು ಬೀರುವವುಗಳಾಗಿದ್ದವು. ಹೇಗೂ, ಅಂತಿಯೋಕ್ಯದಲ್ಲಿನ ಸಂದರ್ಭದಲ್ಲಿ, ಆ ಪ್ರಭಾವವು ನಕಾರಾತ್ಮಕ ರೀತಿಯಲ್ಲಿ ಬೀರಿತ್ತು. ಪೌಲನು ಈ ವಿಧದಲ್ಲಿ ಬರೆಯುವ ವೇಳೆ ಆತನಿಗೆ ನೋವುಂಟಾಗಿರಬಹುದಾಗಿದೆ, "ಇದಲ್ಲದೆ ಮಿಕ್ಕಾದ ಯೆಹೂದ್ಯರೂ ಅವನೊಂದಿಗೆ ಸೇರಿ ಹಾಗೆಯೇ ಕಪಟ ಮಾಡಿದರು" (2:13). ವಾಕ್ಯಭಾಗದಲ್ಲಿ ಇದು ಪ್ರಸ್ತಾಪಿಸಲ್ಪಟ್ಟಿಲ್ಲವಾದರೂ, ಪೌಲನು ಆತನ ಮಿತ್ರನ ಕಪಟತನವನ್ನು ನೋಡಿದಾಗ ಆತನ ಮುಖದಲ್ಲಿ ಒಂದು ಕಳವಳಕಾರಿ ನೋಟವು ಕಂಡಿದ್ದನ್ನು ನಾವು ಅನಿವಾರ್ಯವಾಗಿ ಕಾಣಲೇ ಬೇಕಾಗಿತ್ತು.

ಅಂತಿಯೋಕ್ಯದಲ್ಲಿ ಬಾರ್ನಬನ ವಿಷಯವಾಗಿ ಪೌಲನಿಗೆ ಯಾವದು ಅತ್ಯಂಥ ನೋವುಂಟು ಮಾಡಿರಬಹುದೆಂದರೆ, ಆ ಅಸಂತೋಷಕರವಾದ ದಿನದಲ್ಲಿ ಯಾವನೇ ಹಾಜರಿದ್ದರೂ ಆತನು ಅನ್ಯಜನರೊಂದಿಗೆ ಬೆಂಬಲವಾಗಿ ನಿಂತು ಸಭೆಯಲ್ಲಿ ಅವರಿಗಿರುವ ಸ್ಥಾನದ ಕುರಿತು ಸಮರ್ಥಿಸಿಕೊಂಡಿರುತ್ತಿದ್ದನು, ಬಾರ್ನಬನು ಅದನ್ನೇ ಮಾಡಿರಬೇಕಿತ್ತು ಎಂಬುದೆ. ಪೌಲನ ಜೊತೆಯಾಗಿ, ಬಾರ್ನಬನು ವಿಶೇಷವಾಗಿ "[ಪವಿತ್ರಾತ್ಮನು] ಕರೆದ ಕೆಲಸಕ್ಕಾಗಿ . . . ಪ್ರತ್ಯೇಕಿಸ"ಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 13:2). ಅವರ ಕೆಲಸ ಪ್ರಮುಖ ಲಕ್ಷ್ಯವು ಅನ್ಯಜನರ ಕಡೆಗೆ ಆಗಿರಲಿತ್ತು. "ಯಾಕೋಬ ಕೇಫ ಯೋಹಾನರು" ಪೌಲ ಮತ್ತು ಬಾರ್ನಬರಿಗೆ "ಐಕ್ಯವನ್ನು ತೋರಿಸುವದಕ್ಕಾಗಿ . . . ಬಲಗೈ ಕೊಟ್ಟು - ನೀವು ಅನ್ಯಜನರ ಬಳಿಗೆ ಹೋಗಿರಿ, ನಾವು ಸುನ್ನತಿಯವರ ಬಳಿಗೆ ಹೋಗುತ್ತೇವೆ" ಎಂದಿದ್ದರು (2:9).[46]

ಅಂತಿಯೋಕ್ಯದಲ್ಲಿನ ಬಿಕ್ಕಟ್ಟು ಈ "ಯಾಕೋಬನ ಕಡೆಯಿಂದ ಕೆಲವರು" ಬಂದ ಸಂದರ್ಭದಲ್ಲಿ ಉಂಟಾಗಿದ್ದು ಅನ್ಯಜನರೊಂದಿಗೆ ಊಟ ಮಾಡುವ ವಿಷಯದಲ್ಲಾಗಿತ್ತು. ಈ "ಕೆಲವರು" ಸಹೋದರರು, ಯೆರೂಸಲೇಮಿನ ಸಭೆಯ ಸದಸ್ಯರು ಆಗಿದ್ದರು ಅವರು

ವಿಶ್ವಾಸಿಗಳಾದ ಯೆಹೂದ್ಯರಾಗಿದ್ದರು. ಪೌಲ, ಬಾರ್ನಬ, ಮತ್ತು ಇತರರು ಅನುಭವಿಸಿದ ಬಹಳಷ್ಟು ಹಿಂಸೆಯು ವಿಶ್ವಾಸಿಗಳಲ್ಲದ ಯೆಹೂದ್ಯರಿಂದ ಪ್ರಚೋದಿಸಲ್ಪಟ್ಟಿತಾದರೂ, ಅಂತಿಯೋಕ್ಯದಲ್ಲಿನ ಸಮಸ್ಯೆಯು ಸ್ವಭಾವದಲ್ಲಿ ಅಪ್ಪಟ "ಸಭೆಯ ಆಂತರೀಕ" ವಿಚಾರವಾಗಿತ್ತು.

ಪಂಚಾಶತ್ತಮ ದಿನದ ನಂತರದ ಅನೇಕ ವರ್ಷಗಳ ತನಕವೂ, ಸುವಾರ್ತೆಯು ಯೆಹೂದ್ಯರಿಗೆ ಮಾತ್ರವೇ ಸಾರಲ್ಪಡುತ್ತಿತ್ತು. ಕೊರ್ನೇಲ್ಯನ ಪರಿವರ್ತನೆಯ ಬಳಿಕ ಸಹ, ಇದು ಇನ್ನೂ ಸ್ವಲ್ಪ ಕಾಲದ ವರೆಗೆ ಮುಂದುವರೆದಿತ್ತು, ಅದರ ಪುರಾವೆಯನ್ನು ಅಪೊಸ್ತಲರ ಕೃತ್ಯಗಳು 11:19ರಲ್ಲಿ ಕಾಣಬಹುದು. ಹೇಗೂ, ಸ್ತೇಫನನು ರಕ್ತಸಾಕ್ಷಿಯಾಗಿ ಕೊಲ್ಲಲ್ಪಟ್ಟ ಬಳಿಕ ಮತ್ತು ಇನ್ನುಷ್ಟು ಹಿಂಸೆಯ ಫಲಿತವಾಗಿ ಶಿಷ್ಯರು ಚದುರಿಸಲ್ಪಟ್ಟ ಬಳಿಕ, ಕೆಲವರು "ಯೆಹೂದ್ಯರಿಗೇ ಹೊರತು ಮತ್ತಾರಿಗೂ ವಾಕ್ಯವನ್ನು ಹೇಳದೆ ಫೊಯಿನಿಕೆ ಕುಪ್ರ ಅಂತಿಯೋಕ್ಯ ಪ್ರಾಂತ್ಯಗಳವರೆಗೂ ಸಂಚರಿಸಿದರು" (ಅಪೊಸ್ತಲರ ಕೃತ್ಯಗಳು 11:19). ಈ ಹಂತದಲ್ಲಿ, ಒಂದು ಅತ್ಯಂಥ ಮಹತ್ವಪೂರ್ಣವಾದ ಸಂಗತಿಯೊಂದು ಸಂಭವಿಸಿತ್ತು. ಲೂಕನು ಹೀಗೆ ವರದಿ ಮಾಡಿದನು,

> ಅವರಲ್ಲಿ ಕುಪ್ರದ್ವೀಪದವರು ಕೆಲವರೂ ಕುರೇನ್ಯದವರು ಕೆಲವರೂ ಅಂತಿಯೋಕ್ಯಕ್ಕೆ ಬಂದು ಗ್ರೀಕರ[47] ಸಂಗಡಲೂ ಮಾತಾಡಿ ಕರ್ತನಾದ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದರು. ಕರ್ತನ ಹಸ್ತವು ಅವರಿಗೆ ಸಹಾಯವಾದ್ದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು (ಅಪೊಸ್ತಲರ ಕೃತ್ಯಗಳು 11:20, 21).

ಈ ಬೆಳವಣಿಗೆಯು ಆದಿ ಸಭೆಯಲ್ಲಿ ಒಂದು ಬೃಹತ್ ತಿರುವು ಉಂಟಾಗುವ ಸೂಚನೆಯನ್ನು ನೀಡಿತ್ತು ಮತ್ತು ಯೆಹೂದಿ ಕ್ರೈಸ್ತರ ಮೇಲೆ ಒಂದು ಭೂಕಂಪದ ಪರಿಣಾಮವನ್ನುಂಟು ಮಾಡಿತ್ತು. ಹೆಚ್ಚುಕಡಿಮೆ ಒಂದೂವರೆ ಸಹಸ್ರ ವರ್ಷಗಳ ಕಾಲ, ಯೆಹೂದ್ಯರು ದೇವರ ಪ್ರತ್ಯೇಕ ಜನಾಂಗವಾಗಿರುವ ಭಾಗ್ಯವನ್ನು ಅನುಭವಿಸಿದ್ದರು (ವಿಮೋಚನಕಾಂಡ 19:1-8). ದೇವರು ಬೇರೆ ಜನಾಂಗಗಳಿಗೆ ಪ್ರೀತಿ ತೋರಿಸುವದನ್ನು ಗ್ರಹಿಸಿಕೊಳ್ಳುವದು ಕೆಲವು ಯೆಹೂದ್ಯರಿಗೆ ಕಷ್ಟಕರವಾಗಿತ್ತದೆಂಬುದರಲ್ಲಿ ಆಶ್ಚರ್ಯವೇನಿಲ್ಲ! ಅದಕ್ಕಿಂತ ಹೆಚ್ಚಾಗಿ, ಅನ್ಯಜನರು ಯೆಹೂದಿಮತಕ್ಕೆ ಮತಾಂತರಗೊಳ್ಳದೆಯೇ ಕ್ರಿಸ್ತನ ಮೂಲಕ ಮಾತ್ರವೇ ರಕ್ಷಿಸಲ್ಪಡಬಲ್ಲರು ಎಂಬುದನ್ನು ಗ್ರಹಿಸಿಕೊಳ್ಳುವದು ಕೆಲವು ಯೆಹೂದ್ಯರಿಗೆ ಕಷ್ಟಕರವಾಗಿತ್ತು (ಅಪೊಸ್ತಲರ ಕೃತ್ಯಗಳು 15:1). ಈ ಕಾರಣದಿಂದಲೇ ಕ್ರಿಸ್ತನ ಒಂದೇ ದೇಹವಾಗಿ ಯೆಹೂದ್ಯರನ್ನು ಮತ್ತು ಅನ್ಯಜನರನ್ನು ಒಂದುಗೂಡಿಸುವದು ಆದಿ ಸಭೆಯು ಎದುರಿಸಿದ ಅತ್ಯಂಥ ಪ್ರಮುಖವಾದ ಸಮಸ್ಯೆಯಾಗಿತ್ತು.

---

## ಅಡಿಟಿಪ್ಪಣಿಗಳು

[1]ಮೂರನೆಯ ಬಾರಿಗೆ, ಪೌಲನು ತನ್ನ ಅಪೊಸ್ತಲತನ ಪರವಾಗಿ ವಾದಿಸಿಕೊಳ್ಳುತ್ತಿರುವ ವೇಳೆ "ಆದ ಮೇಲೆ" (ἔπειτα, *epeita*) ಎಂಬುದು ಈ ಪತ್ರಿಕೆಯ ಈ ಭಾಗದೊಳಗೆ ಕಾಣಿಸಿಕೊಳ್ಳುತ್ತದೆ (ನೋಡಿರಿ 1:18, 21). [2]ನೋಡಿರಿ ಅಪೊಸ್ತಲರ ಕೃತ್ಯಗಳು 4:36, 37; 9:27; 11:22-30; 13:1-14:28; 15:2-4, 12, 22, 36-41. [3]ನೋಡಿರಿ 2 ಕೊರಿಂಥ 2:13; 7:6, 7, 13-15; 8:6, 16, 17, 23; 12:18; 2 ತಿಮೊಥೆಯನಿಗೆ 4:10; ತೀತನು 1:4, 5. [4]Carolyn Osiek, *Galatians*, New Testament Message (Wilmington, Del.: Michael Glazier, 1980), 19. [5]ಇದು 2:6b, 9ರಲ್ಲಿ ಕಂಡು ಬರುವ ವಿಧವಾಗಿದೆ, ಅದೇ ರೀತಿಯ ವಿಧಗಳು 2:2, 6aರಲ್ಲಿ ಕಾಣಿಸುತ್ತವೆ. [6]Josephus *Wars* 3.9.8; 4.3.4, 9. [7]J. B. Lightfoot, *The Epistle of St. Paul to the Galatians*, Classic Commentary Library

(Grand Rapids, Mich.: Zondervan Publishing House, 1957), 108; Ignatius *Polycarp* 3.1; Plato *Apology* 41E; *Georgias* 472A; Xenophon *Cyropaedia* 7.1.41. [8]Richard N. Longenecker, *Galatians*, Word Biblical Commentary, vol. 41 (Nashville: Thomas Nelson Publishers, 1990), 51. [9]Ben Witherington III, *Grace in Galatia: A Commentary on St Paul's Letter to the Galatians* (Grand Rapids, Mich.: Wm. B. Eerdmans Publishing Co., 1998). See Polybius *Histories* 1.18.3; 2.7.8; Plutarch *Moralia* 261B. [10]Ibid.

[11]ನೋಡಿರಿ 2:4; 3:28; 4:22, 23, 26, 30, 31; 5:1 [ಎರಡು ಸಾರಿ], 13 [ಎರಡು ಸಾರಿ]. [12]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 56. [13]Bruce M. Metzger, *A Textual Commentary on the Greek New Testament*, 2nd ed. (Stuttgart: German Bible Society, 1994), 522–23. See Tertullian *Against Marcion* 5.3; Irenaeus *Against Heresies* 3.13.3. [14]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 118. [15]Ibid., 123. [16]ಕೆಲವು ಪಾಶ್ಚಾತ್ಯ ಹಸ್ತಪ್ರತಿಗಳು ಕ್ರಮಾನುಸಾರವನ್ನು ಹಿಮ್ಮೊಗವಾಗಿ ಉಲ್ಲೇಖಿಸುತ್ತವೆ, ಪಟ್ಟಿಯಲ್ಲಿ ಪೇತ್ರನನ್ನು ಮೊದಲಲ್ಲಿ ಪ್ರಸ್ತಾಪಿಸುತ್ತವೆ. (Metzger, 523.) [17]Lightfoot, 109. ನೋಡಿರಿ Talmud *Berakoth* 28b. [18]Josephus *Antiquities* 18.9.3; 20.3.2; *Wars* 6.6.1, 4; 6.8.2; Tacitus *Histories* 1.54; 2.8; Diodorus Siculus *Library of History* 16.43.3. [19]R. Alan Cole, *The Epistle of Paul to the Galatians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1965), 69. [20]ಅನಂತರದಲ್ಲಿ ಹುಟ್ಟಿಕೊಂಡ ಯೆಹೂದಿ-ಕ್ರೈಸ್ತ ಪಂಥವಾದ, ದಿ ಎಬಿಯೋನೈಟ್ಸ್, ಇದರರ್ಥವು "ಬಡವರು." (Bruce, 126.)

[21]ಗ್ರೀಕ್ ಪದ χρηματίζω (*chrēmatizō*) ಎಂಬುದರ ಸಂಭಾವ್ಯ ಅರ್ಥವು ಅವರು ಈ ಹೆಸರಿನಿಂದ "ದೈವಿಕವಾಗಿ ಕರೆಯಲ್ಪಟ್ಟರು." "ಕ್ರೈಸ್ತ" ಎಂಬುದು ದೇವರಿಂದ ಆರಿಸಿಕೊಳ್ಳಲ್ಪಟ್ಟ ಹೆಸರಾಗಿತ್ತು. [22]ಒರೊಂಟೆಸ ನದಿಯು ಪಟ್ಟಣದ ಮೂಲಕವಾಗಿ ಹಾದುಹೋಗಿ ಒಂದು ದ್ವೀಪವನ್ನು ನಿರ್ಮಿಸುವದಾಗಿ ತೋರಿಸುವ, ಅಂತಿಯೋಕ್ಯದ ನಕ್ಷೆಗಾಗಿ, ನೋಡಿರಿ Glanville Downey, "Antioch (Syrian)," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:143. [23]Ibid., 1:142. [24]Cole, 73. [25]ಹಲವಾರು ಸಂದರ್ಭಗಳಲ್ಲಿ, Josephusನು ಇದನ್ನು "ದೋಷಿಯಾಗಿ ನಿಲ್ಲು" ಎಂಬರ್ಥದೊಂದಿಗೆ ಬಳಸಿದನು. (Josephus *Wars* 1.32.3; 2.8.6; 7.5.6; 7.8.6.) [26]Witherington, 154. ನೋಡಿರಿ Polybius *Histories* 1.16.10; 6.40.14; 7.17.1; Plutarch *Demetrius* 47.4. [27]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 63. [28]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 976. See Polybius *Histories* 3.52.6; Plutarch *Caius Marius* 14.8; Josephus *Wars* 1.29.1; 5.7.4. [29]Leon Morris, *Galatians: Paul's Charter of Christian Freedom* (Downers Grove, Ill.: Inter-Varsity Press, 1996), 81. [30]Cole, 77.

[31]ನೋಡಿರಿ Josephus *Wars* 2.17.10; Ignatius *Magnesians* 10.3. [32]ಪೌಲನು ಈ ಅಂಶಗಳ ಕುರಿತು ಹೆಚ್ಚು ಸಂಪೂರ್ಣವಾಗಿ ರೋಮಾ 1-3 ಅಧ್ಯಾಯಗಳಲ್ಲಿ ಚರ್ಚಿಸಿದನು. [33]Longenecker, 90. [34]Bruce, 142. [35]Johnson, 72. [36]ಪೌಲನು 1 ಕೊರಿಂಥ 15:31ರಲ್ಲಿ ಹೀಗೆ ಬರೆದನು, "ನಾನು ದಿನಾಲು ಸಾಯುತ್ತಲಿದ್ದೇನೆ." ಹೇಗೂ, ಆ ಸನ್ನಿವೇಶದಲ್ಲಿ, ಕೇವಲ ಪಾಪದ ಪಾಲಿಗೆ ಸಾಯುವದಕ್ಕಿಂತಲೂ ಅಧಿಕವಾದದ್ದು ಇರುತ್ತದೆ; ಅದು ಕ್ರಿಸ್ತನ ಅಪೊಸ್ತಲನಾಗಿ ಪೌಲನು ಎದುರಿಸಿದ ಹಲವಾರು ಅಪಾಯಗಳನ್ನು ಒಳಗೊಂಡಿರುತ್ತದೆ (ನೋಡಿರಿ 2 ಕೊರಿಂಥ 1:8-10; 11:23-28). [37]Witherington, 192. [38]Bauer, 490. [39]NASB ತರ್ಜುಮೆಯು ಅಪೊಸ್ತಲರ ಕೃತ್ಯಗಳು 15:2ರಲ್ಲಿ "ಸಹೋದರರು" ಎಂಬುದನ್ನು ವಿಷಯವಾಗಿ ಸೇರ್ಪಡೆಗೊಳಿಸುತ್ತದೆ. [40]ಬಾರ್ನಬನ ವಿಶ್ವಾಸರ್ಹತೆಗೆ ಇನ್ನೊಂದು ಉದಾಹರಣೆಯು ಅಪೊಸ್ತಲರ ಕೃತ್ಯಗಳು 11:27-30ರಲ್ಲಿ ಕಾಣಿಸಿಕೊಳ್ಳುತ್ತದೆ. ಆ ಸನ್ನಿವೇಶದಲ್ಲಿ, ಅಂತಿಯೋಕ್ಯದ ಸಹೋದರರು, ತಾವು ಯೆರೂಸಲೇಮಿನಲ್ಲಿದ್ದ ಹಿರಿಯರಿಗೆ ಕಳುಹಿಸುತ್ತಿದ್ದ ಬರಗಾಲದ ಪರಿಹಾರ ಹಣವನ್ನು ತೆಗೆದುಕೊಂಡು ಹೋಗುವದಕ್ಕೆ, ಪೌಲನ ಜೊತೆಯಲ್ಲಿ ಬಾರ್ನಬನನ್ನು ಆಯ್ಕೆ ಮಾಡಿಕೊಂಡರು.

[41]ನೋಡಿರಿ ರೋಮಾ 14:10, 11; 1 ಪೇತ್ರ 4:17, 18; ಪ್ರಕಟನೆ 20:11-15; 22:12. [42]ಇದು ಯಾವ ವಿಧದಲ್ಲಿಯೂ ಯೋಹಾನ 5:24ರಲ್ಲಿ ಯೇಸುವು ನುಡಿದ ಮಾತುಗಳ ಮಹತ್ವವನ್ನು ತಗ್ಗಿಸುವದಿಲ್ಲ: "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ.

ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ." ಈ ವಾಕ್ಯಭಾಗದಲ್ಲಿ "ತೀರ್ಪು" ಎಂಬ ಪದವು κρίσις (*krisis*), ಅದು ಅನೇಕ ಅರ್ಥಗಳನ್ನು ಹೊಂದಿರುತ್ತದೆ, ಅವುಗಳಲ್ಲಿ "ದಂಡನೆ" ಅಥವಾ "ಅಪರಾಧ ನಿರ್ಣಯ" ಎಂಬವುಗಳು ಸೇರಿರುತ್ತವೆ. ನಾವು ಮತ್ತೊಬ್ಬರಿಗೆ ವಿರುದ್ಧವಾಗಿ ಬಳಸುವದಕ್ಕಾಗಿ ಶಾಸ್ತ್ರಗಳನ್ನು ಎಂದಿಗೂ ವ್ಯಾಖ್ಯಾನಿಸಬಾರದು (ಅಥವಾ ಅನುವಾದಿಸಬಾರದು). ಈ ಮುಂಚೆ ಹೇಳಿದ ಹಾಗೆ, "ಕಡೇ ದಿನದಲ್ಲಿ" (ನ್ಯಾಯತೀರ್ಪಿನ ದಿನ) ಎಲ್ಲರೂ ಕರ್ತನ ಮುಂದೆ ನಿಲ್ಲುವರು; ಆದರೆ ವಿಶ್ವಾಸಿಯು, ನ್ಯಾಯತೀರ್ಪಿನ ಪ್ರಕ್ರಿಯೆಯೊಳಗೆ ಸೇರಿಸಲ್ಪಡುವವನಾದರೂ, ಆತನು ಅಪರಾಧಿಯೆಂದು ನಿರ್ಣಯಿಸಲ್ಪಡುವದಿಲ್ಲ, ಯಾಕೆಂದರೆ ನಂಬಿಕೆಯ ಮೂಲಕವಾಗಿ ಆತನು ಈಗಾಗಲೇ ಮರಣದಿಂದ ಪಾರಾಗಿ ಜೀವದೊಳಗೆ ಸೇರಿದವನಾಗಿರುತ್ತಾನಷ್ಟೆ (ಯೋಹಾನ 3:16-19, 36). [43]ಪ್ರಕಟನೆ 12:17ರಲ್ಲಿ, ಆ ಮಾತುಗಳಿಗೆ "ಯೇಸುವಿನಿಂದ ಹುಟ್ಟಿದ ಸಾಕ್ಷಿ" ಎಂದು ಅನುವಾದವನ್ನು ಮಾಡಬಹುದಾಗಿದೆ (J. W. Roberts, *The Revelation to John (the Apocalypse),* The Living Word Commentary [Austin, Tex.: Sweet Publishing Co., 1974], 106.) [44]ಉದಾಹರಣೆಗೆ, 1 ಕೊರಿಂಥ 15:51 ಮತ್ತು ಎಫೆಸ 5:32ರಲ್ಲಿ ಇನ್ನೂ ಎರಡು ಮರ್ಮಗಳ ಬಗ್ಗೆ ತಿಳಿಯಪಡಿಸಲಾಗಿದೆ. [45]ನೋಡಿರಿ ಧರ್ಮೋಪದೇಶಕಾಂಡ 1:17; 2 ಪೂರ್ವಕಾಲವೃತ್ತಾಂತ 19:7; ಎಫೆಸ 6:9; ಕೊಲೊಸ್ಸೆ 3:25; ಯಾಕೋಬ 2:1, 9. [46]ಪೌಲನು ಅಪೊಸ್ತಲನಾಗಿ ತನಗಿರುವ ಸ್ಥಾನಮಾನವನ್ನು ಪೇತ್ರನ ಅಥವಾ ಕರ್ತನಲ್ಲಿ ಆತನಿಗಿಂತ ಮುಂಚೆ ಇದ್ದ ಬೇರೆ ಯಾರ ಸ್ಥಾನಮಾನಕ್ಕಿಂತಲೂ ಕಡಿಮೆಯೆಂದು ಭಾವಿಸಿಕೊಳ್ಳಲಿಲ್ಲ (2:6-9). 2 ಕೊರಿಂಥ 11: 5ರಲ್ಲಿ ಆತನು ಇನ್ನೂ ಹೆಚ್ಚು ಖಡಾಖಂಡಿತವಾಗಿ ಮಾತಾಡಿದ್ದನು: "ಅತಿಶ್ರೇಷ್ಠರಾದ ಅಪೊಸ್ತಲರು ಅನ್ನಿಸಿಕೊಳ್ಳುವ ಅವರಿಗಿಂತ ನಾನು ಒಂದರಲ್ಲಾದರೂ ಕಡಿಮೆಯಾದವನಲ್ಲವೆಂದು ಎಣಿಸುತ್ತೇನೆ" (ಅಥವಾ "ಸರ್ವೋಚ್ಚ-ಅಪೊಸ್ತಲರು"; NIV). [47]"ಗ್ರೀಕರು" (Ἕλλην, *Hellēn* ಎಂಬದರಿಂದ ಬಂದದ್ದು) ಎಂಬ ಪದವು ಅಕ್ಷರಶಃ ಗ್ರೀಕ್ ಪದ್ಧತಿಗಳು ಹಾಗೂ ಸಂಸ್ಕೃತಿಗನುಸಾರವಾಗಿ ಜೀವಿಸುವವರನ್ನು ಸೂಚಿಸುತ್ತದೆ.